
# ಅಖಿಲ ಭಾರತ ಪತ್ರಿಕೆ

## ಮೇ 2024



# ಪ್ರಳಯ

ಬೆಲೆ : 15/-



ಫೋಟೊ: ಇಮೇಜಿಂಗ್ ಸಾವಿತ್ರಿ

ದುರ್ಬುದ್ಧಿಯಲ್ಲಿ ಆ ಫಳಿಗೆಯೊಂದು ಉಧ್ವಸ್ಥಗೊಳಿಸಿ ಇರಿದು
ಶತಮಾನಗಳಲಿ ಸಂರಚನೆಗೊಂಡ ಸಾಕಾರಗಳನು ಮುರಿದು.

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 6 ರೇಣು 2 ಪುಟ 440)**

**ಅಖಿಲ ಭಾರತ ಪತ್ರಿಕೆ**
**ಮೇ 2024**

ಸಂಪುಟ: 34 ಸಂಚಿಕೆ: 05

## ಪರಿವಿಡಿ

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ:**
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

# ಪ್ರಳಯ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಮನುಕುಲದ ನಾಲ್ಕು ಯುಗಗಳು** 4
ಅನು: ಪುಟ್ಟು ಕುಲಕರ್ಣಿ

**ಭೂತಕಾಲ** 8
ಅನು: ಪ್ರವೀಣ ಪಾಟೀಲ

**ವರ್ತಮಾನ** 12
ಅನು: ವಿಶಾಲಾಕ್ಷೀ ಸತ್ಯನ್
ಅನು: ಡಾ॥ ಮಹಾದೇವ ಸಕ್ರಿ

**ಭವಿಷ್ಯ** 37
ಅನು: ಪುಟ್ಟು ಕುಲಕರ್ಣಿ


**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 43
ಅನು: ಜಾನ್ವಿ

**ಶ್ರೀ ಅರವಿಂದರ 'ಪ್ರೇಮ ಮತ್ತು ಮೃತ್ಯು'** 57
ಅನು: ಸಮಷ್ಟಿ

**ವಾರ್ತಾಪತ್ರ** 76

# ಸಂಪಾದಕರ ಟಿಪ್ಪಣಿ

ಈ ಯುಗದ ಪ್ರಾರಂಭದಿಂದಲೂ ಸರ್ವೇಸಾಮಾನ್ಯವಾಗಿ ಇರುವ ವಿಷಯವೆಂದರೆ 'ಪ್ರಳಯದ ಕುರಿತು ಇರುವ ಪ್ರವಾದಿ ಸ್ವರೂಪದ ಹೇಳಿಕೆಗಳು'. ಆದರ ಜೊತೆಜೊತೆಗೇ 'ಆಗಮಿಸಲಿರುವ ನವಯುಗ'ದ ಕುರಿತು ಇರುವ ವಿಚಾರಗಳಲ್ಲಿ – ಸತ್ಯಯುಗದ ಆಗಮನದ ಕುರಿತು – ಚಿಂತನಗಳು ರೂಪಿತಗೊಂಡಿವೆ. ಇಲ್ಲಿ ಪ್ರತಿಪಾದಿತಗೊಳ್ಳುತ್ತಿರುವ ಎರಡೂ ಚಿಂತನಗಳಲ್ಲಿ ಬಹುತೇಕವಾಗಿ ಆಂಶಿಕ ಸತ್ಯವು ಅಡಗಿದೆ. ಈ ರೀತಿಯ ಊಹೆಗಳು ಮಾನವನು ಅರಿತುಕೊಂಡಿರುವ ಅಲ್ಪ ಜ್ಞಾನದ ಹಿನ್ನೆಲೆಯಲ್ಲಿ ರೂಪಣೆಗೊಂಡಿರುವ ಕಲ್ಪನೆಗಲಾಗಿವೆ. ಪ್ರಾಚೀನ ಜಗತ್ತು ಮರೆಯಾಗುತ್ತಿರಬಹುದು (ಮೃತಗೊಳ್ಳುತ್ತಿರ–ಬಹುದು) ಮತ್ತು ಅದು ನವೀನ ಮಾದರಿಯ ಜಗತ್ತಾಗಿ ನವ ಸೃಷ್ಟಿಗೆ ನಾಂದಿಯಾಗುತ್ತಿರಬಹುದು. ಇವೆಲ್ಲ ಸಂಗತಿಗಳ ಆಂತರ್ಯವೇನು ಮತ್ತು ಅದರ ಪಥ ಹೇಗೆ ಇರಬಹುದು ಅದರ ಪರಿಣಾಮಗಳು, ಪ್ರಾಚೀನ ಸ್ವರೂಪವು ವಿಸರ್ಜಿತಗೊಳ್ಳುತ್ತಿರುವದು ಯಾವ ರೀತಿಯಲ್ಲಿ ಇರಬಹುದು ಎನ್ನುವ ವಿಷಯಗಳ ಕುರಿತು ಈ 'ಪ್ರಳಯ' ಸಂಚಿಕೆಯಲ್ಲಿ ವಿವೇಚಿಸಲಾಗಿದೆ. (ಎಐಎಮ್)



**– ಅನು: ಪುಟ್ಟು ಕುಲಕರ್ಣಿ**

ಒಂದು ವೇಳೆ ಸರ್ವಸ್ವವೂ ನಶಿಸಿಹೋದರೂ – ಆದರೆ ನಾನು ಆ ಅಭಿಪ್ರಾಯವನ್ನು ಎಂದಿಗೂ ಹೊಂದಿಲ್ಲ, ಆಗಲೂ ಸಹಿತ ನಾನು ಆ ವಿಲಯನಗೊಂಡ ಆಚೆ ಆಚೆ ಇರುವ ನವ ಸೃಷ್ಟಿಯನ್ನು ಕಾಣುತ್ತೇನೆ. ಈ ಜಗತ್ತಿನಲ್ಲಿ ಏನೇನು ಘಟಿಸಲಿರುವದೋ, ಅದಾವುದೂ ನನ್ನನ್ನು ನಿರಾಶೆಗೊಳಿಸುವದಿಲ್ಲ, ಏಕೆಂದರೆ ಸರ್ವಸ್ವವೂ ಅದರದೇ ನಿಗದಿತ ವಿಧಾನದಲ್ಲಿ ವಿನ್ಯಾಸದಲ್ಲಿಯೇ ಘಟಿಸುತ್ತಿರುತ್ತವೆ. ನಾನು ಗಾಂಧಿಯ ಸತ್ಯಾಗ್ರಹದ ಕುರಿತು ಯಾವುದೇ ಭ್ರಮೆಗಳನ್ನೂ ಹೊಂದಿಲ್ಲ, ಆದರೆ ಅದು ಒಂದು ಬೃಹತ್–ಗೊಂದಲವನ್ನು ಸೃಷ್ಟಿಸುತ್ತದೆ ಅಥವಾ ಒಂದು ದೊಡ್ಡ ಉಪದ್ರವವನ್ನು ರೂಪಿಸುತ್ತದೆ ಎನ್ನುವ ನನ್ನ ಊಹೆಯನ್ನು ಖಚಿತಗೊಳಿಸಿದೆ. ನನ್ನ ಅಭಿಪ್ರಾಯದಲ್ಲಿ ನನ್ನದೇ ಪ್ರಮಾದವೆಂದರೆ ಇಲ್ಲಿ ನಾನು ಬಳಸಿರುವ "ಅಥವಾ", ಏಕೆಂದರೆ ಅಲ್ಲಿ ಅದನ್ನು 'ಮತ್ತೂ' ಎಂದು ಬಳಸಬೇಕಿತ್ತು. ಬುದ್ಧಿಜೀವಿಗಳ (ಇಂಟಲೆಕ್ಚುವಲ್ ಐಡಿಯಾಲಿಸ್ಟ್ಸ್) ಆಶಯದ ಸಲುವಾಗಿ ನಾನು ಇದನ್ನು ಹಂಚಿಕೊಂಡಿಲ್ಲ, ಅದಕ್ಕಾಗಿ ನಾನು ನಿರಾಶೆಯನ್ನೂ ಹೊಂದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/209 – ಶ್ರೀ ಅರವಿಂದರು**

# ಮನುಕುಲದ ನಾಲ್ಕು ಯುಗಗಳು

**– ಅನು: ಪುಟ್ಟು ಕುಲಕರ್ಣಿ**

## ವಿಷ್ಣು ಮತ್ತು ಚತುರ್ಯುಗಗಳು

ಭಾರತೀಯ ಯುಗಗಳ ಚಿಂತನಾ ವಿಧಾನದ ಪ್ರಕಾರವಾಗಿ, ದ್ವಾಪರ ಯುಗದಲ್ಲಿ ಈ ಸರ್ವಸ್ವವೂ ಈ ರೀತಿಯ ಸಂಹಿತೀಕರಣ(ಸೂತ್ರಬದ್ಧವಾಗಿ ಕ್ರೋಡೀಕರಿಸಿದ)ದ, ವಿಧಿಬದ್ಧಗೊಳಿಸಿದ ಮತ್ತು ಅನುಷ್ಠಾನಿಸುವ ಕ್ರಿಯೆ ನಡೆದಿದೆ. ಸತ್ಯ ಯುಗದಲ್ಲಿ (ಕೃತ ಯುಗದಲ್ಲಿ) ವಿಷ್ಣುವು ಮನುಕುಲದ ಮಧ್ಯೆ 'ಯಜ್ಞ'ವಾಗಿ ಅವತರಣ–ಗೊಂಡಿದ್ದಾನೆ. ಯಜ್ಞ ಎನ್ನುವದು ಆರಾಧನೆ ಮತ್ತು ತ್ಯಾಗದ ಮೂಲಕ ಸಮರ್ಪಣೆಯ ಶಕ್ತಿಯಾಗಿದೆ, ಜೊತೆಜೊತೆಗೆ ಈ ಸತ್ಯ ಯುಗದಲ್ಲಿ ಈ ಯಜ್ಞವು ಜರುಗುತ್ತಿದ್ದುದು ಹೃದಯದಲ್ಲಿ. ಹೀಗಾಗಿ ಅಲ್ಲಿ ಬಾಹ್ಯ ಆಚರಣೆಗಳ ಅವಶ್ಯಕತೆ ಇರಲಿಲ್ಲ, ಬಹಿರಂಗವಾಗಿ ಸಮರ್ಪಣೆಯು ಇರಲಿಲ್ಲ, ವಿಸ್ತೃತವಾದ ಶಾಸನವೂ ಇರಲಿಲ್ಲ, ಸರಕಾರವೂ(ಆಡಳಿತವೂ) ಇರಲಿಲ್ಲ, ಜಾತಿ ಇರಲಿಲ್ಲ, ವರ್ಗಗಳೂ ಇರಲಿಲ್ಲ ಮತ್ತು ವರ್ಣಗಳ ವೈಷಮ್ಯ ಇರಲಿಲ್ಲ. ಪರಿಷ್ಕೃತಗೊಂಡ ತಮ್ಮ ಪವಿತ್ರವಾದ ಸ್ವಭಾವದಿಂದಲೇ ಅವಶ್ಯಕತೆಯ ಅನುಸಾರವಾಗಿ ರೂಪಣೆಗೊಂಡಂತೆಯೇ ಅನುಸರಿಸುತ್ತಿದ್ದರು. ಜೊತೆಗೆ ಅವರ ಪರಿಪೂರ್ಣ ಜ್ಞಾನವನ್ನು ಅವಲಂಬಿಸಿದ್ದರು. ಆ ಪರಮಾತ್ಮ ವೈರಾಜ್ಯ ಮತ್ತು ವೇದಗಳು ಆ ದೇವನ ಹೃದಯದಲ್ಲಿದ್ದು, ಅವುಗಳೇ ಮಾನವನ ಹೃದಯದಲ್ಲಿಯೂ ಇದ್ದವು.

ತ್ರೇತಾ ಯುಗದಲ್ಲಿ, ಕೃತ ಯುಗದಲ್ಲಿ ಪರಿಪೂರ್ಣವಾಗಿ ರೂಪಣೆಗೊಂಡಿದ್ದ ವ್ಯವಸ್ಥೆಯು ಶಿಥಿಲಗೊಳ್ಳುತ್ತ ಬಂದಿತು. ಇಲ್ಲಿ ವಿಷ್ಣುವು ಚಕ್ರವರ್ತಿಯಾಗಿ ರಾಜನಾಗಿ, ಯೋಧನಾಗಿ, ಆಡಳಿತಗಾರನಾಗಿ, ಕಾರ್ತ್ಯವೀರ್ಯ, ಪರಶುರಾಮ, ರಾಮ, ಜೊತೆಗೆ ಖಡ್ಗದ ಸ್ವರೂಪದಲ್ಲಿ ನಿಯಂತ್ರಣಕಾರನಾಗಿ ಅವತರಣಗೊಂಡು ಆಗಮಿಸಿದನು. ಶಾಸನಗಳು ರಚನೆಯಾಗಿ ಮತ್ತು ಲಿಖಿತಗೊಳಿಸಲ್ಪಟ್ಟ ವೇದಗಳು ಜನ ಸಮುದಾಯವನ್ನು ಆಳಲು ಸ್ಥಾಪಿತಗೊಂಡವು. ಆದಾಗ್ಯೂ ಅಲ್ಲಿ ಮೂಲ್ಯಸಾಪೇಕ್ಷತೆ (ಎಲಾಸ್ಟಿಸಿಟಿ), ಸ್ವಾತಂತ್ರ್ಯವಿತ್ತು. ಈ ಹಂತದಲ್ಲಿ ಜನ ಸಮುದಾಯವೂ ಸಹಿತ ಕೆಲವೊಂದು ನಿಗದಿತ ಸ್ವರೂಪದ ತಮ್ಮ ತಮ್ಮ ಸ್ವಭಾವದ ಮೂಲಕ ಸ್ವಸ್ಥಪೂರ್ಣವಾಗಿರುವ ಸಂವೇದನೆಗಳೊಂದಿಗೆ ವ್ಯವಹರಿಸುತ್ತಿದ್ದರು.

ಆದರೆ ಇಲ್ಲಿ ಪ್ರಥಮ ಅವತರಣದಲ್ಲಿದ್ದ ಪಾವಿತ್ರ್ಯತೆಯು ಕೊಂಚ ಭ್ರಷ್ಟಗೊಂಡಿತ್ತು. ದ್ವಾಪರ ಯುಗದಲ್ಲಿಯೇ ಚಿಂತನ ಮತ್ತು ಶಕ್ತಿಯ ಪಾವಿತ್ರ್ಯತೆಯ ಬದಲಾಗಿ ಸ್ವರೂಪ ಮತ್ತು ನಿಯಮಗಳು ಆಡಳಿತದ ಸಲುವಾಗಿ ಅನುಷ್ಠಾನಗೊಂಡವು. ಈ ವಿಧಾನದಲ್ಲಿಯೇ ಪಂಥ, ನೈತಿಕ ವಿಷಯಗಳು, ಮತ್ತು ಸಮಾಜವನ್ನು ಆಡಳಿತಾತ್ಮಗೊಳಿಸಲಾಯಿತು. ಇಲ್ಲಿ ವಿಷ್ಣುವು ವ್ಯಾಸನಾಗಿ ಅವತರಣಗೊಂಡು ಓರ್ವ ಅಪ್ರತಿಮ ಸಂಹಿತಾಕಾರ ಮತ್ತು ಜ್ಞಾನವನ್ನು ಸುವ್ಯಸ್ಥಿತಗೊಳಿಸಿದ್ದಾನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 18/163–64**

## ಚಕ್ರೀಯ ವಿಕಾಸದ ಪ್ರಾಚೀನ ಸಿದ್ಧಾಂತ

ಈ ಪ್ರಾಚೀನ ಸಿದ್ಧಾಂತ ಅಭಿಮತದ ಪ್ರಕಾರ, ಎಲ್ಲ ರೀತಿಯಿಂದಲೂ ಪರಿಪೂರ್ಣವಾಗಿರುವ ಸದೃಢ ಸ್ಥಿತಿಯ ವೈಯಕ್ತಿಕ, ಮತ್ತು ಸಾರ್ವಜನಿಕವಾಗಿ ಅನುಷ್ಠಾನಗೊಂಡಿದ್ದ ಸ್ವರ್ಣ ಯುಗವಾಗಿದ್ದ ಮತ್ತು ಸತ್ಯ ಯುಗವೆಂದು ಆರಾಧಿಸಲ್ಪಡುತ್ತಿದ್ದ ಪ್ರಕಾರವಾಗಿಯೇ ಜೀವನ ಶೈಲಿಯಾಗಿದ್ದು, ಅಲ್ಲಿ ಯಾವುದೇ ರಾಜಾಡಳಿತದ, ಸಮಾಜ ನಿರ್ಮಾಣಕ್ಕೆ ಸರಕಾರದ ಅಥವಾ ಆಡಳಿತಾತ್ಮಕವಾದ ವ್ಯವಸ್ಥೆಯ ಅವಶ್ಯಕತೆಯು ಇರಲಿಲ್ಲ. ಏಕೆಂದರೆ ಸ್ವಯಂ–ಪ್ರಬುದ್ಧತೆಯ ಮತ್ತು ಸದಾ ಈಶ್ವರನಲ್ಲಿಯೇ ನಿವಾಸಿಯಾಗಿರುವ **ಸತ್ಯ ಯುಗವು** ಅದು ಸಹಜ ಸ್ವರೂಪವೇ ಆಗಿತ್ತು, ಜೊತೆಗೆ ಆಂತರಿಕ ದಿವ್ಯ ಧರ್ಮವೂ ಆಗಿತ್ತು. ಮುಕ್ತ ಶಾಸನ ಮತ್ತು ಹಕ್ಕುಗಳ ಮೂಲಕ ಸ್ವಯಂ ನಿಯಂತ್ರಣಾ ಸಾಮಥ್ಯ ಹೊಂದಿದ ಪ್ರತಿಯೋರ್ವನೂ ಮತ್ತು ಅದೇ ಸ್ವಭಾವದಲ್ಲಿಯೇ ಇರುವ ಸಮುದಾಯವೂ, ಇದನ್ನೇ ಚಿಂತನಾ ವಿಧಾನವನ್ನಾಗಿಸಿಕೊಂಡು ಜೀವನ ನಡೆಸಿತ್ತು. ಹೀಗಾಗಿ ಇದು ಆಂತರ್ಯದಲ್ಲಿಯೂ ದಿವ್ಯ–ಧರ್ಮದ ಸ್ವರೂಪವೇ ಆಗಿತ್ತು. ಆದರೆ ಮಾನವೀಯತೆಯ ನೈಜ ಸ್ಥಿತಿಯು, ಅದರ ಅಜ್ಞಾನ ಮತ್ತು ಧೂರ್ತತನದ ಸ್ವಭಾವದಿಂದ ಮತ್ತು ವ್ಯಕ್ತಿತ್ವದ ನೈಜತ್ವವನ್ನು ಮತ್ತು ಸಾಮಾಜಿಕ–ಧರ್ಮವನ್ನು ಉಲ್ಲಂಘಿಸುತ್ತ ಇರುತ್ತದೆ. ಇಲ್ಲಿ ಒಂದು ಆಡಳಿತಾತ್ಮಕ ದೇಶ, ಸಾಮ್ರಾಟ್ ಸ್ವರೂಪದ ಬಲವು, ಆಡಳಿತವನ್ನು ಹೊಂದಿರುವ ಸಂರಚನೆಯ ರಾಜನಾಗಿ, ಸದಾ ಸಮಾಜದ ಆಗು–ಹೋಗುಗಳ, ಜೀವನ ಶೈಲಿಯ ಮೇಲೆ, ನೈಜ ವ್ಯಕ್ತಿತ್ವದ ಮತ್ತು ನೈಜ ಸಾಮುದಾಯಿಕ–ಧರ್ಮದ ಮೇಲೆ ಅಧ್ಯಾರೋಪಣೆಗೊಂಡಿರುವಂತೆ ಇರುತ್ತದೆ.

ಅಂದರೆ, ಪ್ರಾಕೃತಿಕ ನಿಯಮದಂತೆ, ಮತ್ತು ರೀತಿ–ರಿವಾಜುಗಳಂತೆ ಹಾಗೂ ಸ್ವತಃಸ್ಫೂರ್ತ ಅಭಿವೃದ್ಧಿಯು ಕಾರ್ಯಪ್ರವೃತ್ತವಾಗುವಂತೆ ಇದ್ದು, ಜೊತೆಗೆ ಸಂಚಾಲನಗೊಳಿಸುತ್ತ ಮತ್ತು ಸಹಕರಿಸುತ್ತಲೇ ಸಾಗಿ, ಯಾವುದೇ ನಿಷೇಧಾತ್ಮಕ–ವಾಗಿರುವ ಘಟನೆಗಳು ಇದ್ದಲ್ಲಿ, ಅವುಗಳಿಗೆ ಶಿಕ್ಷೆ ವಿಧಿಸುವ, ಅದುಮುವ ಮತ್ತು ಎಷ್ಟು ಸಾಧ್ಯವೋ ಅಷ್ಟು ಅಪರಾಧಿಕ ಸಂಗತಿಗಳು ಈ ಧರ್ಮದ ವಿರುದ್ಧವಾಗಿ ನಡೆಯದಂತೆ ಗಮನವಿರಿಸಬೇಕಾಗುತ್ತದೆ. ತೀವ್ರತೆರನಾದ ಧರ್ಮದ ಭ್ರಷ್ಟತನವು ಇದ್ದಲ್ಲಿ, ಅದನ್ನು ಗುರುತಿಸಿ ನಿಯಂತ್ರಿಸಲು ಒಂದು ಧರ್ಮದ ಒಂದು ವಿಧಾಯಕ ಮಂಡಳಿಯ ಅಸ್ತಿತ್ವ ಮತ್ತು ಒಂದು ಸರಕಾರದ ಅನುಷ್ಠಾನದೊಂದಿಗೆ ಅಥವಾ ಲಿಖೀತಗೊಳಿಸಲ್ಪಟ್ಟ ಶಾಸನ ಹಾಗು ಸಂಹಿತೆಗಳೊಂದಿಗೆ ಆಡಳಿತ ನಡೆಸುವ ವ್ಯವಸ್ಥೆಯು ಈ ಬಾಹ್ಯ ಜೀವನದ ಸರ್ವಸ್ವವನ್ನೂ ಈ ರೀತಿಯ ಬಾಹ್ಯ ಆಡಳಿತಾತ್ಮಕವಾಗಿರುವ ವಿವರಗಳೊಂದಿಗೆ ನಿಯಂತ್ರಿತಗೊಳಿಸುವಂತಾಗುತ್ತದೆ. ಹಾಗೆಂದು ಇದನ್ನು ರಾಜಕೀಯ ಪಾರಮ್ಯದ ಕ್ರಿಯೆಯೆಂದು ಪರಿಗಣಿಸುವಂತಿಲ್ಲ, ಏಕೆಂದರೆ ಇದು ಸಮಾಜೋ–ಧಾರ್ಮಿಕ ನಿಯಂತ್ರವಾಗಿ, ಋಷಿಯಾಗಿ, ಅಥವಾ ಬ್ರಾಹ್ಮಣಗಳ ಲಿಖಿತದನುಸಾರವಾಗಿ ಇಲ್ಲವೇ ಅದರ ಪ್ರತಿಪಾದಕರಾಗಿ ಇರಬೇಕು. ಒಂದು ವೇಳೆ ಈ ಶಾಸನವು ಲಿಖಿತವೇ ಇರಲಿ ಅಥವಾ ಅಲಿಖಿತವೇ ಇರಲಿ, ಅದೆಂದೂ ನವ ಸೃಷ್ಟಿಯಾಗಿರಬೇಕೆಂದೇನೂ ಇಲ್ಲ ಅಥವಾ ಶಾಸಕಾಂಗದ ಪ್ರಾಧಿಕಾರದಿಂದ ವಿರಚಿಸಲ್ಪಡಬೇಕಾಗಿಯೂ ಇಲ್ಲ. ಆದರೆ, ಯಾವುದು ಈಗಾಗಲೇ ಅಸ್ತಿತ್ವದಲ್ಲಿ ಇದೆಯೋ ಅದನ್ನು ಮಾತ್ರವೇ ಪ್ರತಿಪಾದಿಸಲ್ಪಡಬೇಕಾಗುತ್ತದೆ ಮತ್ತು ಅದನ್ನು ಅದು ಹೇಗಿದೆಯೋ ಹಾಗೆ ಉಲ್ಲೇಖಿಸಲ್ಪಡಬೇಕಾಗುತ್ತದೆ, ಅಥವಾ ಅದು ನಿಸರ್ಗದ ಪ್ರಕಾರವೇ ಹೇಗೆ ಪ್ರಗತಿಗೊಳ್ಳುತ್ತದೆಯೋ ಮತ್ತು ಅದು ಸಾಂಪ್ರದಾಯಿಕ ಜೀವನದಲ್ಲಿ ಹಾಗು ಪ್ರಜ್ಞೆಯಲ್ಲಿ, ಅದರಲ್ಲೂ ಈ ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ನಿಯಮಗಳನ್ನು ಹೊರತು ಪಡಿಸಿ ಪ್ರಗತಿಗೊಳ್ಳುತ್ತಿದ್ದ ಪ್ರಕಾರವೇ ಇರಬೇಕು.

---

ಸೃಷ್ಟಿ–ಪ್ರಳಯಗಳ ಮಧ್ಯದಲ್ಲಿ ವಿಕಾಸದ ಪಥವು ಪರಿಪೂರ್ಣಗೊಳ್ಳುತ್ತ ಸಾಗಲು ನಮಗೆ ಮಾರ್ಗದರ್ಶಿಯಾಗಿರುತ್ತದೆ. ಇದರ ಆಯಾಮಗಳನ್ನು ಶ್ರೀ ಅರವಿಂದರು ತಮ್ಮ ಕೃತಿಗಳಲ್ಲಿ ಪಡಿಮೂಡಿಸಿದ್ದಾರೆ.

## ವಿಕಾಸದ ಆಯಾಮ

ಚಿತ್ತವು ಚೇತನವಾಗಬೇಕು
ಚೇತನವು ಋತ–ಚೇತನವಾಗಬೇಕು
ವ್ಯಕ್ತಿತ್ವವು ಅವಕಾಶವಾಗಬೇಕು
ದ್ವಂದ್ವವು ಏಕೀಭವಿಸಿ ಸಾಂದ್ರ ವಾಗಬೇಕು
ನಿಶ್ಚಿಂತತೆಯು ನಿರಾಮಯವಾಗಬೇಕು
ಅಕ್ಷರವು ಸಾಕ್ಷ್ಯವಾಗಬೇಕು
ಉನ್ಮನವು ಆಕಾಶವಾಗಬೇಕು
ನಿರ್ಭಾವವು ನಿರಂತರವಾಗಬೇಕು
ನಿಷ್ಪ್ರಪಂಚವು ನಿರ್ಗುಣ ಬ್ರಹ್ಮವಾಗಬೇಕು
ವೃತ್ತಿರಾಹಿತ್ಯವು ಪ್ರವೃತ್ತಿಯಾಗಬೇಕು
ನಿರ್ಮಮವು ಬ್ರಹ್ಮೀಭಾವವಾಗಬೇಕು
ಆತ್ಮಭಾವವು ವಿಶ್ವಾನುಭೂತಿಯಾಗಬೇಕು
ಕಾಲರಾಹಿತ್ಯವು ನಿರ್ಗುಣಮೂಲವಾಗಬೇಕು
ಸರ್ವವ್ಯಾಪ್ತಿತ್ವವು ಆಯಾಮವಾಗಬೇಕು
ಅನಂತವು ಅನಂತಾನಂತವಾಗಬೇಕು
ನಿಶ್ಶಬ್ದವು ವೈಶ್ವಿಕನಾದವಾಗಬೇಕು
ಅಖಂಡವು ಬ್ರಹ್ಮಾಂಡವಾಗಬೇಕು
ವೈರಾಗ್ಯವು ಪ್ರ ಜ್ಞಾನವಾಗಬೇಕು
ವಿರಕ್ತಿಯು ತಿತಿಕ್ಷು ಆಗಬೇಕು
ಮುಕ್ತಿಯು ಶಕ್ತಿಯಾಗಬೇಕು
ತೃಪ್ತಿಯು ಆತ್ಮತೃಪ್ತಿ ಯಾಗಬೇಕು
ಪೂರ್ಣವು ಪರಿಪಕ್ವವಾಗಬೇಕು.

**– ಪುಟ್ಟು ಕುಲಕರ್ಣಿ**

**ಸಾವಿತ್ರಿ ಉಪನಿಷತ್ತು ಮತ್ತು ಶ್ರೀ ಅರವಿಂದರ ಸಾವಿತ್ರೀ**

# ಭೂತಕಾಲ

**– ಅನು: ಪ್ರವೀಣ ಪಾಟೀಲ, ಮಾನವಿ**

**ಏಳನೇ ಸೃಷ್ಟಿ ಮತ್ತು ಪ್ರಳಯ**

ಅಂತಿಮವಾಗಿ ಹೇಳುವುದಾದರೆ, ಎಲ್ಲಿಯವರೆಗೆ ಸಾವು ಇರುವುದೋ, ಕೊನೆಯ ಪರಿಣಾಮ ಕೆಟ್ಟದ್ದಾಗಿರುತ್ತದೆ.

ಕೇವಲ ಸಾವಿನ ಮೇಲೆ ಜಯ ಸಾಧಿಸಿದಾಗ ಮಾತ್ರ ಎಲ್ಲಾ ಕೆಟ್ಟ ಪರಿಣಾಮಗಳಿಗೆ ಕೊನೆಯಾಗುತ್ತದೆ... ಅಂದರೆ ಹೊಸ ಪ್ರಗತಿ ಸಾಧಿಸಲು ನಾವು ಅಪ್ರಜ್ಞಾಪೂರ್ವಕ ಸ್ಥಿತಿಗೆ ಹಿಂತಿರುಗುವುದು ಅನವಶ್ಯಕವಾಗಿರುತ್ತದೆ.

ಪೃಥ್ವಿಯ ಮೇಲೆ ನಡೆಯುವ ಎಲ್ಲಾ ಬೆಳವಣಿಗೆಯ ಪ್ರಕ್ರಿಯೆಯು ಈ ರೀತಿಯಾಗಿದೆ. (ಬೇರೆ ಗ್ರಹಗಳ ಮೇಲೆ ಹೇಗಿದೆಯೋ ನನಗೆ ಗೊತ್ತಿಲ್ಲ) ಮತ್ತು ಬಹುಶಃ (ನನಗೆ ಖಗೋಳ ಶಾಸ್ತ್ರದ ಇತಿಹಾಸದ ಬಗ್ಗೆ ಅಷ್ಟು ಗೊತ್ತಿಲ್ಲ) ವಿಶ್ವಗಳಲ್ಲಿ ನಡೆಯುವ ಪ್ರಕ್ರಿಯೆಯು ಇದೇ ರೀತಿಯಾಗಿರಬಹುದು. ವಿಶ್ವಗಳು ಭೌತಿಕವಾಗಿ ನಾಶವಾಗುತ್ತವೆಯೆಂದು ಅವರಿಗೆ ಗೊತ್ತಿದೆಯೇ, ಭೌತಿಕವಾಗಿ ವಿಶ್ವಗಳ ವಿನಾಶದ ಇತಿಹಾಸವನ್ನು ದಾಖಲಿಸಲಾಗಿದೆಯೇ? ಸಂಪ್ರದಾಯಗಳು ಏನನ್ನು ಹೇಳುತ್ತವೆ ಎಂದರೆ, ವಿಶ್ವ ಸೃಷ್ಟಿಯಾಗುತ್ತದೆ, ಪ್ರಳಯದಲ್ಲಿ ವಿಲೀನವಾಗುತ್ತದೆ, ಮತ್ತು ಹೊಸದೊಂದು ಮರುಸೃಷ್ಟಿಯಾಗುತ್ತದೆ; ಅವರ ಪ್ರಕಾರ ನಮ್ಮ ವಿಶ್ವವು ಏಳನೆಯ ಸೃಷ್ಟಿಯಾಗಿದೆ. ಇದು ಏಳನೆಯ ಸೃಷ್ಟಿಯಾಗಿರುವದರಿಂದ ಪ್ರಳಯದಲ್ಲಿ ವಿಲೀನವಾಗದೆಯೇ, ಯಾವುದೇ ಹಿಮ್ಮೆಟ್ಟುವಿಕೆಯಿಲ್ಲದೆಯೇ ಪ್ರಗತಿಯಾಗುತ್ತಾ ಸಾಗುತ್ತದೆ. ಈ ಕಾರಣದಿಂದಾಗಿ, ವಾಸ್ತವವಾಗಿ, ಮಾನವನಲ್ಲಿ ಶಾಶ್ವತತೆಯ ಮತ್ತು ತಡೆರಹಿತ ಪ್ರಗತಿಯ ಅವಶ್ಯಕತೆ ಉಂಟಾಗಿದೆ. ಏಕೆಂದರೆ ಅದರ ಕಾಲ ಬಂದಿದೆ. ಶ್ರೀ ಅರವಿಂದರು ಹೇಳಿದರು, "ಈ ಸೃಷ್ಟಿಯು ರೂಪಾಂತರಗೊಂಡು ಅತಿಮಾನಸದ ಕಡೆಗೆ ಸಾಗುವುದು." ಆದರೆ ಅತಿಮಾನಸವನ್ನು ಮುಟ್ಟಲು ಮನವು ಬಾಯಿ ಮುಚ್ಚಬೇಕಾಗುತ್ತದೆ! ಮತ್ತು ನನಗೆ ಹೀಗೆನಿಸುತ್ತದೆ. (ನಗುತ್ತಾ) ಒಂದು ಮಗುವು ಮನದ ತಲೆಯ ಮೇಲೆ ಕುಳಿತಿದೆ. (ಆ ಮಗುವು ತನ್ನ ಕಾಲಿನಿಂದ ಒದಿಯುತ್ತಿದೆ ಎಂದು ತೋರಿಸುತ್ತಾ) ಮನದ ತಲೆಯ ಮೇಲೆ ಆಟವಾಡುತ್ತಿದೆ! ನಾನು ಅದರ ಚಿತ್ರ ಬಿಡಿಸಿದರೆ ಅದು ಇನ್ನೂ ತಮಾಷೆಯಾಗಿರುತ್ತದೆ. ಮನಸ್ಸು – ಆ ಬೃಹತ್ತಾದ ಭೂಮಂಡಲದ ಮನ (ಶ್ರೀಮಾತೆಯವರು ತಮ್ಮ ಕೆನ್ನೆಯನ್ನು ಉಬ್ಬಿಸಿ) –

ಹೌದು ಆ ಮನಸ್ಸು, ನಾನು ಅತ್ಯಂತ ಮಹತ್ವ ಮತ್ತು ಅನಿವಾರ್ಯ ಯಾವುದೆಂದು ತಿಳಿಯಲು ವಿಚಾರ ಮಾಡುತ್ತದೆ. ಮತ್ತು ಅದರ ತಲೆಯ ಮೇಲೆ ಮಗುವೊಂದು ಕುಳಿತು ಆಟವಾಡುತ್ತಿದೆ. ಅದೆಷ್ಟು ತಮಾಷೆಯಾಗಿದೆ.

ಆಹ್, ನನ್ನ ಮಕ್ಕಳೇ, ನಮಗೆ ಶ್ರದ್ಧೆಯೇ ಇಲ್ಲ! ಯಾವ ಕ್ಷಣ ಶ್ರದ್ಧೆಯು ಬಂತೆಂದರೆ...

ನಾವು ಹೇಳುತ್ತೇವೆ, "ನಮಗೆ ದೈವೀ ಜೀವನ ಬೇಕೆಂದು" – ಆದರೆ ಅದರ ಬಗ್ಗೆ ನಮಗೆ ಭಯವಿದೆ! ಯಾವ ಕ್ಷಣ ಈ ಭಯವು ಮಾಯವಾಗಿ ನಾವು ಪ್ರಮಾಣಿಕರಾಗುತ್ತೇವೋ... ನಿಜವಾಗಿ, ಎಲ್ಲವೂ ಬದಲಾಗುತ್ತದೆ.

ನಾವು ಹೇಳುತ್ತೇವೆ, "ಈ ಜೀವನದಿಂದ ಮತ್ತೇನು ಬೇಕಿಲ್ಲವೆಂದು," ಆದರೆ (ನಗುತ್ತಾ) ನಮ್ಮೊಳಗಿನ ಏನೋ ಒಂದು ಅಂಟಿಕೊಂಡಿರುತ್ತದೆ!

ಹೌದಾ!

ಇದು ಹಾಸ್ಯಾಸ್ಪದ.

ನನ್ನ ವಿಚಾರದಲ್ಲಿ ಇದರ ಬಗ್ಗೆ ಅನೇಕ ಬಾರಿ ಮಾತನಾಡಿದ್ದೇವೆ. ಸೃಷ್ಟಿಯ ಪ್ರಕ್ರಿಯೆಯಲ್ಲಿ ಹೀಗೆ ಹೇಳಲಾಗಿದೆ. ಸೃಷ್ಟಿಯಾದ ಮೇಲೆ ಅದನ್ನು ಕಾಪಾಡುವುದು, ಸ್ಥಿತಿ. ನಂತರ ಅದು ನಾಶವಾಗುವುದು, ಲಯ; ಇದನ್ನು ಬಹುಬಾರಿ ಹೇಳುತ್ತಾರೆ; "ಯಾವುದಕ್ಕೆ ಪ್ರಾರಂಭವಿದೆಯೋ ಅದಕ್ಕೆ ಅಂತ್ಯವೂ ಇರಲೇಬೇಕು" ಮುಂತಾದವುಗಳು...

ನಮ್ಮ ವಿಶ್ವದ ಇತಿಹಾಸದಲ್ಲಿ ಆರು ಸತತವಾಗಿ ಬರುವ ಕಾಲಗಳಿವೆ. ಅದು ಸೃಷ್ಟಿಯಿಂದ ಪ್ರಾರಂಭವಾಗಿ, ತನ್ನ ಸ್ಥಿತಿಯನ್ನು ಕಾಪಾಡಿಕೊಂಡು ಮತ್ತು ಅದು ನಾಶವಾಗಿ ತನ್ನ ಮೂಲದಲ್ಲಿ ಲೀನವಾಗುವುದು, ಇದಕ್ಕೆ ಪ್ರಳಯ ಎನ್ನುವರು; ಆದ್ದರಿಂದ ಈ ಪರಂಪರೆಯು ಇದೆ. ಆದರೆ ಏಳನೆಯ ಸೃಷ್ಟಿಯು ಪ್ರಗತಿದಾಯಕ ಸೃಷ್ಟಿಯಾಗಿದ್ದು, ಕೇವಲ ತನ್ನ ಸ್ಥಿತಿಯನ್ನು ಕಾಪಾಡಿಕೊಳ್ಳುವುದಷ್ಟೇ ಅಲ್ಲದೆ, ಇಲ್ಲಿ ಪ್ರಗತಿದಾಯಕ ಪ್ರಕಟಣೆಯಾಗಿ ದೈವತ್ವವನ್ನು ಹೆಚ್ಚು ಸಂಪೂರ್ಣವಾಗಿ ವ್ಯಕ್ತಪಡಿಸಲು ಪ್ರಯತ್ನಿಸುವುದು ಹಾಗಾಗಿ ಯಾವುದೇ ನಾಶವಾಗಿ ತನ್ನ ಮೂಲದಲ್ಲಿ ಲೀನವಾಗುವ ಅವಶ್ಯಕತೆ ಇರುವುದಿಲ್ಲ. ಮತ್ತು ನಾವಿರುವುದು ಈ ಏಳನೆಯ ಸೃಷ್ಟಿಯ ಕಾಲದಲ್ಲಿ ಎಂದು ಘೋಷಿಸಲಾಗಿದೆ. ಅಂದರೆ ಈ ಸೃಷ್ಟಿ ಪ್ರಳಯದಲ್ಲಿ ನಾಶವಾಗುವುದಿಲ್ಲ.

ಅದರ ಬದಲಾಗಿ ಸತತವಾಗಿ ಪ್ರಗತಿ ಇರುತ್ತದೆ. ದೈವೀ ಮೂಲದಿಂದ ಬಂದ ಸೃಷ್ಟಿಯು ಹೆಚ್ಚು ಹೆಚ್ಚು ಪರಿಪೂರ್ಣವಾಗಿ ಪ್ರಕಟವಾಗುತ್ತದೆ.

ಮತ್ತು ಇದನ್ನೇ ಶ್ರೀ ಅರವಿಂದರು ಹೇಳುತ್ತಾರೆ. ಅವರು ಸತತವಾಗಿ ಪ್ರಕಟಣೆಯ ಬಗ್ಗೆ ಹೇಳುತ್ತಾರೆ. ಹೆಚ್ಚು ಹೆಚ್ಚು ಸಂಪೂರ್ಣವಾಗಿ ದೈವೀ ಪ್ರಕಟಣೆಯಾಗುವುದು ಈ ಪ್ರಗತಿಪರ ಸೃಷ್ಟಿಯಲ್ಲಿ ಅವಶ್ಯಕತೆಯಿರುತ್ತದೆ. ಏಕೆಂದರೆ, ಅವನಲ್ಲಿ, "ಶಾಶ್ವತತೆಯ ನೆನಪು" ತನ್ನನ್ನು ತಾನು ಪ್ರಕಟಪಡಿಸಲು ಅಭೀಪ್ಸಿಸಿ ಈ ಶಾಶ್ವತತೆಯಲ್ಲಿ ಭಾಗವಹಿಸಲು ಪ್ರಯತ್ನಿಸುತ್ತದೆ. ಆದರೆ ಈ ಶಾಶ್ವತತೆಯ ಭಾವವು ಕ್ರಿಯಾಶೀಲವಾಗಿ ಮತ್ತು ವರ್ತಮಾನದಲ್ಲಿ ಇದ್ದರೆ, ನಾವು ದುಃಖ ಪಡುವದಿಲ್ಲ; ಹರಿದುಹೋದ ಬಟ್ಟೆಯನ್ನು ಎಸೆದಾಗ ನಾವು ದುಃಖಪಡುವದಿಲ್ಲ – ಅದರ ಬಗ್ಗೆ ಮೋಹವಿರಬಹುದು, ಆದರೆ ದುಃಖವಿರುವುದಿಲ್ಲ! ಇದೇ ರೀತಿಯಲ್ಲಿ ಒಂದು ವಿಶ್ವವು ಮಾಯವಾದರೆ, ಅದು ತನ್ನ ಕಾರ್ಯವನ್ನು ಪೂರೈಸಿದೆ ಎಂದು ಅರ್ಥ, ಅದು ತನ್ನ ಎಲ್ಲಾ ಸಾಧ್ಯತೆಗಳ ಅಂತ್ಯಕ್ಕೆ ಬಂದಿದೆಯೆಂದು ಮತ್ತು ಅದರ ಸ್ಥಾನದಲ್ಲಿ ಇನ್ನೊಂದನ್ನು ಸ್ಥಾಪಿಸಬೇಕಾಗಿದೆ ಎಂದರ್ಥ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/217**

## ಶ್ರಮ ಮತ್ತು ಪ್ರಯತ್ನಗಳು

ನಾನು ಇಡೀ ತಿರುವನ್ನು ಸಂಪೂರ್ಣವಾಗಿ ಅನುಸರಿಸಿದ್ದೇನೆ. ಯಾವಾಗ ನಿನ್ನ ಪ್ರಜ್ಞೆ ಮತ್ತು ಬೆಳವಣಿಗೆ ಸಂಕುಚಿತವಾಗುತ್ತದೆಯೋ, ಪೃಥ್ವಿಯು ನಾಶವಾಗಬಾರದೆಂಬ ತೀವ್ರ ತರಹದ ಭಾವನೆಯಿರುತ್ತದೆ. ಇದು ಶಾಶ್ವತವಾಗಿ ಮುಂದುವರೆಯಬೇಕು – ಅದು ತನ್ನನ್ನು ತಾನು ರೂಪಾಂತರಿಸಿಕೊಳ್ಳುತ್ತಾ ಮುಂದುವರಿಯಬೇಕು. ಆದರೆ ಅದು ಇದೇ ಪೃಥ್ವಿಯಾಗಿ ಉಳಿಯಬೇಕು.

ಸ್ವಲ್ಪ ಸಮಯದ ನಂತರ, ನೀನು ಪ್ರೌಢನಾದ ಮೇಲೆ ನೀನು ಇದಕ್ಕೆ ಕಡಿಮೆ ಮಹತ್ವ ಕೊಡುವೆ. ಮತ್ತು ಯಾವಾಗ ನೀನು ಆ ಶಾಶ್ವತದ ಜೊತೆಗೆ ಸತತವಾದ ಸಂಪರ್ಕದಲ್ಲಿದ್ದಾಗ, ಅದು ಕೇವಲ ಒಂದು ಆಯ್ಕೆಯ ಪ್ರಶ್ನೆಯಾಗಿರುತ್ತದೆ; ಅದು ನನ್ನ ಅವಶ್ಯಕತೆಯಾಗಿರುವುದಿಲ್ಲ. ಏಕೆಂದರೆ ನನ್ನ ಕ್ರಿಯಾಶೀಲ ಪ್ರಜ್ಞೆಗೆ ಏನೂ ಪರಿಣಾಮ ಬೀರುವುದಿಲ್ಲ. ಕೆಲದಿನಗಳ ಹಿಂದೆ ನನಗೆ ಯಾವ ದಿನವೆಂಬುದು ನೆನಪಿಲ್ಲ – ಆದರೆ ಬಹಳ ಇತ್ತೀಚೆಗೆ ಸಂಪೂರ್ಣ ಮುಂಜಾನೆಯಲ್ಲಿ ನಾನು ಈ

“ಪ್ರಜ್ಞೆ”ಯಲ್ಲಿ ಜೀವಿಸುತ್ತಿದ್ದೆ. ಮತ್ತು ನೋಡಿದೆ, ನನ್ನ ಅಸ್ತಿತ್ವದ ಬೆಳವಣಿಗೆಯ ತಿರುವಿನಲ್ಲಿ ಈ ತರಹದ ಅವಶ್ಯಕತೆ ಆಳವಾಗಿ ಬೇರೂರಿದೆ. ಪೃಥ್ವಿಯ ಜೀವನವು ಮುಂದುವರೆಯಬೇಕು. – ಪೃಥ್ವಿಯ ಜೀವನವು ಅನಂತವಾಗಿ ಮುಂದುವರಿಯಬೇಕು – ಈ ಅವಶ್ಯಕತೆಯನ್ನು ವಸ್ತುನಿಷ್ಠವಾಗಿ ನೋಡಿದೆ, ಅಂದರೆ, ಈ ಅವಶ್ಯಕತೆಯು ಆಳವಾಗಿ ಬೇರೂರಿರುವದಿಲ್ಲ; ಯಾವುದೋ ಒಂದು ಪ್ರದರ್ಶನವನ್ನು ನೋಡಿ ಇದು ಹೀಗಿದ್ದರೆ ಅಥವಾ ಹಾಗಿದ್ದರೆ ಹೇಗೆ ಎಂದು ನಿರ್ಧಾರ ಮಾಡುವಂತಿತ್ತು. ನೋಡುವ ದೃಷ್ಟಿಕೋನದಲ್ಲಿ ಇದು ಒಂದು ಕುತೂಹಲ ಬದಲಾವಣೆಯಾಗಿದೆ.

ಇದು ಕಲೆಗಾರನಿದ್ದ ಹಾಗೆ, ತನಗೆ ತಾನೇ ರೂಪಕೊಡುವ ಕಲೆಗಾರ, ತನಗೆ ಅವಶ್ಯಕತೆಗೆ ತಕ್ಕಂತೆ, ಎರಡು ಮೂರು ಪ್ರಯೋಗಗಳನ್ನು ಮಾಡಿ, ತನ್ನೊಳಗೇ ಸಂಪೂರ್ಣವಾದುದನ್ನು ಸಾಧಿಸಿ, ಹೊಸ ಪ್ರಕಟಣೆಗೆ ಯೋಗ್ಯವನ್ನಾಗಿ ಮಾಡಿಕೊಳ್ಳುತ್ತಾ ಹೊಸ ಪ್ರಕಟಣೆಯ ಅವಶ್ಯಕತೆಗೆ ಅನುಗುಣವಾಗಿ ತಯಾರಾಗುತ್ತಾ; ಏಕೆಂದರೆ ಮತ್ತೆ ಎಲ್ಲವನ್ನೂ ಹಿಂಪಡೆದು, ಕಲಬೆರಕೆ ಮಾಡಿ, ಮತ್ತೆ ಹೊಸದಾಗಿ ಹೊರತರುವ ಅವಶ್ಯಕತೆ ಬೇಡವಾಗಿದೆ. ಆದರೆ ಇದಕ್ಕಿಂತ ಬೇರೊಂದು ಇಲ್ಲದೆ, ಇದು ಕೇವಲ ಆಯ್ಕೆಯ ಪ್ರಶ್ನೆಯಾಗಿದೆ. ತದ ನಂತರ, ಪ್ರಕಟಣೆಯಾಗಿರುವುದೇ ತನ್ನನ್ನು ತಾನು ವಸ್ತುನಿಷ್ಠವಾಗಿ ವ್ಯಕ್ತಪಡಿಸುವ ಆನಂದಕ್ಕಾಗಿ – ಅದು ಆನಂದ ಅಥವಾ ಅವಶ್ಯಕತೆಯಿರಬಹುದು – ಮತ್ತು ಒಂದುಬಾರಿ ಏನು ರೂಪುಗೊಂಡಿದೆಯೋ ಅದು ನಮ್ಯವಾಗಿದ್ದರೆ, ಸ್ವೀಕರಿಸಿಕೊಳ್ಳುವಂತಿದ್ದರೆ, ಹೊಂದಿಕೊಳ್ಳುವ ಹಾಗೂ ವಿಶಾಲವಾಗಿದ್ದು, ಹೊಸ ಶಕ್ತಿಗಳ ಪ್ರಕಟಣೆಯಿಂದ ರೂಪುಗೊಳ್ಳಲು ಯೋಗ್ಯವಾಗಿದ್ದರೆ, ಎಲ್ಲವನ್ನೂ ನಶಿಸಿ ಮತ್ತೆ ಮರುಸೃಷ್ಟಿಮಾಡುವ ಅವಶ್ಯಕತೆಯಿರುವುದಿಲ್ಲ.

ಪ್ರತಿ ತಿರುವಿನ ಹಿಂದೆ ಒಂದು ಗಾದೆ ಮಾತಿದೆ, “ಯಾವುದಕ್ಕೆ ಪ್ರಾರಂಭವಿದೆಯೋ ಅದಕ್ಕೆ ಅಂತ್ಯವಿದೆ.” ಇದು ಮಾನವನ ಮಾನಸಿಕ ಸೃಷ್ಟಿಯಾಗಿದ್ದು, ಇದು ಅವಶ್ಯಕವಾಗಿ ನಿಜವಿರಬೇಕೇನಿಲ್ಲ. ಆದರೆ, ಆತ್ಮನಿಷ್ಠ ಸ್ಥರದಿಂದ ನೋಡಿದಾಗ ಯಾವಾಗ, ನಾವು ಎತ್ತರದಿಂದ ಅಥವಾ ಕೇಂದ್ರ ಬಿಂದುವಿನಿಂದ ನೋಡಿದಾಗ ಈ ಸಮಸ್ಯೆಯು ತೀವ್ರತರವಾದುದಲ್ಲ ಎಂದೆನಿಸುತ್ತದೆ.

ಇದೆಲ್ಲವೂ ಒಂದೇ ರೀತಿಯಾಗಿ ಕಾಣಿಸುತ್ತದೆ... ಆದರೆ “ತತ್ವ”ವಲ್ಲ – ಏಕೆಂದರೆ ಇದು ತತ್ವವಲ್ಲ – ವ್ಯಕ್ತಿಗಳಿಗೆ, ಜಗಗಳಿಗೆ, ವಿಶ್ವಗಳಿಗೆ ಒಂದು ನಿಯಮವಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/217–19** **– ಶ್ರೀಮಾತೆ**

# ವರ್ತಮಾನ

**– ಅನು: ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

**ಯಾವುದನ್ನು ನಿರಾಕರಿಸಲಾಗುವದು**

ಸರಿ, ಇರುವ ಒಂದೇ ಒಂದು ದಾರಿಯೆಂದರೆ.... ನಿನಗೆ ಆಲಿಸುವದನ್ನು ತಡೆಯಲು ಸಾಧ್ಯವಾದರೆ, ಅದು ಉತ್ತಮ, ಆದರೆ ನೀನು ಆಲಿಸಿದರೆ, ನೀಡಬಹುದಾದ ಒಂದೇ ಉತ್ತರ: "ನೀನು ಏನೇ ಹೇಳಿದರೂ ನಾನು ಯೋಚಿಸುವದಿಲ್ಲ, ನಾನು ಗಮನಿಸುವದಿಲ್ಲ – ನಿರಂತರವಾಗಿ. "ನೀನು ಮಂಕನಾಗುವೆ" – ನಾನು ಕಾಳಜಿವಹಿಸುವದಿಲ್ಲ. "ನಿನ್ನ ಎಲ್ಲಾ ಕೆಲಸವನ್ನು ಹಾಳುಮಾಡಿಕೊಳ್ಳುವೆ" – ನಾನು ಬೇಸರ ಮಾಡಿಕೊಳ್ಳುವದಿಲ್ಲ.... ಆ ಎಲ್ಲಾ ಮೂರ್ಖ ವಾದಗಳಿಗೆ ಅದೇ ಉತ್ತರ: ನಾನು ಬೇಸರ ಮಾಡಿಕೊಳ್ಳುವದಿಲ್ಲ.

ಎಲ್ಲವನ್ನೂ ನೆರವೇರಿಸುವದು ದೈವತ್ವ ಎಂಬುದನ್ನು ನೀನು ಅನುಭವಿಸಿದರೆ, ಆಗ ದೃಢವಾದ ನಂಬಿಕೆಯೊಂದಿಗೆ ಹೇಳುವೆ, "ನಿನ್ನ ಎಲ್ಲಾ ವಾದಗಳು ನಿಷ್ಪ್ರಯೋಜಕವಾದವು; ದೈವದೊಂದಿಗೆ ಇರುವ ಸಂತಸ, ದೈವತ್ವದ ಪ್ರಜ್ಞೆ ಎಲ್ಲವನ್ನೂ ಮೀರಿ ಮುನ್ನಡೆಯುವದು" – ಸೃಷ್ಟಿಯನ್ನು ಮೀರಿಸುವದು, ಜೀವನವನ್ನು ಮೀರಿಸುವದು, ಸಂತೋಷ ಮತ್ತು ಸಫಲತೆಯನ್ನು ಅತಿಶಯಿಸುವದು, ಅದು ಎಲ್ಲವನ್ನು ದಾಟಿ ಮುಂದುವರೆಯುವದು (ಶ್ರೀಮಾತೆ ಒಂದು ಬೆರಳನ್ನು ಮೇಲೇರಿಸುವರು): **ಅದು**

ಅಷ್ಟೇ. ನಂತರ ಎಲ್ಲವೂ ಸಮರ್ಪಕವಾಗಿರುವದು. ಮತ್ತು ಅಲ್ಲಿಗೆ ಸಮಾಪ್ತಿ.

ಪ್ರಕೃತಿಯಲ್ಲಿರುವ ಅತ್ಯಂತ ಹೀನಾಯವಾದ ವಸ್ತುಗಳನ್ನು ಪ್ರಕಾಶಮಾನವಾದ ಸೂರ್ಯನ ಬೆಳಕಿಗೆ "ಅದು" ಎಳೆದು ತಂದಿತೋ, ಬಹಿರಂಗಗೊಳಿಸುಕೋ, ಆ ಶಕ್ತಿಯ ಸಂಪರ್ಕಕ್ಕೆ ತಂದಿತೋ.

ಹೌದು!

ಅದನ್ನು ಅಂತ್ಯಗೊಳಿಸಲು.

ಜೊತೆಗೆ, ನಮ್ಮಲ್ಲಿಯ ಸತ್ಸಂಕಲ್ಪದ ಮೇಲೂ ಅದು ಆಕ್ರಮಣ–ಮಾಡುತ್ತಿರುವಂತಿದೆ.

ಕೆಲ ಸಮಯದ ನಂತರ ಅದು ಅತ್ಯುತ್ತಮವಾದುದಾಗಿ ಪರಿಣಮಿಸುವದು. ಆದರೆ ಕೆಲ ಕಠಿಣ ಕ್ಷಣಗಳನ್ನು ಆತನು ಎದುರಿಸಬೇಕಾಗುವದು.

ಹೌದು. ಹೌದು, ಎಲ್ಲವನ್ನೂ ನಿರಾಕರಿಸಲಾಗುವದೇನೋ ಎಂದು ಸಹ ನೀನು ಒಂದೊಂದು ಸಲ ಆಶ್ಚರ್ಯಪಡುವೆ.

(ಶ್ರೀಮಾತೆ ನಗುವರು) ಅದು ಸರಿಯಲ್ಲ! ತಪ್ಪು. ವಿರೋಧವನ್ನು ಮಾತ್ರ ತಳ್ಳಿಹಾಕಲಾಗುವದು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 12 ಏಪ್ರಿಲ್, 1972**

**ಆಪತ್ತು ಮತ್ತು ಅಪಾಯ**

ಈ ಗುರಿಗಾಗಿ ಮಾನವನು ಈಗ ಭೌತಿಕ ಮತ್ತು ಆರ್ಥಿಕ ಜೀವನದ ಮುನ್ನಡೆಗಾಗಿ ಹೆಚ್ಚಿನ ಪ್ರಜ್ಞಾಭರಿತ ಒತ್ತಡಕ್ಕೆ ಒಳಗಾಗುತ್ತಿದ್ದಾನೆ. ಈ ರೀತಿಯ ಚಲನೆಯು ಪುರಾತನ ಮಾನವನು ಅಸಂಸ್ಕೃತ ಜೀವನದಲ್ಲಿ ಅರ್ಥಿಕತೆ ಮತ್ತು ವಸ್ತುಗಳಿಗಾಗಿ ಹಾತೊರೆದು ಅವುಗಳಿಗಾಗಿ ಮುನ್ನುಗ್ಗುತ್ತಿದ್ದ ಹಾದಿಯಲ್ಲೇ ಸಾಗುತ್ತಿದೆ ಎಂದು ಹೇಳಬಹುದು. ಈಗ ಆತನು ಸಂಪೂರ್ಣವಾಗಿ ಔನ್ನತ್ಯಕ್ಕೇರಿದ ವಿಜ್ಞಾನವನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಂಡಿದ್ದಾನೆ. ಅಭಿವೃದ್ಧಿ ಹೊಂದಿದ ಮಾನವತೆಯ ಮನಸ್ಸಿನ ಸಂಪತ್ತುಗಳು ಆತನೊಂದಿಗೆ ಇವೆ. ಇವುಗಳೊಂದಿಗೆ ಆಧ್ಯಾತ್ಮಿಕವಾಗಿ ಆತನು ಹಿಂದಕ್ಕೆ ಚಲಿಸುತ್ತಿದ್ದಾನೆ. ಮಾನವ ಜೀವನದ ಸಂಕೀರ್ಣತೆಯಲ್ಲಿ ಪರಿಪೂರ್ಣ ಆರ್ಥಿಕ ಮತ್ತು ಭೌತಿಕ ಅಸ್ತಿತ್ವದ ಅಂಶಗಳು ತಮ್ಮದೇ ಆದ ಸ್ಥಾನವನ್ನು ಪಡೆದುಕೊಂಡಿವೆ. ಆದರೆ ಇಡೀ ಮಾನವ ಜನಾಂಗದ ವಿಕಸನಕ್ಕೆ ಸಂಬಂಧಿಸಿದ ಪ್ರಮುಖ ಒತ್ತಡವೇ ಇದು ಆದಾಗ ಅಪಾಯಕಾರಿ. ಮೊಟ್ಟ ಮೊದಲ ಅಪಾಯವೇನೆಂದರೆ ನಾಗರೀಕ ರೂಪದಲ್ಲಿ ಪುರಾತನ ಪ್ರಾಣಿಕ ಮತ್ತು ಭೌತಿಕ ಅಸಂಸ್ಕೃತ ಮಾನವನ ಪುನರಾಗಮನ. ಬಲಶಾಲಿಗಳಾದ ಪ್ರಾಚೀನ ಜನರಿಂದ ದುರ್ಬಲ ನಾಗರೀಕತೆಯ ವಿಧ್ವಂಸ ಮತ್ತು ನಾಶವಾಗುವಿಕೆಯ ಆಪತ್ತನ್ನು ತಪ್ಪಿಸಲು ವಿಜ್ಞಾನವು ನಮ್ಮ ಮುಂದೆ ಅನೇಕ ವಿಧಾನಗಳನ್ನು ರೂಪಿಸಿ ನೀಡಿದೆ. ಆದರೆ ನಾವು ಈಗ ಎದುರಿಸಬೇಕಾಗಿರುವದು ನಾಗರೀಕ ಮಾನವನೊಳಗಿನ ಅಸಂಸ್ಕೃತ ಮಾನವನನ್ನು. ಅದೇ ದುರಂತ. ಅದನ್ನೇ ನಾವು ಸುತ್ತಮುತ್ತಲೂ ನೋಡುತ್ತಿರುವದು. ನಮ್ಮಲ್ಲಿಯ ಪ್ರಾಣಿಕ ಮತ್ತು ಭೌತಿಕ

ಮಾನವನನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವ ಮತ್ತು ಔನ್ನತ್ಯಕ್ಕೆ ಏರಿಸುವ ಉನ್ನತ ಹಾಗು ಒತ್ತಾಯಪೂರ್ವಕವಾದ ಮಾನಸಿಕ ಮತ್ತು ನೀತಿ ಆಧಾರಿತ ಧ್ಯೇಯವು ಇಲ್ಲದಿದ್ದರೆ ಅದು ಬಂದೇ ಬರುತ್ತದೆ. ಜೊತೆಗೆ ಆಂತರಿಕ ಸತ್ತೆಯೊಳಗೆ ಆತನನ್ನು ಉದ್ಧರಿಸಿ ಕೊಂಡೊಯ್ಯುವ ಆಧ್ಯಾತ್ಮಿಕ ಧ್ಯೇಯದ ಅಗತ್ಯವೂ ಇದೆ. ಈ ಪುನರಾವರ್ತನೆಯನ್ನು ತಪ್ಪಿಸಿಕೊಂಡರೂ ಮತ್ತೊಂದು ಅಪಾಯವಿದೆ – ಅದೇ ವಿಕಸನದ ಮುಕ್ತಾಯವನ್ನು ಬಯಸುವದು. ಯಾವುದೇ ಗುರಿ ಅಥವಾ ಮುನ್ನೋಟವಿಲ್ಲದೆ ಒಂದು ದೃಢ ಹಾಗು ಆರಾಮವಾದ ಯಾಂತ್ರಿಕ ಸಾಮಾಜಿಕ ಜೀವನದ ಘನೀಕರಣವು ಉಂಟಾಗುವ ಸಂಭವವೂ ಇದೆ. ಅದರ ಪ್ರಗತಿಯಲ್ಲಿ ತರ್ಕ ಮಾತ್ರವೇ ಹೆಚ್ಚಿನ ಕೆಲಸ ಮಾಡಲು ಸಾಧ್ಯವಿಲ್ಲ. ಆದರೆ ಪ್ರಾಣ ಮತ್ತು ದೇಹ ಮತ್ತು ಆತನೊಳಗಿನ ಯಾವುದೋ ಉನ್ನತ ಹಾಗು ಶ್ರೇಷ್ಠ ಅಂಶಗಳ ನಡುವೆ ಮಧ್ಯವರ್ತಿಯಾಗಿದ್ದರೆ ಸಾಧ್ಯವಾಗುವದು. ಏಕೆಂದರೆ ಅದು ಆಂತರ್ಯದ ಅವಶ್ಯಕತೆ. ಇನ್ನೂ ಅರಿವಿಗೆ ಬಾರದೆ ಆಂತರ್ಯದಲ್ಲಿ ಇರುವದರ ಮುಂದೂಡುವಿಕೆಯೇ ಅದಾಗಿದೆ. ಆತನು ವಿಕಸನದ ಒತ್ತಡವಾದ ಆಧ್ಯಾತ್ಮಿಕ ನಿಶ್ಯಬ್ದತೆ ಅಥವಾ ಮನಸ್ಸನ್ನು ಒಮ್ಮೆ ತಲುಪಿದನೆಂದರೆ ಅದು ಆತನಲ್ಲಿ ಸುರಕ್ಷಿತವಾಗಿ ಇರುವದು. "ಅದನ್ನು" ತೊರೆದರೆ ಆತನು ಹಿಂದಿನ ಸ್ಥಿತಿಗೆ ಮರಳಿ ಪುನಃ ಪ್ರಾರಂಭಿಸಬೇಕು ಅಥವಾ ವಿಕಸನದಲ್ಲಿ ಸೋತ ಪ್ರಯತ್ನವೆಂದು ತಿಳಿದು ಇತರ ಜೀವ ರಚನೆಗಳ ರೀತಿಯಲ್ಲಿ ಇಲ್ಲವಾಗಬೇಕು. ಏಕೆಂದರೆ ಆತನು ವಿಕಸನದ ಧ್ಯೇಯಕ್ಕಾಗಿ ಕೆಲಸ ಮಾಡಲು ಅಥವಾ ಆ ಧ್ಯೇಯವನ್ನು ಉಳಿಸಿಕೊಳ್ಳಲು ಅಶಕ್ತನಾಗಿರುವನು. ಅತಿ ಹೆಚ್ಚು ಎಂದರೆ ಉಳಿದ ಪ್ರಾಣಿಗಳ ರೀತಿಯಲ್ಲಿ ಒಂದು ವಿಧದ ಅರ್ಧಂಬರ್ಧ ಪರಿಪೂರ್ಣತೆಯ ಮಾದರಿಯಲ್ಲಿ ಬಂಧಿತನಾಗಿ ನೆಲೆಸುವನು. ಆತನಿಂದ ಆಚೆ ಇನ್ನೂ ಶ್ರೇಷ್ಠ ಸೃಷ್ಟಿಯ ಕಡೆಗೆ ಪ್ರಕೃತಿಯು ಮುಂದುವರೆಯುವದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 21/1090**

**ವಿಕಸನದ ಸಮಸ್ಯೆ**

ಒಂದು ವಿಕಸನದ ಸಮಸ್ಯೆಯನ್ನು ಈಗಿನ ಮಾನವ ಕುಲವು ಅನುಭವಿಸುತ್ತಿದೆ. ಅದರೊಳಗೆ ನಿಯತಿಯ ಆಯ್ಕೆಯು ಅಡಗಿದೆ. ನಿರ್ದಿಷ್ಟ ದಿಕ್ಕುಗಳಲ್ಲಿ ಅಗಾಧವಾದ

ಅಭಿವೃದ್ಧಿಯನ್ನು ಮಾನವ ಮನಸ್ಸು ತಲುಪಿರುವ ಹಂತದಲ್ಲಿ ಈಗ ನಾವು ಇದ್ದೇವೆ. ಆದರೆ ಇತರವುಗಳಲ್ಲಿ ಅದು ಗಾಭರಿಗೊಂಡು ತಟಸ್ಥವಾಗಿದೆ ಮತ್ತು ಅದಕ್ಕೆ ಮುಂದಿನ ಹಾದಿಯು ಕಾಣುತ್ತಿಲ್ಲ. ಸದಾಕಾಲ ಕ್ರಿಯಾಶೀಲವಾಗಿರುವ ಮಾನವನ ಮನಸ್ಸು ಮತ್ತು ಪ್ರಾಣ ಸಂಕಲ್ಪವು ಬಾಹ್ಯ ಜೀವನದ ಒಂದು ರಚನೆಯನ್ನು ರೂಪಿಸಿದೆ. ಅದು ಸಂಕೀರ್ಣವಾಗಿದ್ದು ಕಾಪಾಡಲು ಅಸಾಧ್ಯವಾದ ಅಗಾಧತೆಯನ್ನು ಹೊಂದಿದೆ. ಇದು ಆತನ ಮಾನಸಿಕ, ಪ್ರಾಣಿಕ ಮತ್ತು ಭೌತಿಕ ಹಕ್ಕುಗಳು ಮತ್ತು ಅಪೇಕ್ಷೆಗಳನ್ನು ಪೂರೈಸಲಿಕ್ಕಾಗಿ ನಿರ್ಮಿತವಾಗಿದೆ. ಜೊತೆಗೆ ಒಂದು ಸಂಯುಕ್ತ ರಾಜಕೀಯ, ಸಾಮಾಜಿಕ, ಆಡಳಿತ ರೂಢ, ಆರ್ಥಿಕ, ಸಾಂಸ್ಕೃತಿಯ ಯಂತ್ರವಾಗಿಯೂ ರೂಪಿತವಾಗಿದೆ. ಅಲ್ಲದೆ ಆತನ ಬೌದ್ಧಿಕ, ಇಂದ್ರಿಯ, ಕಲೆ ಮತ್ತು ಭೌತಿಕ ತೃಪ್ತಿಗಳ ಒಂದು ವ್ಯವಸ್ಥಿತ ಸಮಗ್ರ ಮಾರ್ಗವೂ ಆಗಿದೆ.

ಮಾನವನು ಪರಿಮಿತ ಮನಸ್ಸಿನ ಸಾಮರ್ಥ್ಯ ಮತ್ತು ಶಕ್ತಿಯನ್ನು ಹೊಂದಿರುವನು. ಈ ಮನಸ್ಸಿಗೆ ಅತಿ ದೊಡ್ಡದೆನಿಸಬಹುದಾದ ನಾಗರೀಕತೆಯ ವ್ಯವಸ್ಥೆಯನ್ನು ಆತನು ಸೃಷ್ಟಿಸಿರುವನು. ಜೊತೆಗೆ ಆತನ ಆಧ್ಯಾತ್ಮಿಕ ಮತ್ತು ನೈತಿಕ ಸಾಮರ್ಥ್ಯವು ಮತ್ತಷ್ಟು ಪರಿಮಿತವಾಗಿರುವದರಿಂದ ಈ ವ್ಯವಸ್ಥೆಯನ್ನು ಉಪಯೋಗಿಸಿಕೊಂಡು ಸಂಭಾಳಿಸುವದು ಬಹಳ ತ್ರಾಸದಾಯಕವಾಗಿದೆ. ಆತನು ಇತಿಮಿತಿಯಿಲ್ಲದೆ ತಪ್ಪುಗಳನ್ನು ಮಾಡುವ ಅಹಂಕಾರದ ಲಾಲಸೆಗಳಿಗೆ ಒಳಗಾಗಿ ಅದರ ಸೇವಕನಾಗಿರುವದು ಭಯಂಕರವಾಗಿದೆ. ಏಕೆಂದರೆ ಆತನ ಪ್ರಜ್ಞೆಯ ಮೇಲ್ಮೈಗೆ ಯಾವ ಜ್ಞಾನಭರಿತ ಅಂತರ್ ದರ್ಶನದ ಆತ್ಮವಾಗಲೀ ಅಥವಾ ಔನ್ನತ್ಯವನ್ನು ದೃಷ್ಟಿಸಬಲ್ಲ ಮನಸ್ಸಾಗಲಿ ಇನ್ನೂ ಬಂದಿಲ್ಲ. ಹೀಗಾಗಿ ಈ ಮೂಲಭೂತ ಜೀವನದ ಪೂರ್ಣತೆಯನ್ನು ಅಡಿಪಾಯವಾಗಿ ಇಟ್ಟುಕೊಂಡು ಅದರ ಮೇಲೆ ಅದನ್ನು ಮೀರಿಸಿದ ಮತ್ತಿನ್ನೇನೂ ಸ್ವಚ್ಛಂದವಾಗಿ ವೃದ್ಧಿಸಲು ಸಾಧ್ಯವಾಗಿಲ್ಲ. ಜೀವನ ಮಾರ್ಗದ ಈ ನವ ಪರಿಪೂರ್ಣತೆಯು ಆತನ ಆರ್ಥಿಕ ಮತ್ತು ಭೌತಿಕ ಅವಶ್ಯಕತೆಗಳ ನಿರಂತರ ಅತೃಪ್ತ ಒತ್ತಡಗಳಿಂದ ಮುಕ್ತವಾಗುವ ಸಾಮರ್ಥ್ಯವನ್ನು ಹೊಂದಿರಬಹುದು. ಆದುದರಿಂದ ಭೌತಿಕ ಅಸ್ತಿತ್ವವನ್ನು ಮೀರಿದ ಇನ್ನೂ ಹೆಚ್ಚು ಶ್ರೇಷ್ಠವಾದ ಗುರಿಗಳಿಗಾಗಿ ಮಾಡುವ ಸಂಪೂರ್ಣ ಪ್ರಯತ್ನದ ಅವಕಾಶವಾಗಿದೆ. ಉನ್ನತ ಸತ್ಯ, ಉತ್ತಮತೆ ಮತ್ತು ಸೌಂದರ್ಯಗಳ ಅನ್ವೇಷಣೆಗಾಗಿ; ಇನ್ನೂ ಉನ್ನತ ಮತ್ತು ದೈವಿಕ ಚೈತನ್ಯದ ಅನ್ವೇಷಣೆಗಾಗಿ

(ಸತ್ತೆಯ ಇನ್ನೂ ಹೆಚ್ಚು ಉನ್ನತವಾದ ಪರಿಪೂರ್ಣತೆಗಾಗಿ). ಆ ಚೈತನ್ಯವು ಮಧ್ಯೆ ಪ್ರವೇಶಿಸಿ ಜೀವನವನ್ನು ಉಪಯೋಗಿಸಬಹುದು. ಆದರೆ ಸಮಗ್ರ ಅಹಂಕಾರದ ಆಕ್ರಮಣಕಾರಿ ವಿಸ್ತಾರತೆ ಮತ್ತು ಹೊಸ ಆಸೆಗಳನ್ನು ಮತ್ತಷ್ಟು ಅಧಿಕಗೊಳಿಸಲಿಕ್ಕಾಗಿ ಉಪಯೋಗಿಸಲಾಗುತ್ತಿದೆ. ಇದೇ ಸಮಯದಲ್ಲಿ, ವಿಶ್ವಾತೀತ ಶಕ್ತಿಯ ಅನೇಕ ಸಾಮರ್ಥ್ಯಗಳನ್ನು ವಿಜ್ಞಾನವು ಆತನಿಗೆ ಕೊಡುಗೆಯಾಗಿ ನೀಡಿದೆ. ಮತ್ತು ಇಡೀ ಮಾನವ ಜನಾಂಗದ ಜೀವನವನ್ನು ಭೌತಿಕವಾಗಿ ಒಗ್ಗೂಡಿಸಿದೆ. ಆದರೆ ಓರ್ವ ಚಿಕ್ಕ ಮಾನವನು ವ್ಯಕ್ತಿಗತವಾಗಿ ಅಥವಾ ಸಮುದಾಯದ ಅಹಂಕಾರವು ಈ ವಿಶ್ವಾತೀತ ಶಕ್ತಿಯನ್ನು ಉಪಯೋಗಿಸುತ್ತಿದೆ. ಆದರೆ ಈ ಅಹಂಕಾರದಲ್ಲಿನ ಜ್ಞಾನದ ಬೆಳಕು ಅಥವಾ ಅದರ ಚಲನೆಗಳಲ್ಲಿ ವಿಶ್ವಾತೀತವಾದುದೇನು ಕಂಡುಬರುತ್ತಿಲ್ಲ. ಈ ಭೌತಿಕವಾಗಿ ಒಗ್ಗೂಡಿದ ಮಾನವ ಪ್ರಪಂಚದಲ್ಲಿ ಒಂದು ಸತ್ಯ ಜೀವನದ ಏಕತ್ವವನ್ನು ಸೃಷ್ಠಿಸುವ ಆಂತರಿಕ ಭಾವ ಅಥವಾ ಸಾಮರ್ಥ್ಯವು ಇಲ್ಲವಾಗಿದೆ. ಒಂದು ಮಾನಸಿಕ ಏಕತ್ವ ಅಥವಾ ಆಧ್ಯಾತ್ಮಿಕ ಏಕತ್ವದ ಸೃಷ್ಠಿಯೂ ಸಹ ಸಾಧ್ಯವಾಗುತ್ತಿಲ್ಲ. ವ್ಯಕ್ತಿಗತ ಮತ್ತು ಒಗ್ಗೂಡಿದ ಭೌತಿಕ ಆಸೆ ಮತ್ತು ಅವಶ್ಯಕತೆಗಳ ಆಗ್ರಹ ಒಂದಕ್ಕೊಂದು ಹೊಡೆದಾಡುವ ಮಾನಸಿಕ ಚಿಂತನೆಗಳ ಸಂಪೂರ್ಣ ಅವ್ಯವಸ್ಥೆಗಳು ಮಾತ್ರ ಅಲ್ಲಿ ಇವೆ. ಜೊತೆಗೆ ಭಾವನಾತ್ಮಕ ಹಕ್ಕು ಮಂಡನೆಗಳು ಮತ್ತು ಅಪೇಕ್ಷೆಗಳು, ಅಜ್ಞಾನಭರಿತ ಜೀವನದ ಓಟದಲ್ಲಿಯ ಪ್ರಚೋದನೆಗಳು, ವ್ಯಕ್ತಿಗಳು, ವರ್ಗಗಳು, ರಾಷ್ಟ್ರಗಳ ಜೀವನ ತೃಪ್ತಿಗಾಗಿ ಹಸಿವುಗಳು ಮತ್ತು ಕರೆಗಳು, ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕತೆಗೆ ಸಂಬಂಧಿತ ಅಚ್ಚುಮೆಚ್ಚಿನ ಯೋಜನೆಗಳು ಮತ್ತು ಭಾವನೆಗಳ ಒಂದು ವಿಸ್ತಾರವಾದ ಅನಪೇಕ್ಷಿತ ಬೆಳವಣಿಗೆಯು ಸಹ ಇದೆ.

ಎಲ್ಲಾ ಸಮಸ್ಯೆಗಳನ್ನು ಪರಿಹರಿಸುವೆನೆನ್ನುವ ಘೋಷಣಾ ವಾಕ್ಯಗಳ ಮಿಶ್ರಣದ ವಂಚನೆಗಳಿಗಾಗಿ ಜನರು ದಮನ ಮಾಡಲು ಮತ್ತು ದಮನ ಮಾಡಿಸಿಕೊಳ್ಳಲು ಸಿದ್ಧವಿರುವರು. ಸಾಯಿಸಲು ಮತ್ತು ಇತರರಿಂದ ಸಾಯಲು ಸಹ ಸಿದ್ಧವಿರುವರು. ಆತನ ಮುಂದಿರುವ ಅತ್ಯಂತ ಭೀಕರವಾದ ಮಾರ್ಗದ ಮೂಲಕ ಅದನ್ನು ಏನಾದರೂ ಮಾಡಿ ಹೇರಬೇಕೆಂದು ಬಯಸುತ್ತಿರುವರು. ಇದರಿಂದ ತಾವು ಏನೋ ಗುರಿಯನ್ನು ಸಾಧಿಸಲು ಸಾಧ್ಯವಾಗುವದು ಎಂಬ ನಂಬಿಕೆಯನ್ನು ಅವರು ಹೊಂದಿರುವರು. ವೃದ್ಧಿಸುತ್ತಿರುವ ವಿಶ್ವಾತೀತತೆಯ ಕಡೆಗೆ ಮಾನವನ ಪ್ರಾಣ ಮತ್ತು ಮನಸ್ಸಿನ ವಿಕಸನವು ಅವಶ್ಯಕವಾಗಿ ಮುನ್ನಡೆಸಬೇಕು.

ಆದರೆ ಇದು ಅಹಂಕಾರ ಮತ್ತು ಖಂಡ ಖಂಡವಾಗಿ ವಿಭಜಿತಗೊಳಿಸುವ ಮನಸ್ಸಿನ ಆಧಾರದ ಮೇಲೆ ಆದಾಗ ಈ ವಿಶ್ವಾತೀತದ ಕಡೆಗಿನ ತೆರೆಯುವಿಕೆಯು ಸಮರಸರಹಿತ ಚಿಂತನೆಗಳು ಮತ್ತು ಪ್ರೇರಣೆಗಳು ಸೃಷ್ಠಿಯಾಗಿ ಪ್ರವರ್ಧಮಾನಕ್ಕೆ ಬರುವಂತೆ ಮಾಡುವದು. ಅಸಂಖ್ಯಾತ ಶಕ್ತಿಗಳು ಮತ್ತು ಅಪೇಕ್ಷೆಗಳು ಸಹ ಸೃಷ್ಠಿಯಾಗುವವು. ಅಧಿಕ ಅಸ್ತಿತ್ವವನ್ನು ಪಡೆದ, ಅನುರೂಪವಾಗಿರದ ಮತ್ತು ಮಿಶ್ರಿತ ಮಾನಸಿಕ, ಭಾವನಾತ್ಮಕ ಮತ್ತು ಭೌತಿಕ ವಸ್ತುಗಳ ಒಂದು ಅವ್ಯವಸ್ಥಿತ ರಾಶಿಯು ಸಹ ಹೊರಹೊಮ್ಮುವದು. ಆದರೆ ಇದು ಸೃಷ್ಠಿಶೀಲ ಸಾಮರಸ್ಯವನ್ನು ಉಂಟುಮಾಡುವ ಚೇತನದ ಬೆಳಕಿನಿಂದ ಆಧಾರಿತವಾಗಿಲ್ಲದಿರುವದರಿಂದ ಸಾರ್ವತ್ರಿಕ ಗೊಂದಲ ಮತ್ತು ವಿರೋಧಗಳಿಗೆ ಸಿಕ್ಕು ಒದ್ದಾಡಬೇಕಾಗುವದು ಮತ್ತು ಇದರಿಂದ ಯಾವುದೇ ಉನ್ನತ ಸಮರಸ ಜೀವನವನ್ನು ನಿರ್ಮಿಸಲು ಸಾಧ್ಯವಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 21/1089–91**

**ವಿರೋಧಿಸುವ ಅಂಶಗಳು**

ಸರಿ, ಈ ಎರಡು ಅಂಶಗಳು ಅತ್ಯಧಿಕವಾಗಿ ವಿರೋಧಿಸುವವು. ಮಾನವ ಪ್ರಜ್ಞೆಯಲ್ಲಿ ಅಜ್ಞಾನದ ಶಕ್ತಿಗಳು, ಅಪ್ರಜ್ಞೆ ಅಥವಾ ನಾನು ಸಾಮಾನ್ಯವಾಗಿ ಹೇಳಬೇಕೆಂದರೆ ದುಷ್ಟ–ಸಂಕಲ್ಪಗಳಿಗೆ ಇದು ಅತ್ಯಧಿಕವಾಗಿ ಒಳಗಾಗಿರುವದು. ಇದೇ ಎಲ್ಲಾ ಪ್ರಗತಿ ಮತ್ತು ಸತ್ಯದ ಕಡೆಯ ಮುನ್ನಡೆಯನ್ನು ಸಂಪೂರ್ಣವಾಗಿ ಪ್ರತಿರೋಧಿಸುವದು. ಪ್ರತಿಯೊಬ್ಬ ವ್ಯಕ್ತಿಯಲ್ಲಿ ಇದೇ ವಿರೋಧಿಸುವ ಅಂಶ. ಈ ಭಾಗವು ಸೂಕ್ಷ್ಮವಾಗಿ ಜಡವಾಗಿರುವದಲ್ಲದೆ ತನಗೆ ಹಿಂದೆ ಅನುಭವಕ್ಕೆ ಬಂದಿರದ ಯಾವುದನ್ನೂ ಅರ್ಥಮಾಡಿಕೊಳ್ಳಲು ನಿರಾಕರಿಸುವದು. ಈ ಭಾಗವನ್ನು ಕೈಗೆತ್ತಿಕೊಂಡು ಪರಿವರ್ತನೆಗೊಳಿಸುವದು ನಿಜಕ್ಕೂ ಒಂದು ಶೌರ್ಯಭರಿತ ಕಾರ್ಯವೆಂದೇ ಹೇಳಬಹುದು. ಸರಿ, ನಾವು ಇದರ ಪ್ರಯತ್ನವನ್ನು ಸಹ ಮಾಡುತ್ತಿದ್ದೇವೆ. ಇದರಲ್ಲಿ ಸಫಲರಾಗುವವರೆಗೂ, ಭೂಮಿಯ ಪರಿಸ್ಥಿತಿಗಳನ್ನು ಬದಲಾಯಿಸುವದು ಅಸಾಧ್ಯ.

ರಾಜಕೀಯ ಮತ್ತು ವರಮಾನದ ಪರಿಸ್ಥಿತಿಗಳಿಗಿಂತ ಸಾಮಾಜಿಕ ಜೀವನವನ್ನು ಬದಲಾಯಿಸುವದು ಹೆಚ್ಚು ಸುಲಭ ಸಾಧ್ಯವೆಂದೇ ಹೇಳಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/167–68**

## ಒಂದು ಅತ್ಯಂತ ಕ್ಲಿಷ್ಟಕರ ಅಪಾಯದ ಸೂಚನೆ

ಅಲ್ಲಿದೆ. ಇದೇ ಸಂದರ್ಭ. ಕಳೆದ ಯುದ್ಧವಾದ ನಂತರ ಇದು ಇನ್ನೂ ಹೆಚ್ಚು ಹೀನಾಯ ಪರಿಸ್ಥಿತಿಯನ್ನು ತಲುಪಿದೆ. ಸಮಸ್ಯೆಯು ವರ್ಷದಿಂದ ವರ್ಷಕ್ಕೆ ಇನ್ನೂ ಹೆಚ್ಚು ಉಲ್ಬಣವಾಗುತ್ತಿದೆ.

ಯಾರಾದರೂ ತಾವು ಎಂತಹ ವಿಚಾರ ಹೀನ ಪರಿಸ್ಥಿತಿಗೆ ಬಂದಿರುವೆವು ಎಂಬುದರ ಅನುಭವ ಪಡೆಯುವರು. ದುರದೃಷ್ಟವಶಾತ್, ತಮ್ಮ ಮೂಲ ದ್ರವ್ಯವು ಕೊನೆಗೊಂಡಿರುವದರಿಂದ, ಅತ್ಯಂತ ಕ್ಲಿಷ್ಟಕರವಾಗಿರುವದನ್ನು ಸರಳಗೊಳಿಸಲು ಭೂಮಿಯ ವಾತಾವರಣದಲ್ಲಿ ಒಂದು ಚಿಂತನೆಯು ಉದ್ಭವಿಸಿದೆ. ಆ ಚಿಂತನೆಯು ಅಸ್ವಾಭಿವಿಕ ಅಥವಾ ವಿವೇಚನಾರಹಿತ ಎಂದು ಹೇಳಬಹುದು. ಆದರೆ ಅಸಂತೋಷಕರವಾದ ವಿಷಯವೇನೆಂದರೆ ಅದು ಅಸ್ವಾಭಿಕತೆಗಿಂತಲೂ ಹೆಚ್ಚು ದುರದೃಷ್ಟಕರವಾದ ಸಂಗತಿ – ಒಂದು ದೊಡ್ಡ ಕ್ರಾಂತಿಯು ಸಂಭವಿಸಿದರೆ ನಂತರದಲ್ಲಿ ಉತ್ತಮತೆಯು ಅಸ್ತಿತ್ವಕ್ಕೆ ಬರಬಹುದೇನೋ ಎಂಬ ಚಿಂತನೆ. ನಿಷೇಧಗಳು, ಅಸಾಧ್ಯತೆಗಳು, ತಡೆಯಾಜ್ಞೆಗಳು, ನಿಯಮಗಳು, ಪ್ರತಿಕ್ಷಣದ ಗೋಜಲುಗಳ ನಡುವೆ ಸಿಲುಕಿಕೊಂಡು ನಾವು ಎಷ್ಟು ತುಳಿತಕ್ಕೆ ಒಳಗಾಗುತ್ತಿದ್ದೇವೆಂದರೆ ನಮಗೆ ಉಸಿರು ಕಟ್ಟಿದಂತಾಗುವದು. ಆಗ ಎಲ್ಲವನ್ನೂ ನಾವು ನಿರ್ಮೂಲನ ಮಾಡಿದರೆ ನಂತರದಲ್ಲಿ ಶುಭಪ್ರದವಾಗಬಹುದು ಎಂಬ ಪ್ರಶಂಸನೀಯ ಚಿಂತನೆಯು ಬಂದರೂ ಬರಬಹುದು! ... ಈ ಚಿಂತನೆಯು ವಾತಾವರಣದಲ್ಲಿ ಓಡಾಡುತ್ತಿದೆ. ಇಂತಹ ಅಸಾಧ್ಯ ಪರಿಸ್ಥಿತಿಗಳಿಗೆ ಎಲ್ಲಾ ಸರಸಕಾರಗಳು ತಮ್ಮನ್ನು ತಾವು ಒಳಪಡಿಸಿಕೊಂಡಿವೆ. ಅವರು ಎಂತಹ ಬಂಧನಗಳಿಗೆ ಒಳಪಟ್ಟಿರುವರೆಂದರೆ ಮುನ್ನಡೆಯಲು ಎಲ್ಲವನ್ನೂ ಮುರಿದು ನಾಶಪಡಿಸಿ ಸಾಗಬೇಕೆಂಬ ಯೋಚನೆಯು ಬಂದಿರುವದು.... (ಮೌನ). ದುರದೃಷ್ಟವಶಾತ್, ಈ ಕಾರ್ಯವು ಸಾಧ್ಯತೆಗಿಂತಲೂ ಒಂದು ಹೆಜ್ಜೆ ಮುಂದಿನದೇನೋ, ಇದು ನಿಜಕ್ಕೂ, ಒಂದು ಕ್ಲಿಷ್ಟಕರ ಅಪಾಯದ ಸೂಚನೆ. ಈ ತೊಡಕುಗಳ ಅವ್ಯವಸ್ಥೆಗಳಿಂದ ಹೊರಹೊಮ್ಮಲು ನಮಗೆ ಅಸಾಧ್ಯವಾಗುವದರಿಂದ ಜೀವನದಲ್ಲಿ ಮತ್ತಷ್ಟು ದುಸ್ಥಿತಿಯು ಉಂಟಾಗಬಹುದು. ಏಕೆಂದರೆ ಸ್ವತಃ ಮಾನವ ಜನಾಂಗವೇ ತನ್ನನ್ನು ತಾನು ಅದರಲ್ಲಿ ಮುಳುಗಿಸಿಕೊಂಡಿದೆ. ಅದು ಒಂದು ನೆರಳಿನಂತಿದೆ. ಆದರೆ ದುರದೃಷ್ಟವಶಾತ್, ಮಾನವ ಪ್ರಜ್ಞೆಯಿಂದ ಹೊರಹೊಮ್ಮಿರುವ ನವ ಭರವಸೆಯ ಒಂದು ಕ್ರಿಯಾಶೀಲ ನೆರಳು ಇದಾಗಿದೆ. ಅಧಿಕ ಸಾಮರಸ್ಯಭರಿತ

ಯಾವುದೋ ಒಂದರ ಅವಶ್ಯಕತೆ ಮತ್ತು ಭರವಸೆಗಳ ನೆರಳು. ಈಗಿನ ಜೀವನವು ಅದಕ್ಕೆ ಇನ್ನೂ ಹೆಚ್ಚು ತದ್ವಿರುದ್ಧವಾಗುತ್ತಿದ್ದಂತೆ, ಅವಶ್ಯಕತೆಯು ಮತ್ತಷ್ಟು ತೀಕ್ಷ್ಣವಾಗುವದು. ಒಂದಕ್ಕೊಂದು ವಿರುದ್ಧವಾಗಿರುವ ಎರಡೂ ಈಗ ಮುಖಾಮುಖಿಯಾಗಿವೆ. ಎಷ್ಟು ತೀಕ್ಷ್ಣತೆ–ಯೊಂದಿಗೆ ಎದುರಾಗಿವೆಯೆಂದರೆ ಒಂದು ಸ್ಫೋಟವು ಸಂಭವಿಸಬಹುದಾದ ಸಾಧ್ಯತೆಯಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/168–69**

**ಒಂದು ನಿಖರ ತಿರುವಿನ ನೆಲೆ**

ಏನೇ ಆದರೂ, ಮಾನವ ಜನಾಂಗವು ಪರಿಶುದ್ಧ ಸ್ವರ್ಣದ ಅವಸ್ಥೆಯನ್ನು ತಲುಪಿದೆಯೇ ಅಥವಾ ಅದು ಇನ್ನೂ ಕಠಿಣ ಪರೀಕ್ಷೆಗೆ ಒಳಗಾಗಬೇಕಾಗಿದೆಯೇ? ಅದೇ ಈಗ ನಮ್ಮ ಮುಂದಿನ ಪ್ರಶ್ನೆ.

ಒಂದು ವಿಷಯವಂತೂ ಸುಸ್ಪಷ್ಟ. ಮಾನವ ಜನಾಂಗವು ಸಂಪೂರ್ಣ ಪರಿಶುದ್ಧವಾದ ಸ್ವರ್ಣದ ಅವಸ್ಥೆಯನ್ನು ತಲುಪಿಲ್ಲ. ಅದು ನಿಶ್ಚಿತವಾಗಿ ಗೋಚರಿಸುತ್ತಿದೆ.

ಪರಿಶುದ್ಧ ಸ್ವರ್ಣವಾಗಿ ಮಾರ್ಪಾಡಾಗಲು ಕೆಲವೇ ಕೆಲವು ಸತ್ತೆಗಳು ಅಥವಾ ಮಾನವ ಜನಾಂಗದಲ್ಲಿ ಆಯ್ದ ಕೆಲವರು ಸಿದ್ಧರಿದ್ದಾರೆ. ಪ್ರಪಂಚದ ಚರಿತ್ರೆಯಲ್ಲಿ ಸಂಭವಿಸಿದ ಕೆಲವು ಘಟನೆಗಳು ಈ ಚಿಂತನೆಗೆ ಪುಷ್ಟಿ ನೀಡಿದೆ. ಜೊತೆಗೆ ನಾವು ಆ ಚಿಂತನೆಯನ್ನು ನಂಬುವಂತೆ ಮಾಡಿದೆ. ಆ ಜನರು ಘರ್ಷಣೆ ಇಲ್ಲದೆ ಶಕ್ತಿಯನ್ನು ಪ್ರಕಟಿಸಬಲ್ಲರು, ನಾಶ ಅಥವಾ ಧ್ವಂಸವಿಲ್ಲದೆ ಶೌರ್ಯವನ್ನು ಹೊರಹೊಮ್ಮಿಸಬಲ್ಲರು, ವಿಪ್ಲವವಿಲ್ಲದೆ ವೀರತ್ವವನ್ನು ಪ್ರದರ್ಶಿಸಬಲ್ಲರು.

ಆದರೆ ಮುಂದಿನ ಸಾಲುಗಳಲ್ಲಿಯೇ ಶ್ರೀ ಅರವಿಂದರು ಉತ್ತರವನ್ನು ನೀಡುವರು: "ಮಾನವನು ಆಧ್ಯಾತ್ಮಿಕವಾಗಲು ಸಮ್ಮತಿಸುವದಾದರೆ" ವ್ಯಕ್ತಿಗತವಾಗಿ ಆಧ್ಯಾತ್ಮಿಕವಾಗಲು ಸಮ್ಮತಿಸಿದರೆ .... ಸಮ್ಮತಿಸಿದರೆ.

ಅವನಲ್ಲಿಯ ಏನೋ ಅದನ್ನು ಕೇಳುತ್ತಿದೆ, ಅದಕ್ಕಾಗಿ ಅಭೀಪ್ಸೆಯನ್ನು ಹೊಂದಿದೆ. ಉಳಿದುದೆಲ್ಲಾ ನಿರಾಕರಿಸುತ್ತಿದೆ, ಈಗ ಹೇಗಿದೆಯೋ ಹಾಗೆ ಮುಂದುವರಿಯಲು ಅಪೇಕ್ಷಿಸುತ್ತದೆ: ಕುಲುಮೆಯಲ್ಲಿ ಹಾಕಬೇಕಾಗಿರುವ ಮಿಶ್ರಣ.

ಈ ಕ್ಷಣದಲ್ಲಿ, ಭೂಮಿಯ ಚರಿತ್ರೆಯೊಳಗೆ ನಾವೀಗ ಪುನಃ ಬಂದು ನಿಖರ ತಿರುವಿನ ನೆಲೆಯಲ್ಲಿ ಇದ್ದೇವೆ. ಪ್ರತಿಯೊಂದು ಕಡೆಯಿಂದ ನನ್ನನ್ನು ಕೇಳಲಾಗುತ್ತಿದೆ, ಮುಂದೆ ಏನಾಗುವದು? ಎಲ್ಲೆಡೆ ಆತಂಕ, ಹಂಬಲ, ಭಯಗಳು ತುಂಬಿವೆ. "ಮುಂದೇನಾಗುವುದು?" ಇದಕ್ಕೆ ಒಂದೇ ಒಂದು ಉತ್ತರವಿದೆ. ಅದೇನೆಂದರೆ "ಮಾನವನು ಆಧ್ಯಾತ್ಮಿಕಗೊಳ್ಳಲು ಸಮ್ಮತಿಸಿದರೆ ಮಾತ್ರ."

ಮತ್ತು ಕೆಲವು ವ್ಯಕ್ತಿಗಳು ಪರಿಶುದ್ಧ ಸ್ವರ್ಣವಾದರೆ ಸಾಕು. ಏಕೆಂದರೆ ಅವರಿಂದಲೇ ಘಟನೆಗಳ ಹಾದಿಯನ್ನು ಬದಲಾಯಿಸಲು ಸಾಧ್ಯ.... ಈ ಅವಶ್ಯಕತೆಯನ್ನು ಬಹಳ ಬೇಗ ನಾವು ಪೂರೈಸಬೇಕಾಗಿದೆ.

ದೈವವು ನಮ್ಮಿಂದ ಅಪೇಕ್ಷಿಸುತ್ತಿರುವ ಈ ಧೈರ್ಯ, ಶೌರ್ಯಗಳನ್ನು ನಮ್ಮ ಕಷ್ಟಗಳನ್ನು ಎದುರಿಸಲು, ನಮ್ಮ ಅಪರಿಪೂರ್ಣತೆಗಳನ್ನು ಸರಿಪಡಿಸಲು, ಅಸ್ಪಷ್ಟತೆಗಳನ್ನು ಸ್ಪಷ್ಟಪಡಿಸಲು ಏಕೆ ಉಪಯೋಗಿಸಬಾರದು? ಆಂತರಿಕ ಶುದ್ಧೀಕರಣದ ಕುಲುಮೆಗೆ ನಾವು ಧೈರ್ಯವಾಗಿ ಏಕೆ ಮುಖಾಮುಖಿ–ಯಾಗಬಾರದು? ಹಾಗೆ ಮಾಡುವದರಿಂದ ಇಡೀ ನಾಗರಿಕತೆಯನ್ನು ಕತ್ತಲೆಗೆ ನೂಕುವ ಆ ಭಯಂಕರ, ದೈತ್ಯಾಕಾರದ ನಾಶದ ಮೂಲಕ ಮತ್ತೊಮ್ಮೆ ಸಾಗಿ ಹೋಗಬೇಕಾಗುವ ಅವಶ್ಯಕತೆ ಇರುವದಿಲ್ಲ.

ನಮ್ಮ ಮುಂದಿರುವ ಸಮಸ್ಯೆ ಇದೆ. ಪ್ರತಿಯೊಬ್ಬನೂ ತನ್ನದೇ ಆದ ರೀತಿಯಲ್ಲಿ ಈ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಬೇಕು.

ನನ್ನನ್ನು ಕೇಳಲಾದ ಪ್ರಶ್ನೆಗಳಿಗೆ ಈ ಸಂಜೆ ನಾನು ಉತ್ತರಿಸುತ್ತಿದ್ದೇನೆ. ನನ್ನ ಉತ್ತರವು ಶ್ರೀ ಅರವಿಂದರವರ ಉತ್ತರವೇ ಆಗಿದೆ: ಆಧ್ಯಾತ್ಮಿಕವಾಗಲು ಮಾನವನು ಒಮ್ಮೆ ಸಮ್ಮತಿಸಿದನೆಂದರೆ....

ಜೊತೆಗೆ ನಾನು ಇದನ್ನು ಸೇರಿಸುತ್ತೇನೆ: ಕಾಲವು ಒತ್ತಡವನ್ನು ಹೇರುವದು.... ಮಾನವನ ದೃಷ್ಟಿಕೋನದಿಂದ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/74–75**

## ಅರುಣೋದಯದ ಹಿಂದಿನ ರಾತ್ರಿ

ಈಗಿನ ಸ್ಥಿತಿಗತಿಗಳ ಬಗ್ಗೆ ಒದ್ದಾಡುತ್ತಿರುವ ನಿಮ್ಮ ಜೊತೆಗಾರರಿಗೆ ಕೊನೆಯ ಪಕ್ಷ ವರ್ತಮಾನದ ಬಗ್ಗೆ ಒಂದು ಶಾಂತ ಸಮಾಧಾನವನ್ನು ನೀಡಲು ಸಾಧ್ಯವೇ?

ಎನ್ನುಸುತ್ತಿದೆ. ವಸ್ತುಸ್ಥಿತಿಯು ಕೆಟ್ಟದಾಗಿದೆ, ಮತ್ತಷ್ಟು ಕೆಟ್ಟದಾಗುತ್ತಿದೆ ಮತ್ತು ಯಾವುದೇ ಸಮಯದಲ್ಲಿ ಇನ್ನೂ ಹೆಚ್ಚು ಕೆಟ್ಟದಾಗಿ ಪರಿಣಮಿಸಬಹುದು ಅಥವಾ ಸಾಧ್ಯವಾದರೆ ಅತ್ಯಧಿಕ ಕೆಟ್ಟದಕ್ಕಿಂತಲೂ ಕೆಟ್ಟದಾಗಲೂಬಹುದು ಮತ್ತು ಇಂದಿನ ವ್ಯಾಕುಲತೆಗೆ ಈಡಾದ ಪ್ರಪಂಚದಲ್ಲಿ ವಿರೋಧಾಭಾಸವಾಗುವಂತಹುದು ಏನಾದರೂ ಸಾಧ್ಯವಾಗಬಹುದೇನೋ.

ಇದೆಲ್ಲವೂ ಅವಶ್ಯಕವಾಗಿತ್ತು ಎಂಬುದನ್ನು ಅವರು ಅರ್ಥ ಮಾಡಿಕೊಳ್ಳ–ಬೇಕಾಗಿದೆ. ಏಕೆಂದರೆ ಒಂದು ಹೊಸ ಮತ್ತು ಉತ್ತಮವಾದ ಪ್ರಪಂಚವು ಅಸ್ತಿತ್ವಕ್ಕೆ ಬರಬೇಕಾದರೆ ಕೆಲವು ನಿರ್ದಿಷ್ಟ ಸಾಧ್ಯತೆಗಳು ಹೊರಹೊಮ್ಮಬೇಕಾಗಿತ್ತು. ಜೊತೆಗೆ ಅವುಗಳ ಪ್ರಭಾವದಿಂದ ನಾವು ಹೊರಹೋಗಬೇಕಾಗಿತ್ತು, ಅವುಗಳ ಆಗಮನದ ಕಾಲವನ್ನು ಮುಂದೆ ತಳ್ಳಲು ಸಾಧ್ಯವಿರಲಿಲ್ಲ. ಇದು ಯೋಗದಲ್ಲಿ ಇರುವ ರೀತಿ, ಕ್ರಿಯಾಶೀಲವಾಗಿರುವ ಅಥವಾ ವ್ಯಕ್ತಿಯೊಳಗೆ ಅಡಗಿ ಕುಳಿತಿರುವ ವಿಷಯಗಳನ್ನು ಹೊರಗೆ ಬೆಳಕಿಗೆ ತರಲೇಬೇಕು.

ಅವುಗಳನ್ನು ನಾವು ಜಯಿಸಿ ಹೊರಗೆ ಎಸೆಯಬಹುದು ಅಥವಾ ಇದೇ ಪರಿಶುದ್ಧತೆಯನ್ನು ಪಡೆಯುವ ಕಾರ್ಯಕ್ಕಾಗಿ ಆಳಗಳಲ್ಲಿನ ಅವ್ಯಕ್ತ ಸ್ಥಿತಿಯಿಂದ ಹೊರಹೊಮ್ಮಬಹುದು. ಜೊತೆಗೆ ಅರುಣೋದಯವಾಗುವ ಮುನ್ನ ರಾತ್ರಿಯು ಅತ್ಯಂತ ಗಾಢವಾಗಿರುವದು ಮತ್ತು ಸೂರ್ಯೋದಯವು ನಿಶ್ಚಿತವಾಗಿ ಸಂಭವಿಸುವದು ಎಂಬ ನಾಣ್ಣುಡಿಯನ್ನು ಅವರು ಜ್ಞಾಪಿಸಿಕೊಳ್ಳಬಹುದು. ಆದರೆ ಅವರು ನೆನಪಿನಲ್ಲಿ ಇಟ್ಟುಕೊಳ್ಳಬೇಕಾದ ಅಂಶವೇನೆಂದರೆ ಯಾವ ಹೊಸ ಪ್ರಪಂಚದ ಆಗಮನದ ಬಗ್ಗೆ ನಾವು ಯೋಚಿಸುತ್ತಿದ್ದೇವೋ, ಅದು ಹಳೆಯದರ ಪಡಿಯಚ್ಚು ಅಥವಾ ಸಂಯೋಜನೆಯಾಗಿರಬಾರದು. ಅದು ಬೇರೆ ಮಾರ್ಗಗಳಿಂದ ಆಗಮಿಸಬೇಕು ಅಂದರೆ ಆಂತರ್ಯದಿಂದ ಬಾಹ್ಯದಿಂದಲ್ಲ. ಆದುದರಿಂದ ಅತ್ಯುತ್ತಮವಾದ ಹಾದಿಯಾವುದೆಂದರೆ ಬಾಹ್ಯದಲ್ಲಿ ತೊಂದರೆ ನೀಡುತ್ತಿರುವ ಸಮಸ್ಯೆಗಳ ಬಗ್ಗೆ ಹೆಚ್ಚಿನ ಗಮನ ನೀಡಬಾರದು. ಆದರೆ ಆಂತರಿಕವಾಗಿ ವೃದ್ಧಿಸಲು ಪ್ರಯತ್ನಿಸಬೇಕು. ಹೀಗೆ ಮಾಡಿದರೆ ನವ ಪ್ರಪಂಚವು ಯಾವುದೇ ರೂಪವನ್ನು ಪಡೆದರೂ ಅವರು ಅದರಲ್ಲಿ ಭಾಗವಹಿಸಲು ಸಿದ್ಧರಾಗಿರಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/691**

**ಒಂದು ಬೃಹತ್ ಪ್ರವಾಹ** (ಪ್ರಳಯಕ್ಕೆ ಸಂಬಂಧಿಸಿದಂತೆ ಶ್ರೀಮಾತೆಯವರ ಒಂದು ನಿರೂಪಣೆ)

ನಿನ್ನೆ ರಾತ್ರಿ ಹತ್ತರಿಂದ ಹನ್ನೊಂದು ಘಂಟೆಯ ನಡುವೆ ಒಂದು ಕುತೂಹಲಕಾರಿ ಘಟನೆಯು ಸಂಭವಿಸಿತು. ನಾನು ಯಾವುದೋ ಒಂದು ವಿಧವಾದ ವಾಹನದೊಳಗೆ ಇದ್ದೆನು. ನಾನು ವಾಹನವನ್ನು ನೋಡಲಿಲ್ಲ. ಆದರೆ ನಾನು ಅದರ ಒಳಗೆ ಇದ್ದೆನು. ನನ್ನ ಮುಂದೆ ಇದ್ದವರು ಯಾರೋ ಚಾಲನೆ ಮಾಡುತ್ತಿದ್ದರು. ನಾನು ಆತನ ಹಿಂಭಾಗವನ್ನು ಮಾತ್ರ ನೋಡಲು ಸಾಧ್ಯವಿತ್ತು. ಅವರು ಯಾರು ಎಂಬುದರ ಕಡೆ ನಾನು ಗಮನ ಹರಿಸಲಿಲ್ಲ. ಅವರು ಯಾರೋ ಆ ಕೆಲಸವನ್ನು ಮಾಡಲಿಕ್ಕಾಗಿ ಇದ್ದವರು ಅಷ್ಟೇ.

ವಿನಾಶದ ಬಾಗಿಲುಗಳನ್ನು ಸಂಪೂರ್ಣವಾಗಿ ತೆರೆದಂತೆ ಆಯಿತು. ಪ್ರವಾಹ – ಸಾಗರದಷ್ಟು ವಿಶಾಲವಾಗಿರುವ ಪ್ರವಾಹವು ಕೆಳಗಡೆಗೆ ಮುನ್ನುಗ್ಗುತ್ತಿತ್ತು. ಯಾವುದರ ಮೇಲಕ್ಕೆ – ಭೂಮಿಯ ಕಡೆಗಾ? ಅವಿವೇಕಭರಿತ ವೇಗದೊಂದಿಗೆ ಸುರಿಯುತ್ತಿದ್ದ ಒಂದು ಭಯಂಕರ ಪ್ರವಾಹ. ಅದಕ್ಕೆ ನಿಲ್ಲಿಸಲು ಅಸಾಧ್ಯವಾದ ಸಾಮರ್ಥ್ಯವು ಇದ್ದಿತು. ಅದು ಚೌಳಾದ ನೀರು – ಪಾರದರ್ಶಕವಾದುದಲ್ಲ, ಆದರೆ ಸ್ವಲ್ಪ ಉಪ್ಪು ನೀರು. ನೀರಿನ ಮುಂದೆ ಇದ್ದ ಯಾವುದೋ ಒಂದು ನಿರ್ದಿಷ್ಟ ಜಾಗವನ್ನು ತಲುಪಲೇಬೇಕಾದ ಅನಿವಾರ್ಯತೆಯು ಅದಕ್ಕೆ ಇದ್ದಿತು. ನನಗಿಂತಲೂ ಮುಂದಾಗಿ ನೀರು ಅಲ್ಲಿ ತಲುಪಿದ್ದರೆ, ಏನೂ ಮಾಡಲಾಗುತ್ತಿರಲಿಲ್ಲ. ಆದರೆ ನಾನು ಅಲ್ಲಿಗೆ ಮೊದಲು ತಲುಪಿದರೆ, ("ನಾನು" ಎಂದು ಸೂಚಿಸುತ್ತಿದ್ದೇನೆ. ಆದರೆ ಅದು ಈ ದೇಹದೊಂದಿಗೆ ಇರುವ "ನಾನು" ಅಲ್ಲ.) ಆ ನೀರಿಗಿಂತ ಮೊದಲು ನಾನು ಇನ್ನೊಂದು ಬದಿಗೆ ತಲುಪಿದರೆ, ನಾನು ಸಂಪೂರ್ಣವಾಗಿ ಸುರಕ್ಷಿತವಾಗಿ ಇರುವೆ. ಆ ಸುರಕ್ಷಿತ ಪ್ರದೇಶದಿಂದ, ಹಿಂದೆ ಉಳಿದು ಹೋಗಿದ್ದವರನ್ನು ರಕ್ಷಿಸುವ ಅವಕಾಶವು ನನಗೆ ಸಿಗುತ್ತಿತ್ತು. ನಾನು ಆ ಶಕ್ತಿಯನ್ನು ಹೊಂದಿರುತ್ತಿದ್ದೆ.

ಮತ್ತು ಈ ವಾಹನವು ಪ್ರವಾಹಕ್ಕಿಂತಲೂ ಜೋರಾಗಿ ಚಲಿಸುತ್ತಿತ್ತು. (ನಾನು ನೋಡಿದೆ ಮತ್ತು ಅದರ ಚಲನೆಯಿಂದ ನನಗೆ ಅದರ ಅನುಭವವಾಯಿತು.) – ಒಂದು ಭಯಂಕರ ಪ್ರವಾಹ. ಆದರೆ ವಾಹನವು ಇನ್ನೂ ಹೆಚ್ಚು ಜೋರಾಗಿ ಚಲಿಸುತ್ತಿತ್ತು. ಅದು ಬಹಳ ಅದ್ಭುತವಾಗಿ ಇದ್ದಿತು. ಕೆಲವು ಕಡೆ ಹಲವಾರು ಕ್ಲಿಷ್ಟಕರವಾದ ಮತ್ತು ಅಪಾಯಕಾರಿ ಜಾಗಗಳು ಇದ್ದವು; ಆದರೆ ನಾನು ಯಾವಾಗಲೂ ನೀರಿಗಿಂತಲೂ ಮೊದಲೇ ಅಲ್ಲಿಗೆ ತಲುಪುತ್ತಿದ್ದೆ. ನೀರು ಇನ್ನೇನು

ಅಡ್ಡ ಹಾಕಿ ತಡೆಯುವದು ಎನ್ನುವಷ್ಟರಲ್ಲಿ ನಾನು ತಲುಪಿರುತ್ತಿದ್ದೆ. ನಮ್ಮ ಚಲನೆಯು ಮುಂದೆ, ಮುಂದೆ, ಸಾಗುತ್ತಲೇ ಇದ್ದಿತು. ನಂತರ, ಒಂದು ಅಂತಿಮ ಪ್ರಯತ್ನದೊಂದಿಗೆ (ನಿಜಕ್ಕೂ ಪ್ರಯತ್ನವಿರಲಿಲ್ಲ, ಅದು ಒಂದು ಸಂಕಲ್ಪವಾಗಿತ್ತು.) ಒಂದು ಕೊನೆಯ ಮುಂದೂಡುವಿಕೆಯಿಂದ, ನಾವು ಮತ್ತೊಂದು ಬದಿಯನ್ನು ತಲುಪಿದೆವು – ನೀರು ಬಿರುಸಾಗಿ ನುಗ್ಗಿತು, ಆದರೆ ಅದು ನನಗಿಂತಲೂ ಸ್ವಲ್ಪ ಹಿಂಬದಿಯಲ್ಲಿ ಇದ್ದಿತು. ಒಂದು ಕಲ್ಪನಾತೀತ ವೇಗದಲ್ಲಿ ಅದು ಮುನ್ನುಗ್ಗಿತು. ನಾವು ತಲುಪಿದ್ದೆವು. ನಂತರ, ಮತ್ತೊಂದು ಬದಿಯಲ್ಲಿ, ಅದು ಬಣ್ಣವನ್ನು ಬದಲಾಯಿಸಿತು. ಅದು ಬದಲಾಯಿಸಿತು.... ಪ್ರಮುಖವಾಗಿ ಎದ್ದು ಕಾಣುವ ನೀಲಿಯ ವರ್ಣವನ್ನು ಅದು ಧರಿಸಿತು, ಶಕ್ತಿಯಾಗಿ ಇರುವ ಈ ಪ್ರಬಲ ನೀಲಿ; ಈ ವರ್ಣವು ಅತ್ಯಧಿಕ ಭೌತಿಕವಾಗಿರುವ ಪ್ರಪಂಚದಲ್ಲಿ ವ್ಯವಸ್ಥಿತಗೊಳಿಸುವ ಶಕ್ತಿಯಾಗಿದೆ. ಹೀಗಾಗಿ, ನಾವು ಅಲ್ಲಿ ಇದ್ದೆವು ಮತ್ತು ವಾಹನವು ನಿಂತಿತು. ನಾನು ಚಲಿಸುತ್ತಿದ್ದ ಇಡೀ ಕಾಲದಲ್ಲಿ ನೇರವಾಗಿ ಮುಂದೆಯೇ ನೋಡುತ್ತಿದ್ದೆ. ಈಗ ಹಿಂದಿರುಗಿ ನೋಡಿ ಈ ರೀತಿ ಹೇಳಿದೆ 'ಓ, ಹಿಂದೆ ಉಳಿದವರಿಗೆ ನೆರವಾಗಲು ನಾನು ಈಗ ಪ್ರಾರಂಭಿಸಬಹುದು.'

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 12 ಜುಲೈ, 1960**

**ನವ ಉಪ ಶೀರ್ಷಿಕೆ**

ಬಲ ಬದಿಗೆ ನೀರು ಹರಿದು ಹೋಗುತ್ತಿತ್ತು. ನೀರು ಮುನ್ನುಗ್ಗಿದ ಜಾಗದಲ್ಲೆಲ್ಲಾ ವಾಹನದ ಹಾದಿಯಲ್ಲಿ ಈ ಛಿದ್ರಗೊಂಡ ಬಿರುಕುಗಳು ಅಥವಾ ಕಂದಕಗಳು ಕಾಲಾನುಕ್ರಮಣದಲ್ಲಿ ಉಂಟಾದವು. ನಾನು ಮುಂದಕ್ಕೆ ಚಲಿಸಿದ ನಂತರ ನಿಜಕ್ಕೂ ಅದು ಪ್ರತಿಯೊಬ್ಬರ ಮೂಲಕವೂ ಹಾದುಹೋಗಿರಬೇಕು. ಅದು ಅತ್ಯಂತ ಅಪಾಯಕರವಾದುದಾಗಿತ್ತು. ಏಕೆಂದರೆ ನೀನೇನಾದರೂ ಒಂದು ಕ್ಷಣ ತಡ ಮಾಡಿದ್ದರೆ ನೀರು ಆಗಲೇ ಒಳಗೆ ಪ್ರವಹಿಸಿಬಿಡುತ್ತಿತ್ತು ಮತ್ತು ನೀನು ದಾಟಿಹೋಗಲು ಸಾಧ್ಯವಾಗುತ್ತಿರಲಿಲ್ಲ. ಅದು ಹೇಗೆ ಇದ್ದಿತೆಂದರೆ, ಕೆಲವೇ ಕೆಲವು ಹನಿಗಳಿಗೆ ತುತ್ತಾಗಿದ್ದರೂ, ನೀನು ದಾಟಲು ಸಾಧ್ಯವಾಗುತ್ತಿರಲಿಲ್ಲ. ಅವು ತುಂಬಾ ವಿಸ್ತಾರವಾಗಿ ಇದ್ದವು ಎಂದು ಅಲ್ಲ, ಆದರೆ.... ಮತ್ತು ನೀರು ಒಳಗೆ ಸುರಿಯುತ್ತಿತ್ತು. ("ಒಳಗೆ ಸುರಿಯುತ್ತಿತ್ತು" .... ನಮ್ಮ ಶಬ್ದಗಳು ಬಹಳ ಚಿಕ್ಕವು ಎನಿಸುವದು) ಮತ್ತು ನಾನು ಅದು ಮುಂದಿರುವದನ್ನು ನೋಡಿದೆ. ಆದರೆ ಆಗ ವಾಹನವು

ಬಹಳ ವೇಗವಾಗಿ ಚಲಿಸಿ ಆಗಮಿಸಿಬಿಡುತ್ತಿತ್ತು. ಮತ್ತು ನಿಲ್ಲುವ ಬದಲಾಗಿ, ಪ್ರಕ್ಷುಬ್ಧಗೊಂಡು ಮೇಲೆ ಕೆಳಗೆ ಚಲಿಸಿ ಮುಳುಗಿ ಏಳುತ್ತಿತ್ತು. ಪ್ರೂಮ್! – ಅದೇ ಕ್ಷಣದಲ್ಲಿ, ಏಳು ಬೀಳು ರೈಲು ದಾರಿಯ ರೀತಿ ಚಲಿಸಿ ಮುಂದೆ ಸಾಗುತ್ತಿತ್ತು ಮತ್ತು ಸರಿಯಾದ ಕ್ಷಣಕ್ಕೆ ನಾನು ಯಾವಾಗಲೂ ಆಗಮಿಸುತ್ತಿದ್ದೆ. ಮತ್ತೆ ಪುನಃ ಇದೇ ಸಂಭವಿಸುತ್ತಿತ್ತು. ಅಲ್ಲಿ ಇಲ್ಲಿ ಮುರಿದುಹೋಗುತ್ತಿತ್ತು. (ಇದೇ ರೀತಿ ಅನೇಕ ಬಿರುಕುಗಳು ಉಂಟಾಗುತ್ತಿದ್ದವು. ನಾನು ಎರಡನ್ನು ಮಾತ್ರ ಚಿತ್ರಿಸಿರುವೆ; ಅನೇಕವೇ ಇದ್ದವೆಂದು ಹೇಳಬಹುದು; ಕೊನೆಯ ಪಕ್ಷ 5 ಅಥವಾ 6 ಇದ್ದಿರಬಹುದು), ಮತ್ತು ಪುನಃ ನಾವು ಕ್ಲಿಪ್ರವಾಗಿ ದಾಟಿ ಮುಂದೆ ಸಾಗುತ್ತಿದ್ದೆವು, ನಂತರ ನಿರ್ದಿಷ್ಟ ಜಾಗವನ್ನು ತಲುಪುವವರೆಗೂ ನಾವು ವೇಗವಾಗಿ ಚಲಿಸುತ್ತಿದ್ದೆವು. ನಾನು ಚಿತ್ರದಲ್ಲಿ ಸೂಚಿಸಿರುವ ನೀರಿನ ತಿರುವಿನ ಪ್ರದೇಶವೇ ಆ ನಿರ್ದಿಷ್ಟ ಜಾಗ.

ಆ ಅಂತಿಮ ಜಾಗದಲ್ಲಿ, ಕೆಳಗೆ ಹರಿಯಲು ನೀರು ತಿರುಗಬೇಕಾದ ಪ್ರದೇಶವೊಂದು ಇತ್ತು – ಇದೇ ಶ್ರೇಷ್ಠವಾದ ಸ್ಥಿತ್ಯಂತರ. ನೀನು ಅದರಲ್ಲಿ ಸಿಲುಕಿದೆಯೆಂದರೆ, ಮುಗಿದೇಹೋಯಿತು. ನೀರು ಬರುವ ಮೊದಲು ನೀನು ಆ ಜಾಗವನ್ನು ತಲುಪಿ ದಾಟಿಬಿಡಬೇಕಾಗಿತ್ತು. ದಾಟಿಹೋಗಲು ಇದ್ದುದು ಅದೊಂದೇ ಜಾಗ. ನಂತರ ಒಂದು ಕೊನೆಯ ಮುಳುಗು. ಬಿಲ್ಲಿನಿಂದ ಬಿಟ್ಟ ಬಾಣದ ರೀತಿಯಲ್ಲಿ, ಶೀಘ್ರ ಗತಿಯಲ್ಲಿ, ನಾನು ದಾಟಿ ಮುನ್ನಡೆದೆ.

ಮತ್ತು ಒಮ್ಮೆ ಮತ್ತೊಂದು ದಡವನ್ನು ತಲುಪಿದೆನೆಂದರೆ, ನೆಲದ ಮೇಲೆ ಒಂದೇ ಒಂದು ಉಬ್ಬು ಸಹ ಇರಲಿಲ್ಲ (ಯಾಕೆಂದು ನನಗೆ ಗೊತ್ತಿಲ್ಲ). ತತ್‌ಕ್ಷಣದಲ್ಲಿ ಅದು ಸುರಕ್ಷಿತ ಪ್ರದೇಶವಾಗಿತ್ತು. ಮತ್ತು ಪ್ರವಾಹವು ಮುನ್ನಡೆಯುತ್ತಲೇ ಇತ್ತು. ಅಲೆಗಳ ಮೇಲೆ ಅಲೆಗಳು, ಒಂದರ ಮೇಲೆ ಇನ್ನೊಂದು, ಕಣ್ಣಿನ ದೃಷ್ಟಿಗೆ ಗೋಚರಿಸಬಹುದಾದ ದೂರದವರೆಗೂ. ಆದರೆ ಈ ಶ್ರೇಷ್ಠ ತಿರುವಿನಲ್ಲಿ ಅದನ್ನು ನಾಲೆಯನ್ನಾಗಿ ಪರಿವರ್ತಿಸಲಾಗಿತ್ತು. ಅದು ಆ ಸ್ಥಳವನ್ನು ದಾಟಿ ಮುನ್ನಡೆದ ತಕ್ಷಣವೇ, ಮುಳುಗುವಿಕೆಯು ಪೂರ್ಣವಾಗಿತ್ತು. ಅದು ಯಾವುದೋ ಒಂದರ ಮೇಲೆ ಹರಡಿಕೊಂಡಿತ್ತು. – ಭೂಮಿಯ ಮೇಲೆ, ಮತ್ತು ಪ್ರವಾಹವು ತಿರುಗಿತು. ಅದು ತಿರುಗಿತು – ಆದರೆ ನಾನು ಈಗಾಗಲೇ ಇನ್ನೊಂದು ದಡದ ಮೇಲೆ ಇದ್ದೆನು. ಮತ್ತು ಬಹಳ ಕೆಳಗೆ, ಎಲ್ಲವೂ ಮುಗಿದುಹೋಗಿತ್ತು. ಎಲ್ಲಾ ಕಡೆಗೂ ನೀರು ನುಗ್ಗುತ್ತಿತ್ತು. ನಾನು ಮತ್ತೊಂದು ದಡವನ್ನು ತಲುಪುತ್ತಿದ್ದಂತೆ, ಅದಕ್ಕೆ ನನ್ನನ್ನು ಸ್ಪರ್ಶಿಸಲಾಗಲಿಲ್ಲ – ನೀರಿಗೆ ದಾಟಿ ಬರಲು ಆಗಲಿಲ್ಲ, ಅಗೋಚರವಾದುದೇನೋ ಅದನ್ನು ತಡೆದು ನಿಲ್ಲಿಸಿತು ಮತ್ತು ಅದು ತಿರುಗಿ ದೂರ ಹೋಯಿತು.

ಅಷ್ಟೇ ಅಲ್ಲ, ನೀರಿನ ಹಾದಿಯನ್ನು ಬದಲಾಯಿಸಲು ಒಂದು ದಾರಿಯನ್ನು ಈಗಾಗಲೇ ಸಿದ್ಧಪಡಿಸಲಾಗಿತ್ತು ಎಂಬಂತೆ ಗೋಚರಿಸಿತು.

ಅಲ್ಲಿ, ನನ್ನ ಕೆಳಗಡೆ, ವಾಹನದ ಕೆಳಗಡೆ ಅದು ಭೂಮಿ ಎಂಬ ಭಾವನೆ ನನಗೆ ಇದ್ದಿತು. ಅದು ನಿಜವಾಗಲು ಭೂಮಿಯ ತರಹವೇ ಕಾಣಿಸಿತು. ನೀರು ಅದರ ಕಡೆಗೆ ನುಗ್ಗುತ್ತಿತ್ತು.

ವಾಹನದ ಪಥವು ಭೂಮಿಯ ಮೇಲೆ ಇರಲಿಲ್ಲ. ಆದರೆ ಮೇಲುಗಡೆ, (ಬಹುಶಃ ತಾರೆಗಳ ನಡುವಣ ಪ್ರದೇಶದಲ್ಲಿ ಇರಬೇಕು.) ಈ ವಾಹನಕ್ಕಾಗಿ ನಿರ್ಮಿಸಲಾದ ಒಂದು ವಿಶಿಷ್ಟ ಪಥ. ನೀರು ಎಲ್ಲಿಂದ ಬರುತ್ತಿದೆ ಎಂಬುದು ನನಗೆ ಗೊತ್ತಿರಲಿಲ್ಲ. ನನಗೆ ಅದರ ಮೂಲವು ಕಾಣಿಸುತ್ತಿರಲಿಲ್ಲ. ಅದು ದಿಗಂತದ ಆಚೆ ಇದ್ದಿತು. ಆದರೆ ಅದು ರೋಷಭರಿತ ಪ್ರವಾಹದಂತೆ ಬಂದಿತು. ಪ್ರಪಾತದಂತೆ ತೀರ ಕಡಿದಾಗಿ ಅಲ್ಲ, ಆದರೆ ನುಗ್ಗುತ್ತಿರುವ ಪ್ರವಾಹದಂತೆ. ಕೆಳಗೆ ಭೂಮಿ ಮತ್ತು ಮೇಲೆ ನೀರಿನ ಪ್ರವಾಹಗಳ ನಡುವೆ ನನ್ನ ಪಥವು ಸಾಗಿತ್ತು. ನನ್ನ ಮುಂಭಾಗದಲ್ಲಿ ನಾನು ನೀರನ್ನು ನೋಡಿದೆ; ಎಲ್ಲೆಡೆ, ಮುಂದೆ ಮತ್ತು ಹಿಂದೆ – ಅದು ಎಷ್ಟು ಅಸಾಮಾನ್ಯವಾದುದಾಗಿತ್ತೆಂದರೆ, ಅದು ಹೀಗೆ ಕಾಣಿಸಿತು: ಗಮನಿಸು, ಅದು ಎಲ್ಲೆಡೆ ಇದ್ದಿತು, ನನ್ನ ಪಥವನ್ನು ಹೊರತುಪಡಿಸಿ (ಆದರೆ, ಜಿನುಗುವಿಕೆ ಅಥವಾ ಸೋರುವಿಕೆಯು ಇದ್ದಿತು) ನೀರು ಎಲ್ಲಾ ಕಡೆ ವೇಗವಾಗಿ ಚಲಿಸುತ್ತಿತ್ತು. ಆದರೆ ಈ ಮುನ್ನುಗ್ಗುವಿಕೆಯಲ್ಲಿ ಒಂದು ವಿಧವಾದ ಪ್ರಜ್ಞಾಭರಿತ ಸಂಕಲ್ಪವು ಇದ್ದಿತು. ಈ ಪ್ರಜ್ಞಾಭರಿತ ಸಂಕಲ್ಪಕ್ಕಿಂತಲೂ ಮೊದಲೇ ನಾನು ಶ್ರೇಷ್ಠ ಸ್ಥಿತ್ಯಂತರವನ್ನು ತಲುಪಬೇಕಾಗಿತ್ತು. ಯಾವುದೋ ಭೌತಿಕವಾದುದರ ರೀತಿಯಲ್ಲಿ ಇದ್ದಿತು ಈ ಜಲ; ಆದರೆ ಒಂದು ಪ್ರಜ್ಞೆ ಅದರಲ್ಲಿ ಇದ್ದಿತು; ಒಂದು ಪ್ರಜ್ಞಾಭರಿತ ಸಂಕಲ್ಪ ಮತ್ತು ನಾನು ತಲುಪಲೇಬೇಕಾಗಿತ್ತು.... ಆ ಸಂಕಲ್ಪ ಮತ್ತು ನಾನು ಪ್ರತಿನಿಧಿಸುವ ಸಂಕಲ್ಪದ ನಡುವಿನ ಕಾಳಗವು ಅದಾಗಿತ್ತು. ನಾನು ಸಮಯಕ್ಕೆ ಸರಿಯಾಗಿ ಪ್ರತಿಯೊಂದು ಕಂದರವನ್ನೂ ದಾಟಿದೆ. ಭಯಂಕರ ತಿರುವನ್ನು ತಲುಪಿದಾಗಲೇ ಈ ನೀರನ್ನು ಪ್ರೇರೇಪಿಸುತ್ತಿರುವ ಸಂಕಲ್ಪವು ನನಗೆ ಗೋಚರವಾದುದು.

ಅದಕ್ಕಿಂತಲೂ ಕೆಲವು ಕ್ಷಣ ಮುಂಚಿತವಾಗಿ ನಾನು ತಲುಪಿದೆ. ಅತ್ಯಧಿಕ ವೇಗದಿಂದ ನಾನು ದಾಟಿದೆ – ಮಿಂಚಿನ ವೇಗದಲ್ಲಿ ಕಾಲವೂ ಸಹ ಇಲ್ಲವಾಯಿತು. ಒಂದು ಮಿಂಚಿನ ಝಳಪೋ ಎಂಬಂತೆ ನಾನು ದಾಟಿ ಮುನ್ನಡೆದೆ. ನಂತರ

ಇದ್ದಕ್ಕಿದ್ದಂತೆ ಒಂದು ಸಣ್ಣ ವಿರಾಮ ಮತ್ತು ಅದು ನೀಲಿಯಾಯಿತು. ಒಂದು ಸಮಭುಜ ಚತುಷ್ಕೋನ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 12 ಜುಲೈ, 1960**

**ಜಾಗತಿಕ ಸನ್ನಿವೇಶ**

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

ಜಾಗತಿಕ ಸನ್ನಿವೇಶವು, ಬಹುಮಟ್ಟಿಗೆ ತಾರಾಂತರೀಯದಲ್ಲಿನ (interstellar) ಮಹಾಪ್ರವಾಹದ ಎಲ್ಲ ಆಯಾಮಗಳನ್ನು ಹೊಂದಿತ್ತು, ಆದರೆ ಹೋಲಿಕೆಯಲ್ಲಿ ಚಿಕ್ಕದಾಗಿ ತೋರುತ್ತಿತ್ತು. ಭೂಮಿಯ ಮೇಲೆ ನೀರನ್ನು ಯಾವುದೇ ಬಂಧನವಿಲ್ಲದೆ ಹರಿಯ ಬಿಟ್ಟಾಗ ಸಂಭವಿಸಬಹುದಾದ ಸನ್ನಿವೇಶದಂತಹ (ಪ್ರವಾಹ ಸನ್ನಿವೇಶ) ಸನ್ನಿವೇಶ ಇಲ್ಲಿ ಇತ್ತು, ಉದಾಹರಣೆಗೆ ಅಷ್ಟೊಂದು ದೊಡ್ಡ ಪ್ರಮಾಣವಲ್ಲದ ಪ್ರವಾಹದ ಸಮಯದಲ್ಲಿ ಸಂಭವಿಸುವಂತೆ.

ಆಹ್ಲಾದಕರ ಮತ್ತು ನಿಜವಾಗಿಯೂ ಕುತೂಹಲಕಾರಿಯಾದ ಸಂಗತಿ ಏನೆಂದರೆ, ಈ ಪ್ರಚಂಡ ವೇಗ(ಶರವೇಗ), ಮತ್ತು ನಾನು ಸರಿಯಾದ ಸಮಯದಲ್ಲಿ ಆಗಮಿಸಿದ್ದು. ಒಮ್ಮೆ ನಾನು ಆ ಪ್ರವಾಹವನ್ನು ದಾಟಿ ಇನ್ನೊಂದು ಬದಿಗೆ ಹೋದಾಗ (ಅದೊಂದು ಪ್ರಚಂಡ ಮಹಾಪೂರವಾದ್ದರಿಂದ ಏನೂ ಉಳಿಯಲಾರದೆಂದು ನನ್ನ ಸ್ಪಷ್ಟ ಅನಿಸಿಕೆಯಾಗಿತ್ತು), ಅಪಾಯವು ತೊಲಗಿತ್ತು, ಆ ಪ್ರವಾಹದ ನೀರು ಯಾವತ್ತಿಗೂ ನನ್ನನ್ನು ಸ್ಪರ್ಶಿಸುವ ಸಾಧ್ಯತೆ ಇರಲಿಲ್ಲ – ಇದು ನನ್ನ ಮುಖ್ಯ ಅನಿಸಿಕೆಯಾಗಿತ್ತು. ಎಲ್ಲವೂ ನಿಂತುಹೋಯಿತು. ಏನೂ ನನ್ನನ್ನು ಸ್ಪರ್ಶಿಸಲಿಲ್ಲ.

ನಾನು ತಿರುಗಿ ನೋಡಿದಾಗ, ಈ ನೀರೆಲ್ಲ ಧುಮ್ಮಿಕ್ಕುತ್ತಿರುವುದನ್ನು ಕಂಡು, ‘ನೋಡೋಣ ಈಗ ಇಲ್ಲಿ ಏನಾದರೂ ಮಾಡಬಹುದೆ’ ಎಂದು ಯೋಚಿಸಿದೆ. ನನಗೆ ಆಸಕ್ತಿಯುಂಟುಮಾಡುವ ಯಾರೋ ಒಬ್ಬರು ನನ್ನ ಹಿಂದೆ ಇದ್ದರು, ಯಾರೋ ವ್ಯಕ್ತಿ ಅಥವಾ ಯಾವುದೋ ಸಂಗತಿ – ಅದು ಯಾವುದೋ ಸಂಗತಿಯಾಗಿತ್ತು ಎಂದು ಹೇಳಬಹುದು; ಇನ್ನೊಂದು ಬದಿಯಲ್ಲಿರುವ ಆ ಸಂಗತಿಯು ತುಂಬಾ ಇಷ್ಟಪಡುವಂತದ್ದಾಗಿತ್ತು ಮತ್ತು ನೀಲಿ ಬಣ್ಣವನ್ನು ಹೊಂದಿತ್ತು. ನನ್ನ ಹಿಂದೆ ಇದ್ದುದು ನಿಜವಾಗಿಯೂ ವ್ಯಕ್ತಿಗಳಲ್ಲ, ಆದರೆ ನನ್ನನ್ನು

ನಿಕಟವಾಗಿ ಅನುಸರಿಸುತ್ತಿರುವ ಯಾವುದೋ ಸಂಗತಿಯ ಪ್ರತಿನಿಧಿಗಳಂತಿರುವ ಜೀವಿಗಳಾಗಿದ್ದವು. ನಾನಲ್ಲಿದ್ದಾಗ, ಅದೂ ಸಹ ಅಲ್ಲಿತ್ತು, ಆದರದು ನನ್ನ ಸರಿಸಾಟಿಯಾಗದೆ ತನ್ನ ನೆಲೆಯನ್ನು ಕಳೆದುಕೊಳ್ಳುತ್ತ ಹೋಯಿತು – ನನ್ನ ವೇಗ ಹೆಚ್ಚಾದಂತೆ, ಅದರ ವೇಗ ಕಡಿಮೆಯಾಗುತ್ತ ಹೋಯಿತು. ಅದಕ್ಕೆ ನನ್ನ ಸರಿಸಮವಾಗಿರಲು ಆಗಲಿಲ್ಲ. ಆದರೆ ಅದು ನನಗೆ ವಿಶೇಷ ರೀತಿಯಲ್ಲಿ ಆಸಕ್ತಿಯನ್ನುಂಟುಮಾಡಿತ್ತು. ಓಹ್, ಅವನು (ಅವನು ಅಥವಾ ಅದು) ತುಂಬಾ ಹತ್ತಿರವಾಗಿದ್ದಾನೆ; ಅವನು ನನ್ನ ಸರಿಗಟ್ಟಬಹುದೆಂದು ನಾನು ಯೋಚಿಸಿದೆ. ಆ ಕ್ಷಣದಲ್ಲಿ, ಎಲ್ಲ ವಿನಾಶಕಾರಿ ಸಂಕಲ್ಪವು ತನ್ನ ನೀರಿನ ಸಾಧನದೊಂದಿಗೆ (ಸಾಂಕೇತಿಕವಾಗಿ ನೀರು), ಮುಂದೆ ಧಾವಿಸಿ ಎಲ್ಲೆಡೆ ಹರಡುತ್ತಿರುವುದನ್ನು ನೋಡಿದೆ. ಆ ಮಾರ್ಗದುದ್ದಕ್ಕೂ ಇರುವವರೆಲ್ಲರನ್ನೂ ಕಾಪಾಡುವ ಅವಕಾಶ ಇನ್ನೂ ಇತ್ತು. ಆಗ ತಕ್ಷಣಕ್ಕೆ ನಾನು ಯೋಚಿಸಿದ್ದು ಅದನ್ನೇ, ಅದು ನನ್ನ ಮೊದಲ ಇಚ್ಛೆಯಾಗಿತ್ತು: ಅವರು ದಾಟಬಲ್ಲರೆ, ನಾನು ಅವರನ್ನು ದಾಟಿಸಲು ಸಾಧ್ಯವೇ ಎನ್ನುವುದನ್ನು ನೋಡೋಣ. ನಾನು ಕೆಲವು, ವಿಶೇಷವಾಗಿ ಅಪಾಯಕಾರಿ ತಾಣಗಳನ್ನು ನೆನಪಿಸಿಕೊಂಡೆ (ಅದರಾಚೆ ವೇಗವಾಗಿ ಹೋಗುತ್ತಿರುವಾಗ ನಾನು ಹೇಳಿದ್ದೆ, ಓಹ್, ಇಲ್ಲಿ ನಾವು ಇದನ್ನು ಮಾಡಲು ಸಾಧ್ಯವಾಗಬಹುದು, ಅಲ್ಲಿ ಅದನ್ನು ಇನ್ನೂ ಮಾಡಬಹುದು – ನನ್ನ ಪ್ರಜ್ಞೆಯು ಅದೇ ವೇಗದಲ್ಲಿ ಚಲಿಸಿತು, ಮತ್ತು ನಾನು ದಾರಿಯುದ್ದಕ್ಕೂ ಎಲ್ಲವನ್ನೂ ಗಮನಿಸಿದೆ), ಒಮ್ಮೆ ನಾನು ಇನ್ನೊಂದು ಬದಿಯನ್ನು ತಲುಪಿದ ಮೇಲೆ, ತಿರುಗಿ ಸಂದೇಶಗಳನ್ನು ಕಳುಹಿಸಲು ಪ್ರಾರಂಭಿಸಿದೆ.

ಕೆಳಗೆ, ನೀರು ತನ್ನ ಭವ್ಯ ರೂಪವನ್ನು ಇನ್ನೂ ಪ್ರದರ್ಶಿಸುತ್ತಿತ್ತು; ಅದು... ಆ ಸನ್ನಿವೇಶ ನಿರಾಶಾದಾಯಕವಾಗಿತ್ತು. ಆದರೆ, ಇಲ್ಲಿ, ಈ ದಾರಿಯುದ್ದಕ್ಕೂ ಭರವಸೆಯೊಂದು ಇನ್ನೂ ಇತ್ತು (ನೀರು ಹೋದ ಮೇಲೂ); ಉಳಿದವರು ಈ ಕಂದರಗಳನ್ನು ದಾಟುವಂತೆ ಸಹಾಯ ಮಾಡಲು ಬಹುಶಃ ನನ್ನ ಬಳಿ ಸಾಮರ್ಥ್ಯವಿತ್ತು. ನಾನು ಎಚ್ಚರಗೊಂಡಿದ್ದರಿಂದ ಅದೇನಿತ್ತೆಂದು ನೋಡಲು ನನಗಾಗಲಿಲ್ಲ. ಆದ್ದರಿಂದ ಅದು ಎಲ್ಲವನ್ನೂ ನಿಲ್ಲಿಸಿತು. ಬಹುಶಃ ನಾನು ಥಟ್ಟನೆ ಎಚ್ಚರಗೊಂಡಿದ್ದರಿಂದ, ಅದರ ಅರ್ಥವನ್ನು ನಾನು ಗ್ರಹಿಸಲಾಗಲಿಲ್ಲ....

ಮಾಧ್ಯಮ ಮತ್ತು ಮುನ್ನಡೆಯ ಚಲನೆಯು(ಪ್ರಗತಿಯು) ಸಾಧನವಾಗಿದೆ ಎನ್ನುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ವಿನಾಶದ ಶಕ್ತಿಗಳ ವೇಗಕ್ಕಿಂತ ಸಾಧನದ ವೇಗವು ಹೆಚ್ಚು ಎಂದು ನಾನು ಅರ್ಥಮಾಡಿಕೊಂಡಿದ್ದೇನೆ. ಮತ್ತು ಕೊಂಚವೂ

ಅನುಮಾನವಿಲ್ಲದೆ ಇದು ನಿಶ್ಚಿತವಾದ ವಿಜಯದಲ್ಲಿ ಕೊನೆಗೊಂಡಿತು. ಈ ಸಾಮರ್ಥ್ಯದ ಭಾವನೆಯು, ಒಮ್ಮೆ ನಾನು ಅಲ್ಲಿ ('ಚೌಕ'ದಲ್ಲಿ) ದೃಢವಾಗಿ ನೆಲೆಗೊಂಡ ನಂತರ, ಇತರರಿಗೆ ಸಹಾಯ ಮಾಡಲು ಸಾಕಾಗಿತ್ತು.

ಇವು ವಿಶ್ವಾತ್ಮಕ ಶಕ್ತಿಗಳಾಗಿದ್ದವು. ಇದು ಯುದ್ಧ ಎಂದು ನಾನು ಹೇಳಲಾರೆ. ಅನೇಕ ಯುದ್ಧಗಳು ಮುಂದೆ ನಡೆಯಬಹುದೆಂದು ಊಹಿಸಿದ್ದೇನೆ – ವ್ಯಾಪಕವಾದ ಯುದ್ಧಗಳು, ಸ್ಥಳೀಯ ಯುದ್ಧಗಳು, ಅನೇಕ ಯುದ್ಧಗಳು – ಮತ್ತು ಇಲ್ಲಿಯವರೆಗೆ ಅವುಗಳನ್ನು ಆ ರೂಪದಲ್ಲಿ ನನಗೆ ಪ್ರಸ್ತುತಪಡಿಸಲಾಗಿಲ್ಲ. ಅವುಗಳು ಯಾವಾಗಲೂ ಅಗ್ನಿಯಾಗಿ ಬಂದಿವೆ – ಜ್ವಾಲೆ, ಮನೆ ಸುಡುವ ಜ್ವಾಲೆಯಾಗಿ.

ಪ್ರವಾಹದಂತೆ ಅಲ್ಲ.

ಜಲಪ್ರಳಯವೋ?

ಆಹ್, ನಾವು ಈಗಾಗಲೇ ಕೆಲವನ್ನು ಕಂಡಿದ್ದೇವೆ. 1962 ರಲ್ಲಿ (ಜಲಪ್ರಳಯ ಸಂಭವಿಸಬಹುದೆಂದು) ಜಗತ್ತಿನ ಎಲ್ಲ ಜನರು ಘೋಷಿಸುತ್ತಿದ್ದಾರೆ ...ಕೆಲವು ಜನರು ಭೂಮಿಯ ಅಂತ್ಯವನ್ನೂ ಉಹಿಸಿದ್ದಾರೆ, ಆದರದು ಮೂರ್ಖತನ! ಭೂಮಿಯು ಒಂದು ನಿರ್ದಿಷ್ಟ ಉದ್ದೇಶದೊಂದಿಗೆ ನಿರ್ಮಿಸಲ್ಪಟ್ಟಿದ್ದರಿಂದ, ಎಲ್ಲ ಕಾರ್ಯಗಳು ಮುಗಿಯುವ ಮೊದಲು ಅದರ ಅಂತ್ಯವಾಗುವುದಿಲ್ಲ. ಆದರೆ ಅಲ್ಲಿ ಕೆಲವು ಬದಲಾವಣೆಗಳಾಗಬಹುದು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 12 ಜುಲೈ, 1960**

**ಪೃಥ್ವಿಯ ಪರಿಸ್ಥಿತಿ**

ಹಿಂದಿನ ಯುದ್ಧಕ್ಕೆ ಹೋಲಿಸಿದರೆ, ಪೃಥ್ವಿಯ ಪರಿಸ್ಥಿತಿಯು ಸಾಕಷ್ಟು ಹದಗೆಟ್ಟಿದೆ; ಈ ಪರಿಸ್ಥಿತಿಯು ವರ್ಷದಿಂದ ವರ್ಷಕ್ಕೆ ಹದಗೆಡುತ್ತ ಸಾಗಿದೆ, ಮತ್ತು ದುರದೃಷ್ಟವಶಾತ್ ನಮ್ಮಲ್ಲಿ ಕೆಲವೇ ಕೆಲವು ಸಂಪನ್ಮೂಲಗಳು ಉಳಿದುಕೊಂಡಿವೆ ಎನ್ನುವಂತಹ ಸನ್ನಿವೇಶದಲ್ಲಿ ನಮ್ಮನ್ನು ನಾವು ಕಂಡುಕೊಳ್ಳುತ್ತೇವೆ. ಸಂಕೀರ್ಣಗೊಳಿಸಿದ ಪರಿಸ್ಥಿಯನ್ನು ಸರಳೀಕರಿಸಲು ಭೂ–ಪರಿಸರದಲ್ಲಿ ಒಂದು ಕಲ್ಪನೆ ಇದೆ – ಅಸಂಬದ್ಧವೆಂದು ಕರೆಯಬಹುದಾದ ಒಂದು ಕಲ್ಪನೆ ಅದು. ಆದರೆ ಆ ಕಲ್ಪನೆಯು ಅಸಂಬದ್ಧವೆನ್ನುವುದಕ್ಕಿಂತ ಅದೊಂದು ಅತಿ ಕೆಟ್ಟ ಮತ್ತು ವಿನಾಶಕಾರಿ ಕಲ್ಪನೆ. ಭಾರೀ ವಿಪ್ಲವಗಳ ನಂತರ ಬರಬಹುದಾದ ಉತ್ತಮ ಪರಿಸ್ಥಿತಿ

ಎನ್ನುವುದು ಆ ಕಲ್ಪನೆ. ಪ್ರತಿಬಂಧಗಳ, ಅಸಾಧ್ಯತೆಗಳ, ನಿರೋಧಗಳ, ನಿಯಮಗಳ, ಪ್ರತಿ ಕ್ಷಣದ ಸಂಕೀರ್ಣತೆಗಳ ನಡುವೆ ನಾವು ಎಷ್ಟೊಂದು ಇಕ್ಕಟ್ಟಿಗೆ ಸಿಲುಕಿದ್ದೇವೆ ಎಂದರೆ, ಉಸಿರುಗಟ್ಟುವ ಭಾವನೆ ಬರುತ್ತದೆ ಮತ್ತು ಎಲ್ಲವೂ ನಾಶವಾದ ಮೇಲೆ ಪರಿಸ್ಥಿತಿಯು ಉತ್ತಮವಾಗಬಹುದೆನ್ನುವ ಒಂದು ಒಳ್ಳೆಯ ಯೋಚನೆಯನ್ನು ಹೊಂದಬಹುದು!... ಎಲ್ಲವೂ ಅತಂತ್ರ. ಎಲ್ಲ ಸರ್ಕಾರಗಳು ಇಂತಹ ಅಸಾಧ್ಯ ಪರಿಸ್ಥಿಗಳಲ್ಲಿವೆ; ಅವುಗಳು ಎಷ್ಟೊಂದು ಬಂಧನಕ್ಕೊಳಗಾಗಿವೆ ಎಂದರೆ, ಮುಂದುವರೆಯಲು ಎಲ್ಲ ಬಂಧನಗಳನ್ನು ಮುರಿಯಬೇಕೆಂದು ತೋರುತ್ತದೆ... (ಮೌನ). ದುರದೃಷ್ಟವಶಾತ್ ಇದು ಸಾಧ್ಯತೆಗಿಂತ ಸ್ವಲ್ಪ ಹೆಚ್ಚಿನ ಪರಿಸ್ಥಿತಿಯಾಗಿದೆ ಮತ್ತು ಇದೊಂದು ತುಂಬಾ ಗಂಭೀರ ಭೀತಿಯಾಗಿದೆ. ನಾವು ಗೊಂದಲದಿಂದ ಹೊರಬರಲು ಅಸಮರ್ಥರೆಂದು ಭಾವಿಸುವ ಕಾರಣ ಜೀವನವು ಇನ್ನೂ ಹೆಚ್ಚು ಅಸಹನೀಯ ಆಗಲಾರದೆನ್ನುವುದು ಖಚಿತವಾಗಿಲ್ಲ – ಮಾನವ ಕುಲವು ತನ್ನನ್ನು ತಾನು ಇರಿಸಿಕೊಂಡ ಜಟಿಲತೆಗಳ ಗೊಂದಲ. ಅದು ನೆರಳಿನಂತೆ – ಆದರೆ ದುರದೃಷ್ಟವಶಾತ್ ಅದೊಂದು ಅತ್ಯಂತ ಕ್ರಿಯಾಶೀಲ ನೆರಳು – ಮಾನವ ಪ್ರಜ್ಞೆಯಲ್ಲಿ ಚಿಮ್ಮಿದ ಒಂದು ಹೊಸ ಭರವಸೆಯ ನೆರಳು, ಸಾಮರಸ್ಯದ ಜೀವನಕ್ಕೆ ಬೇಕಾದ ಒಂದು ಭರವಸೆಯ ಮತ್ತು ಅವಶ್ಯಕತೆಯ ನೆರಳು; ಅವಶ್ಯಕತೆಯು ಜೀವನದಂತೆಯೇ ಹೆಚ್ಚು ತೀವ್ರವಾಗುತ್ತದೆ, ಪ್ರಸ್ತುತ ಇದು ಸಂಘಟಿತವಾಗಿರುವುದರಿಂದ, ಇದಕ್ಕೆ ಹೆಚ್ಚು ವ್ಯತಿರಿಕ್ತವಾಗಿ ಪರಿಣಮಿಸುತ್ತದೆ. ಎರಡು ವಿರೋಧಾಭಾಸಗಳು ಪರಸ್ಪರ ಎಷ್ಟು ತೀವ್ರತೆಯಿಂದ ಎದುರಿಸುತ್ತಿವೆ ಎಂದರೆ ನಾವು ಒಂದು ಆಸ್ಫೋಟವನ್ನು ನಿರೀಕ್ಷಿಸಬಹುದು... ಇದು ಪೃಥ್ವಿಯ ಪರಿಸ್ಥಿತಿಯಾಗಿದೆ.

ಇದು ಪೃಥ್ವಿಯ ಪರಿಸ್ಥಿತಿಯಾಗಿದೆ. ಈ ಪರಿಸ್ಥಿತಿ ಅಷ್ಟೊಂದು ಉಜ್ವಲವಾಗಿಲ್ಲ. ಆದರೆ ನಮ್ಮಲ್ಲಿ ಸಾಧ್ಯತೆಯೊಂದು ಉಳಿದುಕೊಳ್ಳುತ್ತದೆ – ಅದರ ಬಗ್ಗೆ ನಾನೀಗಾಗಲೆ ಸಾಕಷ್ಟು ಬಾರಿ ಮಾತನಾಡಿದ್ದೇನೆ – ಆದಾಗ್ಯೂ, ಹೊರಗೆ ಸಂಗತಿಗಳು ಪೂರ್ಣವಾಗಿ ಹದಗೆಡುತ್ತಿವೆ ಮತ್ತು ವಿನಾಶವನ್ನು ತಪ್ಪಿಸುವ ಸಾಧ್ಯತೆ ಇಲ್ಲ. ಅಲ್ಲಿ ನಮಗೆ, ನಮಗೆ ಅಂದರೆ ಯಾರಿಗೆ ಅತಿಮಾನಸ ಜೀವನವು ಒಂದು ವ್ಯರ್ಥ ಸ್ವಪ್ನವಲ್ಲವೊ, ಅದರಲ್ಲಿ ನಂಬಿಕೆ ಇರುವವರಿಗಾಗಿ ಮತ್ತು ಅದನ್ನು ಸಾಕ್ಷಾತ್ಕರಿಸಿಕೊಳ್ಳುವ ಹಂಬಲವಿದ್ದವರಿಗೆ ಒಂದು ಸಾಧ್ಯತೆಯು ಉಳಿಯುತ್ತದೆ – ಪಾಂಡಿಚೇರಿಯ ಆಶ್ರಮದಲ್ಲಿ ಬಂದು ಸೇರಿದವರೆಂದು ನನ್ನ ಅರ್ಥವಲ್ಲ, ಶ್ರೀ ಅರವಿಂದರಿಂದ ಜ್ಞಾನವನ್ನು ಪಡೆದುಕೊಂಡವರು ಮತ್ತು ಆ ಜ್ಞಾನದಂತೆ ಜೀವಿಸುವ ಇಚ್ಛೆ ಉಳ್ಳವರ ನಡುವಿನ

ಕೊಂಡಿಯಂತೆ ಇದ್ದವರು ಎಂದರ್ಥ – ಅಂಥವರಿಗಾಗಿ, ಅವರ ಶಕ್ತಿಯನ್ನೆಲ್ಲ ಒಗ್ಗೂಡಿಸಲು ಮತ್ತು ಸಾಕ್ಷಾತ್ಕಾರದ ಸಮಯವನ್ನು ಕಡಿತಗೊಳಿಸಲು ತಮ್ಮ ಹಂಬಲವನ್ನು, ತಮ್ಮ ಇಚ್ಛೆಯನ್ನು, ತಮ್ಮ ಪ್ರಯತ್ನವನ್ನು ತೀವ್ರಗೊಳಿಸುವ ಸಾಧ್ಯತೆಯು ಉಳಿಯುತ್ತದೆ. ಈ ಪವಾಡವನ್ನು ವೈಯಕ್ತಿಕವಾಗಿ ಮತ್ತು ಸ್ವಲ್ಪ ಮಟ್ಟಿಗೆ ಸಾಮೂಹಿಕವಾಗಿ ಕಾರ್ಯಶೀಲಗೊಳಿಸುವ – ಈ ಸಾಕ್ಷಾತ್ಕಾರಕ್ಕೆ ಬೇಕಾದ ಅವಕಾಶ, ಕಾಲಾವಧಿ ಮತ್ತು ಸಮಯವನ್ನು ಜಯಿಸುವ ಸಾಧ್ಯತೆಯೊಂದು ಅವರಿಗಿರುತ್ತದೆ; ಪ್ರಪಂಚದ ಪ್ರಸ್ತುತ ಸ್ಥಿತಿಯ ಪರಿಣಾಮಗಳಿಂದ ತಮ್ಮನ್ನು ತಾವು ಮುಕ್ತಗೊಳಿಸಲು ಮತ್ತು ಸಾಕ್ಷಾತ್ಕಾರದಲ್ಲಿ ಸಾಕಷ್ಟು ವೇಗವಾಗಿ ಮತ್ತು ಸಾಕಷ್ಟು ದೂರ ಸಾಗಲು ಸಮಯವನ್ನು ಪ್ರಯತ್ನದ ತೀವ್ರತೆಯಿಂದ ಬದಲಿಸುವ ಸಾಧ್ಯತೆಯೊಂದು ಅವರಲ್ಲಿರುತ್ತದೆ; ಇಂತಹ ಬಲ, ಶಕ್ತಿ, ಬೆಳಕು, ಸತ್ಯದ ಒಂದು ಏಕಾಗ್ರತೆಯನ್ನು ಸಾಧಿಸುವುದರಿಂದ, ಈ ಸಾಕ್ಷಾತ್ಕಾರದಿಂದ ಅವರು ಪ್ರಸ್ತುತ ಸ್ಥಿತಿಯ ಪರಿಣಾಮಗಳನ್ನು ಮೀರಿ ನಿಲ್ಲಬಹುದು ಮತ್ತು ಅವುಗಳಿಂದ ಸುರಕ್ಷಿತವಾಗಿರಬಹುದು, ಬೆಳಕಿನಿಂದ, ಸತ್ಯದಿಂದ ಮತ್ತು ಶುದ್ಧತೆಯಿಂದ ದಯಪಾಲಿಸಲಾದ ರಕ್ಷಣೆಯನ್ನು ಆನಂದಿಸಬಹುದು – ಆಂತರಿಕ ಪರಿವರ್ತನೆ–ಯಿಂದಾದ ಒಂದು ದೈವೀ ಶುದ್ಧತೆ – ಮತ್ತು ಮುಂದಿನ ಭವಿಷ್ಯದ ಈ ಮಹಾನ್ ಭರವಸೆಯನ್ನು ನಾಶಮಾಡಲು ಸಾಧ್ಯವಾಗದೆ ಬಿರುಗಾಳಿಯು ಪ್ರಪಂಚದಾದ್ಯಂತ ಹಾದುಹೋಗಬಹುದು; ಬಿರುಗಾಳಿಯು ಈ ಸಾಕ್ಷಾತ್ಕಾರದ ಪ್ರಾರಂಭವನ್ನು ಅಳಿಸಿಹಾಕದಿರಬಹುದು. ಪ್ರಶಾಂತತೆಯಲ್ಲಿ ನಿದ್ರೆಗೆ ಜಾರುವ ಮತ್ತು ತಮ್ಮ ಲಯಕ್ಕನುಗುಣವಾಗಿ ಸಂಗತಿಗಳು ಸಂಭವಿಸುವಂತೆ ಬಿಡುವ ಬದಲಿಗೆ ನಮ್ಮ ಇಚ್ಛೆ, ಉತ್ಸಾಹ, ಆಕಾಂಕ್ಷೆಗಳ ಅನುಗುಣವಾಗಿ ಸರ್ವ ಪ್ರಯತ್ನ ಮಾಡಿದರೆ ಮತ್ತು ಬೆಳಕಿನಲ್ಲಿ ಪುಟಿದರೆ, ನಾವು ವಿಶ್ವಾಸದಿಂದ ಹಾಗೂ ಹೆಮ್ಮೆಯಿಂದ ಇರಬಹುದು; ಪ್ರಜ್ಞೆಯ ಉನ್ನತ ಕ್ಷೇತ್ರದಲ್ಲಿ ವಾಸಿಸಲು, ಉಸಿರಾಡಲು ಮತ್ತು ಹಾದುಹೋಗುವ ಚಂಡಮಾರುತದ ಮೇಲೆ ಅಭಿವೃದ್ಧಿ ಹೊಂದಲು ನಾವು ಸಾಕಷ್ಟು ಅವಕಾಶವನ್ನು ಹೊಂದಬಹುದು. ಇದು ಸಾಧ್ಯ. ಶ್ರೀ ಅರವಿಂದರು ಇಲ್ಲಿದ್ದಾಗ, ಕೊನೆಯ ಯುದ್ಧದ ಸಮಯದಲ್ಲಿ ಇದನ್ನು ಈಗಾಗಲೇ ಬಹಳ ಚಿಕ್ಕ ರೀತಿಯಲ್ಲಿ ಮಾಡಲಾಗಿತ್ತು. ಅದನ್ನು ಮತ್ತೇ ಮಾಡಬಹುದು. ಆದರೆ ಅದಕ್ಕಾಗಿ ನಾವು ಅದನ್ನು ಬಯಸಬೇಕು ಮತ್ತು ಪ್ರತಿಯೊಬ್ಬರೂ ತಮ್ಮ ಸ್ವಂತ ಕೆಲಸವನ್ನು ಸಾಧ್ಯವಾದಷ್ಟು ಪ್ರಾಮಾಣಿಕವಾಗಿ ಮತ್ತು ಸಂಪೂರ್ಣವಾಗಿ ಮಾಡಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/169–171**

**ವಿಪ್ಲವಗಳ ಹಿಂದಿರುವ ಅಸುರ**

(ಹಿಮಾಲಯದ ಗಡಿಯುದ್ದಕ್ಕೂ ಚೀನಾ–ಭಾರತ ನಡುವಣ ಸಂಘರ್ಷಕ್ಕೆ ಸಂಬಂಧಿಸಿದಂತೆ:) ಅದು ಒಂದು ಸರ್ವಸಾಮಾನ್ಯವಾದ, ಒಂದು ಭೀಕರ ಜಾಗತಿಕ ಯುದ್ಧದ ಪ್ರಾರಂಭವೆಂದು ಸಾರಲು ಎಕ್ಸ್(X) ಎನ್ನುವವರು ಎನ್(N) ಎನ್ನುವವರಿಗೆ ನಿಖರವಾದ ಮತ್ತು ಭಯಂಕರ ಶಬ್ದಗಳಲ್ಲಿ ಬರೆದರು.

ನನಗೆ ಗೊತ್ತು, ನಾನು ನಿನಗೆ ಹಲವು ಬಾರಿ ಹೇಳಿದ್ದೇನೆ, ಅದು ಆ ಅಸುರನ (ಸತ್ಯದ ಪ್ರಭುವಿಗೆ ಜನಿಸಿದ ಮಿಥ್ಯೆಯ ಪ್ರಭು) ಇಚ್ಛೆ ಎಂದು. ಆ ಸಮಯ ಸನ್ನಿಹಿತವಾಗಿದೆ ಎಂದು ತಿಳಿದಿರುವವನು (ಸಮೀಪ ಎನ್ನುವುದು ಅಲ್ಲಿರುವ ಪ್ರಪಂಚಕ್ಕೆ ಸಂಬಂಧಿಸಿದ) ಮತ್ತು ಮಾಯವಾಗುವ ಮೊದಲು ಎಷ್ಟು ಸಾಧ್ಯವೊ ಅಷ್ಟು ವಿನಾಶಕ್ಕೆ ಕಾರಣವಾಗುವೆನೆಂದು ಸಾರಿದ್ದಾನೆ. ತೀರ ಇತ್ತೀಚೆಗೆ, ಈಗಿನ ಸಂಘರ್ಷಕ್ಕಿಂತ ಮೊದಲು, ಈ ಭೂಮಿಯ ಮೇಲಿರುವ ಭೌತಿಕ ಜಗತ್ತಿನಲ್ಲಿನ ಒಂದು ಕ್ಷೇತ್ರಕ್ಕೆ ಹೋದೆ, ಒಂದು ವೇದಿಕೆಯಂತೆ (ಪರ್ವತದ ತುದಿಯಲ್ಲ, ಆದರೆ ಸಂಪೂರ್ಣ ದೃಶ್ಯವನ್ನು ಕಾಣಬಹುದಾದ ಒಂದು ಸ್ಥಳ, ಉದಾಹರಣೆಗೆ ಹಡಗಿನ ನಾಯಕನು ನಿಲ್ಲುವ ಸೇತುವೆಯಂತೆ; ಭೌತಿಕ ಜಗತ್ತಿನಲ್ಲಿ ಆ ಸ್ಥಳವು ಆ ರೀತಿಯಾಗಿತ್ತು, ಭೂಮಂಡಲದ ಎಲ್ಲ ಜೀವನವನ್ನು ಕಡೆಗಣಿಸುವಂತೆ). ನಾನಲ್ಲಿಗೆ ಹೋದೆ – ವಾಸ್ತವವಾಗಿ ಅಲ್ಲಿ ಬಹಳೇ ಕತ್ತಲೆ ಇತ್ತು – ಅಲ್ಲಿ ಆ ಎತ್ತರದ ಪುರುಷನು ಇದ್ದ, (ಅವನು ಬಹಳೇ ಎತ್ತರವಾಗಿದ್ದ, ಆತನು ಕೋಣೆಗಿಂತ ಎತ್ತರವಾಗಿದ್ದ – ಶ್ರೀಮಾತೆಯವರು ಕೋಣೆಯ ಛಾವಣಿಯನ್ನು ನೋಡುತ್ತಾರೆ – ಆತನು ಎತ್ತರವಾಗಿ ಕಾಣಲು ಬಯಸುತ್ತಾನೆ). ಆತ ಅತಿ ಎತ್ತರವಿದ್ದಾನೆ ಮತ್ತು ಪೂರ್ತಿ ಕಪ್ಪು ಬಣ್ಣದವನಾಗಿದ್ದಾನೆ. (ಹೆಚ್ಚು ಕಡಿಮೆ ಅದು ಆತನ ಸಹಜ ಸ್ಥಿತಿ; ಅವನು ಮನುಷ್ಯರಿಗೆ ಬೆಳಕಿನಿಂದ ಪ್ರಜ್ವಲಿಸುತ್ತಿರುವಂತೆ ಕಾಣಿಸುತ್ತಾನೆ, ಆದರೆ ಅಂತರ್ದೃಷ್ಟಿ ಉಳ್ಳವರನ್ನು ಅದು ಮೂರ್ಖರನ್ನಾಗಿ ಮಾಡಲಾರದು: ಅದೊಂದು ಹಿಮಾವೃತ ಬೆಳಕು. ಆದರೆ ಕೆಲವು ಜನರು ಮೂರ್ಖರಾಗಿಬಿಡುತ್ತಾರೆ ಮತ್ತು ಆತನನ್ನೇ ಪರಮ ಪ್ರಭುವೆಂದು ಪರಿಗಣಿಸುತ್ತಾರೆ. ಅದೊಂದು ಪಕ್ಕಕ್ಕಿರಲಿ.) ಹಾಗಾಗಿ ಆತ ಅಲ್ಲಿದ್ದ ಮತ್ತು ನಾನು ಆತನ ಬಳಿಗೆ ಹೋದೆ – ಅವನಲ್ಲಿಗಲ್ಲ: ಆತನಿರುವ ಸ್ಥಳಕ್ಕೆ ಹೋದೆ ಮತ್ತು ಅಲ್ಲಿ ಆತನನ್ನು ಕಂಡುಕೊಂಡೆ. ಆತ ಸಂತೋಷ ಪಡುತ್ತಿದ್ದ ಮತ್ತು ಸುತ್ತಲು ಕಣ್ಣು ಹಾಯಿಸಿ ನೋಡಲು ಹೇಳಿದ.

ಆ ಸ್ಥಳದಿಂದ ನೀವು ಎಲ್ಲದರ ಒಂದು ವಿಹಂಗಮ ನೋಟವನ್ನು ಹೊಂದಬಹುದು. ಚಂಡಮಾರುತವು(ಭಯಾನಕ ಚಂಡಮಾರುತ) ಸ್ಫೋಟಿಸಿದಷ್ಟು ಶೀಘ್ರವಾಗಿ ನಾನು ಬಂದೆ. ನಾನು ನೋಡುತ್ತಲೇ ಇದ್ದೆ, ಮತ್ತು ನಂತರ ನಾನು ಈ ದಿಕ್ಕಿನಲ್ಲಿ ನೋಡಿದೆ (ಅದು ಯಾವ ದಿಕ್ಕು ಎನ್ನುವುದು ನನಗೆ ತಿಳಿಯಲಿಲ್ಲ, ಆದರೆ ಅದು ಈ ದಿಕ್ಕಿನಲ್ಲಿತ್ತು: ಶ್ರೀಮಾತೆಯವರು ಉತ್ತರ ದಿಕ್ಕಿಗೆ ಬೆಟ್ಟು ಮಾಡಿ ತೋರಿಸುತ್ತಾರೆ). ನಾನು ಸುಮಾರು ಏಕ ಕಾಲದಲ್ಲಿ ಎರಡು ಮಿಂಚುಗಳನ್ನು ನೋಡಿದೆ. ಮೊದಲನೆಯದು, ನಾನು ಉತ್ತರಕ್ಕೆ ನೋಡುತ್ತಿದ್ದೆ (ಉತ್ತರಕ್ಕೆ ಮುಖ ಮಾಡುವುದರ ಬಗ್ಗೆ ನನಗೆ ಸಾಕಷ್ಟು ಅರಿವಿತ್ತು)... ಮೊದಲನೆಯದು, ಒಂದು ಭಯಾನಕ ಸಿಡಿಲು, ಪೂರ್ವದಿಂದ ಬಂದು ಬಿದ್ದಿತು; ಮತ್ತು ಸ್ವಲ್ಪ ಸಮಯದ ನಂತರ, ಬಹಳ ಬೇಗ, ಇನ್ನೊಂದು ಪಶ್ಚಿಮದಿಂದ ಬಂದು ಬಿದ್ದಿತು. ಅವೆರಡೂ ಒಟ್ಟಿಗೆ ಬರಲಿಲ್ಲ, ಆದರೆ ಅವುಗಳು ಒಂದೇ ಸ್ಥಳದಲ್ಲಿ ಬಿದ್ದವು – ಅವು ಭೇಟಿಯಾಗಲಿಲ್ಲ, ಅದು ಗಾಢಾಂಧಕಾರವಾಗಿತ್ತು, ಭೂಮಿ ಮತ್ತು ಎಲ್ಲವೂ ಕತ್ತಲೆಯಾಗಿತ್ತು, ನೀವು ಏನನ್ನೂ ನೋಡಲಾಗಲಿಲ್ಲ, ಮತ್ತು ಇದ್ದಕ್ಕಿದ್ದಂತೆ ಆ ಎರಡು ಮಿಂಚುಗಳು ಅವು ಬಿದ್ದ ಪ್ರದೇಶವನ್ನು ಬೆಳಗಿಸಿದವು, ಭಯಾನಕ ಗರ್ಜನೆಯನ್ನು ಮಾಡುತ್ತ, ಮತ್ತು (ನನ್ನ ದೃಷ್ಟಿಯ ವ್ಯಾಪ್ತಿಯು ಆ ಪ್ರದೇಶಕ್ಕೆ ಸೀಮಿತವಾಗಿತ್ತು; ಉಳಿದವೆಲ್ಲವೂ ಕತ್ತಲೆಯಲ್ಲಿತ್ತು, ಗೊತ್ತೆ)... ಅದು ಜ್ವಾಲೆಗಳಾಗಿ ಸಿಡಿಯಿತು! ಎಲ್ಲವನ್ನೂ ಸುಟ್ಟು ಹಾಕಲಾಯಿತು. ಆ ಮಿಂಚಿನ ಹೊಳಪಿನಲ್ಲಿ, ಸ್ಮಾರಕಗಳ, ಮನೆಗಳ, ಎಲ್ಲಾ ರೀತಿಯ ವಸ್ತುಗಳ ಮೇಲ್ಭಾಗಗಳನ್ನು ಗಮನಿಸಬಹುದಾಗಿತ್ತು, ಮತ್ತು ನಂತರ ಎಲ್ಲವೂ ಜ್ವಾಲೆಗಳಾಗಿ ಸ್ಫೋಟಗೊಂಡವು: ಒಂದು ಮಹಾಜ್ವಾಲೆ.

ನಾನು ನನ್ನ ಬಗ್ಗೆ ಸಹ ಹೇಳಿಕೊಂಡೆ (ಇದೊಂದು ಕುತುಹಲಕಾರಿಯಾದ ಭಾವನೆಯಾಗಿತ್ತು), "ಅದರ ಇಂತಹ ಹತ್ತಿರದ ನೋಟವನ್ನು ಹೊಂದುವುದು ಆಸಕ್ತಿದಾಯಕವಾಗಿದೆ." ಅಂದರೆ, ಶ್ರೀ ಅರಬಿಂದೋ ಅವರು ಕರೆಯುವಂತೆ, ಜಗತ್ತನ್ನು ನೋಡುವುದಕ್ಕಾಗಿ ನನ್ನ "ಸ್ಥಾನವು" ತುಂಬಾ ಎತ್ತರದಲ್ಲಿತ್ತು, ಮತ್ತು ನಾನು ಆ ಸ್ಥಳಕ್ಕೆ ಬರಬೇಕಾಗಿತ್ತು ಎಂಬ ಭಾವನೆ ನನ್ನಲ್ಲಿತ್ತು. ಮತ್ತು ಅದನ್ನೇ ನಾನು ಹೇಳುವಂತೆ ಮಾಡಿತು, "ಸರಿ, ವಿಷಯಗಳ ಅಂತಹ ನಿಕಟ ನೋಟವನ್ನು ಹೊಂದಿರುವುದು ಆಸಕ್ತಿದಾಯಕವಾಗಿದೆ". (ನಾನಿದನ್ನು ಆ ಪುರುಷನಿಗೆ ಹೇಳಲಿಲ್ಲ, ನಾನು ಹಾಗೆ ಯೋಚಿಸಿದೆ.) ಮತ್ತು ಅವನು ನನ್ನ ಪಕ್ಕದಲ್ಲಿ, ನನ್ನ ಬಲಕ್ಕೆ ಸ್ವಲ್ಪ

ದೂರದಲ್ಲಿ ನಿಂತು, ಸಂತೋಷ ಪಡುತ್ತಿದ್ದನು (ಮೇಲಕ್ಕೆ ನೋಡಿದಾಗ, ನಾನು ಅವನ ತಲೆಯನ್ನು ಕಂಡೆ – ಶ್ರೀಮಾತೆಯವರು ಛಾವಣಿಯ ಕಡೆಗೆ ನೋಡಿದರು). ಅವನು ಉಲ್ಲಾಸಭರಿತನಾಗಿದ್ದ, ಹಿರಿ–ಹಿರಿ ಹಿಗ್ಗುತ್ತಿದ್ದ: "ನೋಡಿ, ನೋಡಿ, ನೋಡಿ!" ಆತ ಆನಂದಪರವಶನಾಗಿದ್ದಾನೆ; ನಾನು ಸಂಪೂರ್ಣವಾಗಿ ಸ್ಥಿರಳಾಗಿದ್ದೆ; ಎಲ್ಲವೂ ಸ್ಥಿರವಾಗಿತ್ತು, ಶಾಂತವಾಗಿತ್ತು, ನಿಶ್ಚಲವಾಗಿತ್ತು (ಬಂದ ಯೋಚನೆಯು, ನನ್ನ ಮುಖಾಂತರ ಹಾದುಹೋಗುವ ಸಂಗತಿಯಂತಿತ್ತು: "ಅದರ, ಅಂತಹ ನಿಕಟ ನೋಟವನ್ನು ಹೊಂದಿರುವುದು ಆಸಕ್ತಿದಾಯಕವಾಗಿದೆ"). ನಾನು ಎಲ್ಲವನ್ನೂ ನಿಲ್ಲಿಸಿಬಿಟ್ಟೆ, ಈ ರೀತಿಯಾಗಿ (ಶ್ರೀಮಾತೆಯವರು ಮುಷ್ಟಿ ಬಿಗಿಹಿಡಿದ ಒಂದು ಮೂರ್ತಿಯಂತೆ ಇದ್ದುಬಿಡುತ್ತಾರೆ). ಮತ್ತು ನಂತರದಲ್ಲಿ, ಬೇಗನೆ ಎಲ್ಲವೂ ನಿಂತು ಹೋಯಿತು (ನಾನು ನಿಖರವಾಗಿ ಹೇಳಲಾರೆ, ಯಾಕೆಂದರೆ ಸಮಯ ಇಲ್ಲಿರುವಂತೆ ಅಲ್ಲಿರಲಿಲ್ಲ). ಆ ಬಿರುಗಾಳಿಯ ಏಕಮಾತ್ರ ಉದ್ದೇಶವು ಎರಡು ಸಿಡಿಲುಗಳಿಗೆ ಕಾರಣವಾಗುವುದಿತ್ತು, ಅವೆರಡೂ ಭೂಮಿಯ ಮೇಲೆ ಬಿದ್ದ ನಂತರ ಬಿರುಗಾಳಿಯು ನಿಂತು ಹೋಯಿತು. ನಂತರ ಜ್ವಾಲೆಗಳು... ಪೂರ್ತಿ ಪ್ರದೇಶವು ಸುಟ್ಟು ಹೋಯಿತು (ಅದೊಂದು ದೊಡ್ಡ ನಗರದಂತೆ ಇತ್ತು, ಆದರೆ ನಗರವಲ್ಲ: ಬಹುಶಃ ಅದು ಒಂದು ದೇಶದ ಸಂಕೇತದಂತಿತ್ತು): ಅದು ಜ್ವಾಲೆಗಳಾಗಿ ಸಿಡಿಯಿತು; ಕೆಲವು ಜ್ವಾಲೆಗಳು ಮೇಲೆ, ಮೇಲಕ್ಕೆ ನೆಗೆಯುತ್ತಿದ್ದವು. ಆದರೆ ನಾನು ಸುಮ್ಮನೆ ಇದನ್ನು ಮಾಡಿ ಬಿಟ್ಟೆ, ನಾನು ಎಲ್ಲವನ್ನೂ ನಿಲ್ಲಿಸಿಬಿಟ್ಟೆ (ಶ್ರೀಮಾತೆಯವರು ಕಣ್ಣನ್ನು ಮುಚ್ಚಿ, ಮುಷ್ಟಿಯನ್ನು ಬಿಗಿಹಿಡಿದು ನಿಶ್ಚಲವಾಗಿದ್ದು ಬಿಡುತ್ತಾರೆ), ಮತ್ತು ಮತ್ತೊಮ್ಮೆ ಹೊರಗೆ ನೋಡಿದೆ – ಎಲ್ಲವೂ ಸಹಜ ಸ್ಥಿತಿಗೆ ಮರಳಿತ್ತು. ಆಗ ನಾನು ಹೇಳಿದೆ (ಯಾಕೆಂದು ನನಗೆ ಗೊತ್ತಿಲ್ಲ, ಆದರೆ ನಾನು ಆತನೊಂದಿಗೆ ಇಂಗ್ಲಿಷ್‌ನಲ್ಲಿ ಮಾತನಾಡುತ್ತಿದ್ದೆ... ಹೌದು, ಯಾಕೆಂದರೆ "ನೀನು ನೋಡು, ನೋಡು!" ಎಂದು ಹೇಳುತ್ತ ಆತ ಇಂಗ್ಲಿಷ್ ಮಾತನಾಡುತ್ತಿದ್ದ) "ಆಹ್, ಅದು ಹೆಚ್ಚು ಸಮಯ ಉಳಿಯಲಿಲ್ಲ. ಅವರು ಅದನ್ನು ಬೇಗನೆ ನಿಯಂತ್ರಣಕ್ಕೆ ತಂದರು." ಇದಾದ ನಂತರ, ಆತ ನನ್ನೆಡೆಗೆ ಬೆನ್ನು ಹಾಕಿದ (ನಗುತ್ತ); ಆತ ಒಂದು ದಾರಿಯನ್ನು ಹಿಡಿದ ಮತ್ತು ನಾನು ಇನ್ನೊಂದು ದಾರಿಯನ್ನು ಹಿಡಿದೆ. ಆಗ ನಾನು ಬಾಹ್ಯ ಪ್ರಜ್ಞೆಯನ್ನು ಮರಳಿ ಪಡೆದುಕೊಂಡೆ, ಆದುದರಿಂದ ನನಗೆ ಎಲ್ಲವೂ ನಿಖರವಾಗಿ ನೆನಪಿನಲ್ಲಿದೆ...

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 17 ನವೆಂಬರ್, 1962**

**ಜಾಗತಿಕ ಯುದ್ಧ**

*"ಒಂದೊಮ್ಮೆ ಜಾಗತಿಕ ಯುದ್ಧಯು ಪ್ರಾರಂಭವಾದರೆ, ಮಾನವ ಕುಲದ ಹೆಚ್ಚಿನಾಂಶವು ನಾಶವಾಗುವುದಲ್ಲದೆ, ಬದುಕುಳಿದವರಿಗೂ, ಪರಮಾಣು ಯುದ್ಧಾಯುಧ ಬಳಕೆಯ ಪರಿಣಾಮಗಳಿಂದಾಗಿ ಬದುಕಲು ಬೇಕಾದ ಪರಿಸ್ಥಿತಿಗಳು ಅಸಾಧ್ಯವಾಗಬಹುದು. ಒಂದು ವೇಳೆ ಇಂತಹ ಯುದ್ಧದ ಸಾಧ್ಯತೆಯು ಇನ್ನೂ ಇದ್ದರೆ, ಅದು ಅತಿಮಾನಸ ಸತ್ಯದ ಆಗಮನದ ಮೇಲೆ ಮತ್ತು ಭೂಮಿಯ ಮೇಲೆ ಹೊಸ ಮಾನವ ಕುಲದ ಉದಯದ ಮೇಲೆ ಪಾರಿಣಾಮವನ್ನು ಬೀರುವುದಿಲ್ಲವೆ?"*

"ಇವೆಲ್ಲವೂ ಮನಸ್ಸಿನ ಊಹಾಪೋಹಗಳು, ಮತ್ತು ಒಮ್ಮೆ ಈ ಮನಸ್ಸಿನ ಕಲ್ಪನೆಗಳ ಕ್ಷೇತ್ರವನ್ನು ನೀವು ಪ್ರವೇಶಿಸಿದರೆ, ಆಗ ಸಮಸ್ಯೆಗಳಿಗೆ ಹಾಗೂ ಅವುಗಳ ಪರಿಹಾರಗಳಿಗೆ ಕೊನೆಯೆನ್ನುವುದಿರುವುದಿಲ್ಲ. ಆದರೆ, ಅದೆಲ್ಲವೂ ನಿಮ್ಮನ್ನು ಸತ್ಯದ ಹತ್ತಿರ ಒಂದು ಹೆಜ್ಜೆಯಷ್ಟೂ ಸನೀಹ ತರಲಾರದು."

"ಮನಸ್ಸಿನ ಅತ್ಯಂತ ಸುರಕ್ಷಿತ ಹಾಗೂ ಅತ್ಯಂತ ಅರೋಗ್ಯಕರ ಮನೋಭಾವ ಇದರಂತಿದೆ: ಅತಿಮಾನಸ ಸೃಷ್ಟಿಯು ವರ್ತಮಾನದಲ್ಲಿರುವುದನ್ನು ಅನುಸರಿಸುತ್ತದೆ ಎಂದು ಸಕಾರಾತ್ಮಕವಾದ ಹಾಗೂ ಖಚಿತವಾದ ರೀತಿಯಲ್ಲಿ ನಮಗೆ ಹೇಳಲ್ಪಟ್ಟಿತ್ತು, ಹಾಗಾಗಿ, ಭವಿಷ್ಯತ್ತಿಗಾಗಿ ಏನೆಲ್ಲವೂ ಸಿದ್ಧತೆಯಲ್ಲಿರುವುದೊ ಅದರ (ಅದೇನೆ ಇರಲಿ) ಆಗಮನಕ್ಕಾಗಿ ಬೇಕಾದ ಸಂದರ್ಭಗಳೇ ಇರಬೇಕು. ಈ ಸಂದರ್ಭಗಳು ಯಾವವು ಎಂದು ಮುಂಗಾಣಲು ನಮಗೆ ಸಾಧ್ಯವಿಲ್ಲದ್ದರಿಂದ ಅವುಗಳ ಬಗ್ಗೆ ಮಾತನಾಡದೆ ಸುಮ್ಮನಿರುವುದೇ ಉತ್ತಮ."

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/111–112**

**ಒಂದು ಹೊಸ ವ್ಯವಸ್ಥೆಯನ್ನು ಪ್ರಾರಂಭಿಸುವುದು**

ಬೆಳಿಗ್ಗೆಯಿಂದ ಅದು ಆ ರೀತಿಯೇ ಇತ್ತು, ಬರೀ ಮುಷ್ಕರಗಳು, ಕಲಹಗಳು, ಅವ್ಯವಸ್ಥೆಗಳು....

ಅವ್ಯವಸ್ಥೆಯನ್ನು ಸೃಷ್ಟಿ ಮಾಡಿದವರ ಸಹಾಯದಿಂದ ವ್ಯವಸ್ಥೆಯನ್ನು ಪುನಃ ಪ್ರತಿಷ್ಠಾಪಿಸಲೇಬೇಕು ಎನ್ನುವಂತಹ ಒಂದು ಭಾವನೆ. ಅದು ಮಾಡಲೇಬೇಕಾದ

ಸಂಗತಿಯಾಗಿದೆ. ಸಾಮಾನ್ಯ ಸದಾಶಯದ ಆಧಾರದ ಮತ್ತು ಎಲ್ಲ ನೈತಿಕ ಹಾಗೂ ಸಾಮಾಜಿಕ ನಿಯಮಗಳ ಆಧಾರದ (ನೆಲಕ್ಕೆ ಅಪ್ಪಳಿಸಲ್ಪಟ್ಟ ಎಲ್ಲದರ) ಪ್ರತಿಯಾಗಿ ನಾವು ಮೇಲೇಳಲೇಬೇಕು, ದೈವೇಚ್ಛೆ ಹಾಗೂ ದೈವೀ ಸಾಮರಸ್ಯವು ಅಲ್ಲಿರಲೇಬೇಕು, ನಮಗೆ ಬೇಕಾಗಿರುವುದು ಅದು; ನಂತರ ಸಂಗತಿಗಳ ಸಾಮಾನ್ಯ ನಿಯಮದ ವಿರುದ್ಧ ಮತ್ತು ಸಾಮಾನ್ಯ ಸಾಮಾಜಿಕ ಸಂಪ್ರದಾಯಗಳ ವಿರುದ್ಧ ಪ್ರತಿಭಟಿಸಿದವರು: ನೀವು ಉನ್ನತ ಪ್ರಜ್ಞೆಯೊಂದಿಗೆ ಮತ್ತು ಸತ್ಯದೊಂದಿಗೆ ಬಾಂಧವ್ಯ ಹೊಂದಿರುವಿರೆಂದು ನಿರೂಪಿಸಿ.

ಅದನ್ನು ಮಾಡುವ ಸಮಯ ಇದಾಗಿದೆ (ಮೇಲೆ ನೆಗೆಯುವ ಸನ್ನೆ).

ಸಂಘಟಿಸುವ ಸಾಮರ್ಥ್ಯದ ದೃಷ್ಟಿಕೋನದಿಂದ ಅದೊಂದು ಪ್ರಭಾವ... ಅತ್ಯಂತ ಪ್ರಬಲ ಪ್ರಭಾವ. ಅದೊಂದು ವಿಸ್ಮಯ. ಒಂದು ವೇಳೆ ಈ ಪ್ರಭಾವವನ್ನು ಉನ್ನತ ವ್ಯವಸ್ಥೆಯ, ನೈಜ ಪ್ರಜ್ಞೆಯ ಉಪಯೋಗಕ್ಕಾಗಿ ಇರಿಸಿದರೆ, ಏನನ್ನಾದರು ಮಾಡಬಹುದು.

ನಾವು ಮೇಲಕ್ಕೆ ನೆಗೆಯುವ ಪ್ರಯತ್ನವನ್ನು ಮಾಡಲೇಬೇಕು.

ವ್ಯವಸ್ಥೆಯನ್ನು ಪುನಃ ಸ್ಥಾಪಿಸ ಬಯಸುವ ಜನರು ಎಲ್ಲ ಹಳೆಯ ಕಲ್ಪನೆಗಳಲ್ಲಿ ಹಿಂದೆ ಸರಿಯುತ್ತಾರೆ – ಆದ್ದರಿಂದ ಅವರು ಎಂದಿಗೂ ಸಫಲರಾಗುವುದಿಲ್ಲ. ಅದು ಮುಕ್ತಾಯವಾಯಿತು, ಒಳ್ಳೆಯದಕ್ಕಾಗಿ ಮುಕ್ತಾಯವಾಯಿತು. ನಾವು ಮೇಲೆ ಹೋಗುತ್ತೇವೆ. ಮೇಲೆರುವವರು ಮಾತ್ರ ಕೆಲಸವನ್ನು ಮಾಡಬಹುದು.

ನಿಮ್ಮಲ್ಲಿ ಏನೂ ಇಲ್ಲವೆ? ಕೇಳಲು ಏನೂ ಇಲ್ಲವೆ?

ನಾನು ಯಾವ ದಿಕ್ಕಿನಲ್ಲಿ ಚಲಿಸುತ್ತಿದ್ದೇನೆಂದು ನನಗೆ ಸರಿಯಾಗಿ ತಿಳಿದಿಲ್ಲ.

ಅಲ್ಲಿರುವುದು ಒಂದೇ ಒಂದು ಮಾರ್ಗ – ದೈವೀ ಕಡೆಗಿನ ಮಾರ್ಗ. ಮತ್ತು ನಿಮಗೆ ತಿಳಿದಿರುವಂತೆ, ಅದು ಹೊರಗಿರುವಷ್ಟು ಒಳಗೂ ಇದೆ, ಅದು ಮೇಲಕ್ಕಿರುವಷ್ಟು ಕೆಳಕ್ಕೂ ಇದೆ. ಅದು ಎಲ್ಲ ಕಡೆಯೂ ಇದೆ. ಪರಮಾತ್ಮನನ್ನು ಕಂಡುಕೊಳ್ಳಬೇಕು ಮತ್ತು ಆತನಿಗೆ ಅಂಟಿಕೊಳ್ಳಬೇಕು – ಪರಮಾತ್ಮನಿಗೆ ಮಾತ್ರ; ಅನ್ಯ ಮಾರ್ಗವಿಲ್ಲ.

*

**ದುರಂತದ ಸಾಧ್ಯತೆ**

ಕೆಲವೇ ದಿನಗಳ ಹಿಂದೆ ಅನಾಹುತವು ಸಮೀಪಿಸುತ್ತಿರುವಂತೆ ಕಾಣುತ್ತಿತ್ತು. ಆಗ, ಆ ಕ್ಷಣದಲ್ಲಿ, ನನ್ನ ಇಡೀ ಜೀವವು... (ಹೇಗೆ ಹೇಳುವುದು?) ಅದನ್ನು ನಿಜವಾದ ಜಯಕ್ಕಾಗಿ ಆಕಾಂಕ್ಷೆ ಎಂದು ಕರೆಯಬಹುದು, ಬೇರೆ ಯಾವುದೂ ಅಲ್ಲ, ನಿಜವಾದ ಜಯಕ್ಕಾಗಿ. ಇದುವೇ ಎಲ್ಲ ತೊಂದರೆಗಳನ್ನು ತಂದಿದೆ ಎಂದು ತೋರುತ್ತದೆ – ಈ ವಿಶೇಷ ಸಂಕಲ್ಪಗಳು. ಆಗ ಇದ್ದಕ್ಕಿದ್ದಂತೆ ಬೆಳಕೊಂದು ಕಾಣಿಸಿಕೊಂಡಿತು: ಜಯದ ಸಾಧ್ಯತೆ. ಅದು ಪವಾಡವಲ್ಲ, ಅದು ಮಧ್ಯಸ್ಥಿಕೆ, ಪರಮ ಜ್ಞಾನದ ಮಧ್ಯಸ್ಥಿಕೆ. ಅದು ವಾಸ್ತವಿಕವೆ? ನೋಡೋಣ. ಅದು ಬರಬಹುದೆಂದು ತೋರುತ್ತದೆ, ಅದೊಂದು ಸಾಧ್ಯತೆಯಾಗಿ ಈ ರೀತಿಯಾಗಿ ಬರಬಹುದೆಂದು ಕಾಣುತ್ತದೆ (ಕೊಂಚ ಎತ್ತರದಿಂದ, ಕೆಳಮುಖವಾದ ಎರಡೂ ಅಂಗೈಗಳ ಸಂಕೇತ).

ನಾನು ಹೇಳಲಾರೆ, ಅದು ಅಕಸ್ಮಾತ್ತಾಗಿ ಬರಲಿಲ್ಲವಾದ್ದರಿಂದ, ಅದು ಕೆಲವು ದಿನಗಳಲ್ಲಿ ಬರಬಹುದು.

ಹೌದು, ಕೆಲ ಸಮಯದಿಂದ ಒಂದು ಭಾರಿ ಹತಾಶವಾದವನ್ನು ಅನುಭವಿಸುತ್ತಿದ್ದೆ.

ಅದೊಂದು ಕೆಟ್ಟ ಮನೋವೃತ್ತಿ.

ಆ ಮನೋವೃತ್ತಿ ನನ್ನಲ್ಲಿ ಇಲ್ಲ, ಆದರೂ ಒಂದು ನಿರಾಶಾದಾಯಕ ಸನ್ನಿವೇಶವು ಬರುವಂತೆ ತೋರುತ್ತಿತ್ತು.

ದೇವರು ಬೇಡವೆನ್ನುವ ಎಲ್ಲವೂ, ದೇವರು ಬೇಕು ಎನ್ನುವವರನ್ನು ಎದೆಗುಂದಿಸಲು ಉದ್ದೇಶಪೂರ್ವಕವಾಗಿ ಇಂತಹ ಸನ್ನಿವೇಶವನ್ನು ನಿರ್ಮಿಸುತ್ತವೆ. ನೀವು ಅದಕ್ಕೆ ಗಮನವನ್ನು ಕೊಡಲೇಬಾರದು. ಅದು, ಅದು ಅಸುರನ ದಾರಿ. ನಿರಾಶಾವಾದವು ಅಸುರನ ಆಯುಧವಾಗಿದೆ ಮತ್ತು ಆತನು ತನ್ನ ಪರಿಸ್ಥಿತಿಯನ್ನು ಗ್ರಹಿಸುತ್ತಾನೆ (ಕಂಪಿಸುವ ಸನ್ನೆ). ಯಾವುದು ಸಾಧ್ಯವೆಂದು ನಾನು ನೋಡುತ್ತೇನೆಯೊ ಅದು ಸಿದ್ಧಿಸಿದಾಗ, ಅದು ಪ್ರತಿಕೂಲ ಶಕ್ತಿಗಳ ಮೇಲಿನ ನಿಜವಾದ ನಿರ್ಣಾಯಕ ವಿಜಯವಾಗುವುದು – ಸ್ವಾಭಾವಿಕವಾಗಿ, ತನ್ನನ್ನು ತಾನು ಅತ್ಯುತ್ತಮವೆಂದು ಸಮರ್ಥಿಸಿಕೊಳ್ಳುತ್ತಾನೆ... ಅದು ಯಾವಾಗಲೂ ಅಸುರ; ನೀವು ನಿರಾಶಾವಾದದ ಹಿಂಬದಿಯನ್ನು ನೋಡಿದ ತಕ್ಷಣ ಹೇಳಬಹುದು, ಅದು ಅಸುರನೆಂದು. ಅದೇ ಆತನ ದೊಡ್ಡ ಅಸ್ತ್ರ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/256–257 – ಶ್ರೀಮಾತೆ**

# ಭವಿಷ್ಯ

**– ಅನು: ಪುಟ್ಟು ಕುಲಕರ್ಣಿ**

## ಜಗತ್ತು ಖಚಿತವಾಗಿಯೂ ರಕ್ಷಿಸಲ್ಪಡುವದು

ಈಗಾಗಲೇ ಉತ್ತರಿಸಿರುವ ಎಲ್ಲ ವಿಷಯಗಳ ಹೊರತಾಗಿಯೂ ಇನ್ನೊಂದು ಮುಖ್ಯವಾದ ಸಂಗತಿ ನಮ್ಮೆದುರಿಗಿದೆ, ಅದೆಂದರೆ ಪ್ರಚಲಿತದಲ್ಲಿರುವ ನಾಗರೀಕತೆಯ ಕುರಿತಾದ ಪ್ರಶ್ನೆಯಾಗಿದೆ. ನಾವು ಯಾವುದನ್ನು ರಕ್ಷಿಸಬೇಕೆಂದಿದ್ದೇವೆಯೋ ಇದಂತೂ ಅಲ್ಲ. ಆದರೆ ಮುಖ್ಯವಾಗಿ ಜಗತ್ತನ್ನು ರಕ್ಷಿಸಬೇಕಾಗಿದೆ. ಈ ಸಂಗತಿಯು ಖಚಿತವಾಗಿಯೂ ಘಟಿಸುವದು. ಆದರೆ ಇದು ಅಷ್ಟೊಂದು ಸುಲಭಸಾಧ್ಯವಾಗಿರುವದಿಲ್ಲ ಅಲ್ಲದೇ ಅನೇಕರು ಅಪೇಕ್ಷಿಸುತ್ತಿದ್ದಾರೆಯೋ, ಚಿಂತನ ಮಾಡುತ್ತಿದ್ದಾರೆಯೋ ಮತ್ತು ಅವರು ಯೋಚಿಸುತ್ತಿರುವಂತೆ, ಎಷ್ಟು ಸಾಧ್ಯವೋ ಅಷ್ಟು ತೀವ್ರವಾಗಿಯೂ ಘಟಿಸುವದಿಲ್ಲ. ಆದರೆ ಪ್ರಸ್ತುತದ ನಾಗರಿಕತೆಯು ಖಚಿತವಾಗಿಯೂ ಪರಿವರ್ತನೆಗೊಳ್ಳುವದು. ಆದರೆ ಇದು ಮೊದಲಿದ್ದ ವ್ಯವಸ್ಥೆಯನ್ನು ನಾಶಗೊಳಿಸಿಯೋ ಅಥವಾ ಆ ಒಂದು ಮಹತ್–ಸತ್ಯವನ್ನು ಆಧರಿಸಿಕೊಂಡು ಘಟಿಸುವದೋ ಎನ್ನುವದು ಅತ್ಯಂತ ಮುಖ್ಯವಾದ ಸಂಗತಿಯಾಗಿದೆ. ಶ್ರೀಮಾತೆಯೂ ಸಹಿತ ಈ ವಿಷಯವನ್ನು ನಿರ್ಣಯಿಸಿಲ್ಲ, ಹೀಗಾಗಿ ನಾನೂ ಸಹಿತ ಅದನ್ನೇ ಅನುಸರಿಸುತ್ತೇನೆ. ಒಟ್ಟಿನಲ್ಲಿ ಓರ್ವ ಜಾಣನಾದ, ಅಥವಾ ಪ್ರವಾದಿ ಯಾಗಿದ್ದ, ಇಲ್ಲವೇ ಮದ್ರಾಸ ಅಸ್ಟ್ರೋಲೋಜಿಕಲ್ ಬ್ಯೂರೋದ ನಿರ್ದೇಶಕನಾಗಿದ್ದು ಎಸ್ಕ್ವೇಥಿಯನ್ (1908 ರಿಂದ 1916 ರ ವರೆಗೆ ಬ್ರಿಟಿಶ ಪ್ರಧಾನ ಮಂತ್ರಿಯಾಗಿದ್ದ. ಎಚ್.ಎಚ್. ಎಸ್ಕ್ವಿಥ್ ಎಂದು ಪ್ರಸಿದ್ಧ) ಚಿಂತನಾಧಾರೆಯಲ್ಲಿರುವ ವ್ಯಕ್ತಿಯಾಗಿರಬೇಕು. ನಿರಾಶಾವಾದವಾಗಲಿ ಅಥವಾ ಆಶಾವಾದವಾಗಲೀ ಈ ಸತ್ಯವಾಗಿರುವದಿಲ್ಲ. ಇವೆರಡೂ ಮನೋಪಾತಳಿಯಲ್ಲಿ ರೂಪಿತಗೊಂಡಿರುವ ಪ್ರಣಾಳಿಕೆಗಳಾಗಿ ಅಸ್ಕ್ವೇಥಿಯನ್ ಸ್ಥಾನವನ್ನು ಹೊಂದುವ ವಿಷಯವಾಗಿದೆ ಅಥವಾ ಮನೋಧರ್ಮದ ಭಾವಗಳಾಗಿವೆ. ಹೀಗಾಗಿ, ಇಲ್ಲಿ ನಾವು ಇದೀಗ ಯಾವುದೇ ಅಧಿಕ ನಿರಾಶಾವಾದದಲ್ಲಾಗಲೀ ಅಥವಾ ಆಶಾವಾದದಲ್ಲಾಗಲೀ ನಿಲ್ಲದೇ, 'ಕಾದು ನೋಡುವ'.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/221**

**ಒಂದು ಪ್ರಾರಂಭ, ಸಮಾಪನೆಗೊಳಿಸಲಿಕ್ಕೆ ಅಲ್ಲ**

ನಾವು ಏನನ್ನು ಮಾಡುತ್ತಿದ್ದೇವೆಯೋ, ಅದರಲ್ಲೂ ನಾವು ಒಂದು ವೇಳೆ ಜಯಶೀಲರಾದಲ್ಲಿ, ಅದು ಸಹಜವಾಗಿ ಒಂದು ಪ್ರಾರಂಭ ಮಾತ್ರವಾಗಿರುತ್ತದೆಯೇ ವಿನಾ ಸಮಾಪನೆಗೊಳಿಸಲಿಕ್ಕೆ ಅಲ್ಲ. ಇದು ಈ ಭೂಮಿಯ ಮೇಲೆ ನವೀನವಾದ ಚೇತನವನ್ನು ಅದರ ಅನಂತಾನಂತ ಸಾಧ್ಯತೆಗಳ ಸಮೇತವೇ ಅಭಿವ್ಯಕ್ತಿಗೊಳಿಸಿ ಸ್ಥಾಪಿಸುವದಾಗಿದೆ. ಈ ಶಾಶ್ವತವಾಗಿರುವ ಈ ಕ್ರಮಾವೃತ್ತಿಯ ಪ್ರಗತಿಯೇ ಆ ಅಭಿವ್ಯಕ್ತಿಯಾಗಿರುತ್ತದೆ. ಅದರಾಚೆ ಆಚೆ ಯಾವುದೇ ಪ್ರಗತಿಯು ಇರುವದಿಲ್ಲ.

ಒಂದು ವೇಳೆ ಈ ಆತ್ಮವು ಧರಿಸಿರುವ ಭೌತಿಕ ಸ್ವರೂಪದ ಪೋಷಾಕಿನಿಂದ ವಿಮೋಚನೆಗೊಳ್ಳಲು ಇರುವ ಉದ್ದೇಶವಾದಲ್ಲಿ, ಆವಾಗ ಅಲ್ಲಿ ಅತಿಮಾನಸೀಕರಣ–ಗೊಳಿಸಿಕೊಳ್ಳುವ ಅವಶ್ಯಕತೆಯಿಲ್ಲ. ಆಧ್ಯಾತ್ಮಿಕ ಮುಕ್ತಿ ಮತ್ತು ನಿರ್ವಾಣಗಳೇ ಸಾಕು. ಒಂದು ವೇಳೆ ಅತಿಭೌತಿಕ (ಪಾರಲೌಕಿಕದ) ಸ್ತರಗಳಿಗೆ ಔನ್ನತ್ಯಗೊಳ್ಳುವದೇ ಉದ್ದೇಶವಾಗಿರುವಲ್ಲಿ, ಆಗಂತೂ ಈ ಅತಿಮಾನಸಿಕರಣಗೊಳ್ಳುವದು ಬೇಕಾಗಿಲ್ಲ. ಯಾರೆ ಆಗಲಿ ಸ್ವರ್ಗದ ಆಚೆಯಿರುವ ಆ ಪರಂಧಾಮದ ಪರಮನಲ್ಲಿ ಆತ್ಮನಿಷ್ಠೆಯಿಂದ ಆ ಪರಮಾತ್ಮನ ತಾಣದೆಡೆಗೆ ಪ್ರವೇಶ ಪಡೆಯಬಹುದು. ಆದರೆ ಇದು ಖಚಿತವಾಗಿಯೂ ಪ್ರಗತಿಯಂತೂ ಅಲ್ಲ. ಇಲ್ಲಿರುವ ಈ ಲೋಕಗಳೆಲ್ಲ, ಅವುಗಳದೇ ಆದ ಅಸ್ಮಿತೆಯಲ್ಲಿ ವರ್ಗೀಕರಿಸಲ್ಪಟ್ಟಿರುವ ಲೋಕಗಳಾಗಿವೆ, ಇಲ್ಲಿ ಪ್ರತಿಯೊಂದೂ ತನ್ನದೇ ಆದ ವಿನ್ಯಾಸವನ್ನು, ಗುಣ ಸ್ವರೂಪವನ್ನು ಮತ್ತು ಲೋಕ ನಿಯಮವನ್ನು ಹೊಂದಿವೆ. ವಿಕಾಸವೆನ್ನುವದು ಈ ಭೂಮಿಯ ಮೇಲೆ ಘಟಿಸುವ ಕ್ರಿಯೆಯಾಗಿದೆ, ಅದಕ್ಕಾಗಿಯೇ ಈ ಭೂಮಿಯು 'ಪ್ರಗತಿ'ಗಾಗಿಯೇ ಸೂಕ್ತವಾಗಿರುವ ಸ್ಥಾನವಾಗಿದೆ. ಬೇರೆ ಬೇರೆ ಲೋಕಗಳ ಜೀವಿಗಳು ಒಂದು ಲೋಕದಿಂದ ಮತ್ತೊಂದು ಲೋಕದತ್ತ ಪ್ರಗತಿ ಹೊಂದುವದಿಲ್ಲ. ಅವೆಲ್ಲವೂ ಅವುಗಳಿಗೇ ನಿಗದಿಗೊಳಿಸಲ್ಪಟ್ಟಿರುವ ವಿಧಾನದಲ್ಲಿಯೇ ನಿಯತಿಗೊಂಡಿರುತ್ತವೆ.

ಈ ಶುದ್ಧಾದ್ವೈತದ ವೇದಾಂತಿಗಳು ಹೇಳುತ್ತಿರುವದೇನೆಂದರೆ, 'ಸರ್ವ ಖಲ್ವಿದಂ ಬ್ರಹ್ಮ', ಜೀವನ ಎನ್ನುವದು ಕೇವಲ ಒಂದು ಸ್ವಪ್ನ, ಅದು ಸತ್ಯವಲ್ಲ, ಹೀಗಾಗಿ ಕೇವಲ ಬ್ರಹ್ಮನು ಮಾತ್ರ ಅಸ್ತಿತ್ವದಲ್ಲಿ ಇರುತ್ತಾನೆ. ಯಾರೇ ಆಗಲಿ ನಿರ್ವಾಣ ಅಥವಾ ಮುಕ್ತಿಯನ್ನು ಪಡೆದುಕೊಂಡಿದ್ದಾನೆ ಎಂದಾದಲ್ಲಿ, ಆಗ ಅವನು ಈ ದೇಹವು ಗಳಿತಗೊಂಡು ಬೀಳುವವರೆಗೂ ಮಾತ್ರ ಬದುಕಿರುತ್ತಾನೆ ಎಂದಾಯಿತು. ಆದರಾಚೆ ಆಚೆ ಅಲ್ಲಿ ಯಾವುದೇ ರೀತಿಯ ಜೀವನ ಎನ್ನುವ ವಿಷಯವು ಇರುವದಿಲ್ಲ.

ಇವರು ರೂಪಾಂತರಣವನ್ನು ಸಮ್ಮತಿಸುವದಿಲ್ಲ. ಏಕೆಂದರೆ, ದೇಹ, ಮನಸ್ಸು ಮತ್ತು ಜೀವನ ಇವೆಲ್ಲವೂ ಅಜ್ಞಾನದಲ್ಲಿ ಮತ್ತು ಭ್ರಮೆಯಲ್ಲಿ ಇವೆ, ಇಲ್ಲಿ ಸತ್ಯಸ್ಯ ಸತ್ಯವೆಂದರೆ ಯಾವುದೇ ಲಕ್ಷಣಾತೀತವಾಗಿರುವ ಯಾವುದೇ ಸಂಬಂಧ–ಬಂಧಗಳಿಲ್ಲದ ಪರಮಾತ್ಮ ಅಥವಾ ಬ್ರಹ್ಮ ಮಾತ್ರ ಇರುತ್ತಾನೆ. ಆದರೆ ಜೀವನವು ಮಾತ್ರ ಬಂಧ–ಸಂಬಂಧಗಳ ಜೋಡಣೆಯಾಗಿರುತ್ತದೆ. ಆತ್ಮದ ಪರಿಪೂರ್ಣತೆಯಲ್ಲಿ ಅಂದರೆ ಪವಿತ್ರಾತ್ಮದಲ್ಲಿ, ಈ ಎಲ್ಲ ಸಂಬಂಧಗಳೂ ಕರಗಿಹೋಗುತ್ತವೆ. ಒಂದು ಭ್ರಮೆಯನ್ನು ಈ ರೀತಿಯಲ್ಲಿ ಬದಲಿಸುವದರ ಉಪಯೋಗವಾದರೂ ಏನು? ಅದು ಯಾವುದೇ ಸಂದರ್ಭದಲ್ಲೂ (ಅದು ಎಷ್ಟೇ ರೂಪಾಂತರಣಗಳನ್ನು ಕಂಡರೂ) ಭ್ರಮೆಗಿಂತ ಭಿನ್ನವಾಗಿರುವದಿಲ್ಲ. ಅವರಿಗೆ 'ನಿರ್ವಾಣದ ಹಂತದ ಜೀವನ' ಎನ್ನುವ ವಿಷಯವೇ ಇರುವದಿಲ್ಲ.

ಆದರೆ ಕೆಲವು ಯೋಗಗಳು ರೂಪಾಂತರಣಕ್ಕಾಗಿ ಗಮ್ಯವನ್ನು ಹೊಂದಿ, ಅಜ್ಞಾನವನ್ನು ಜ್ಞಾನವನ್ನಾಗಿ ಪರಿವರ್ತಿಸಿಕೊಳ್ಳುವದನ್ನು ಹೊರತು ಪಡಿಸಿ, ಅವೆಲ್ಲ ರೂಪಾಂತರಣವನ್ನು ಗುರಿಯಾಗಿರಿಸಿಕೊಂಡಿವೆ. ಇಲ್ಲಿ ಚಿಂತಗಳಲ್ಲಿ ವಿವಿಧತೆ ಇರಬಹುದು – ಕೆಲವೊಮ್ಮೆ ದೈವೀ ಜ್ಞಾನ ಅಥವಾ ಶಕ್ತಿ ಅಥವಾ ದೈವೀ ಪಾವಿತ್ರ್ಯ ಅಥವಾ ನೈತಿಕ ಪರಿಪೂರ್ಣತೆ ಅಥವಾ ದಿವ್ಯ–ಪ್ರೇಮಗಳಾಗಿರಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/288–89**

**ಅಧಿಮಾನಸ ಮತ್ತು ವಿನಾಶಗಳು**

ಅತಿಮಾನಸದ ಅವತರಣದಲ್ಲಿ ವಿನಾಶಗಳು ವಿಷಯ ಬರುವದಿಲ್ಲ. ಅಲ್ಲಿರುವದು ಒಂದು ಮಹತ್ ಪರಿವರ್ತನೆಗಳಾಗಿದ್ದರೂ ಅವು ಎಂದಿಗೂ ಈ ವಿನಾಶಕಾರಕ ಸ್ವರೂಪದಲ್ಲಿ ಇರುವದಿಲ್ಲ. ಯಾವಾಗ ಇಂತಹ ಪರಿವರ್ತನೆಗಾಗಿ ಅದಿಮಾನಸದಿಂದ ಬಲವತ್ತರವಾದ ಬದ್ಧತೆಯು ಇರುವದೋ, ಆಗ, ಅಲ್ಲಿ ಬಹುತೇಕವಾಗಿ ಈ ರೀತಿಯ ವಿನಾಶಕಾರಕ ಸ್ವರೂಪಗಳು ಬರಬಹುದು. ಆದರೆ ಅದಕ್ಕೆ ಕಾರಣಗಳೆಂದರೆ, ಅಲ್ಲಿರುವ ಬಲಗಳ ಸಂಘರ್ಷ ಮತ್ತು ಪ್ರತಿರೋಧಗಳು ಕಾರಣವಾಗಿರುತ್ತವೆ. ಆ ಅತಿಮಾನಸವು ಒಂದು ಮಹತಿಯನ್ನು ಹೊಂದಿದೆ, ಅದೂ ಅದರ ಪರಿಪೂರ್ಣತೆಯಲ್ಲಿ ವಸ್ತು–ವಿಷಯಗಳು ಸಂಪೂರ್ಣಗೊಳ್ಳುವ ಮತ್ತು ಸೌಷಮ್ಯದ ಶಕ್ತಿಯ ಮೂಲಕವಾಗಿ ಈ ರೀತಿಯ ನಾಟಕೀಯ ಸಂಘರ್ಷ ಮತ್ತು ಅಶಾಂತಿ ಪ್ರತಿರೋಧದಿಂದ ವಿಮೋಚನೆಗೊಳ್ಳುತ್ತದೆ. ಈ ವೈಶ್ವಿಕದಲ್ಲಿ ಮೂರು

ರೀತಿಯ ಶಕ್ತಿಗಳಿವೆ, ಅವೆಲ್ಲವೂ ಸೃಷ್ಟಿ, ಸ್ಥಿತಿ ಮತ್ತು ಲಯದ ವಿಷಯಗಳನ್ನೇ ಹೊಂದಿವೆ. ಯಾವುದೇ ಸೃಷ್ಟಿಯೂ ಒಂದು ಅವಧಿಯ ನಂತರ ಲಯಗೊಳ್ಳುವದು, ಅದಕ್ಕಾಗಿ ವಿಚ್ಛಿದ್ರಗೊಳ್ಳುವದು. ಈ ವಿನಾಶದ ಶಕ್ತಿಯಿಂದಾಗಿ ಲಯಗೊಂಡು ಹೋಗುವದು ಎನ್ನುವ ತಾತ್ಪರ್ಯವೆಂದರೆ, ಯಾವ ಸೃಷ್ಟಿಯು ಎಂದಿಗೂ ನಷ್ಟಗೊಳ್ಳದೇ ಸ್ಥಿತವಾಗಿ ಇರಲು ಸತತವಾಗಿಯೂ ವಿಕಾಸಗೊಳ್ಳುವ ವಿಧಾನವಾಗಿದೆ. ಪ್ರಗತಿಗೊಳ್ಳುವ ಸಲುವಾಗಿ ವಿನಾಶವು ಅವಶ್ಯಕವೆನ್ನುವದು ಅಜ್ಞಾನದ ಸಂಗತಿಯಾಗಿದೆ. ಆದರೆ ಅದೇ ಜ್ಞಾನದಲ್ಲಿ ಆ ಋತದ–ಸೃಷ್ಟಿಗಾಗಿ, ಆ ವೈಶೀಕದ ನಿಯತಿಗಾಗಿ ಪ್ರಳಯದ ಹೊರತಾಗಿಯೂ ಸದಾ ಪ್ರಕಾಶನಗೊಳ್ಳುವದಾಗಿದೆ.

*

ಜನರೆಲ್ಲರೂ ತಮ್ಮ ತಮ್ಮ ಭೌತಿಕ ಮನೋಭೂಮಿಕೆಯಿಂದ ಮುಕ್ತಗೊಳ್ಳುವದು ಎಂದರೆ ಅದು ಸಾಮಾನ್ಯವಾಗಿ ಅವತರಣವಾಗಿರುವದಿಲ್ಲ. ಒಂದು ವೇಳೆ ಓರ್ವನು ಸದಾ ತನ್ನನ್ನು ತಾನು ಈ ಭೌತಿಕದ ಮನೋಪಾತಳಿಯಲ್ಲಿಯೇ ಇರಿಸಿಕೊಳ್ಳಲು ಆಯ್ಕೆ ಮಾಡಿಕೊಂಡಲ್ಲಿ, ಅಲ್ಲಿ ಲಕ್ಷಾಂತರ ಲಕ್ಷಾಂತರ ಅವತರಣಗಳು ಘಟಿಸಿದರೂ ಯಾವುದೇ ಪ್ರಯೋಜನವಿರುವದಿಲ್ಲ. ಈ ಭೂಮಿಯ ಮೇಲೆ ಅವತರಣಗೊಂಡು ಬರುವ ಅತಿಮಾನಸವು ಯಾವುದೇ ರೀತಿಯಲ್ಲಿಯೂ, ಅದರಲ್ಲೂ ಆ ವ್ಯಕ್ತಿಯು ಒಂದು ವೇಳೆ ತನ್ನ ಅಹಂಕಾರಕ್ಕೇ ಅಂಟಿಕೊಂಡಿರುವಲ್ಲಿ, ಆಗ ಅಲ್ಲಿ ಯಾವುದೇ ಪರಿವರ್ತನೆಯೂ ರೂಪಣೆಗೊಳ್ಳುವದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/292–93**

---

**ಚಂದ್ರಪ್ರಭೆಯ ಒಳಗೆ**

...ಅವನುದಿತವೀಗ, ಪರಮನಾ ಜನುಮ ತಾ ರೂಪುಗೊಳ್ಳಲೆಂದು
ವಿಪ್ಲವಾವರ್ತಗಳ ಸರಣಿಯಲ್ಲಿ ಈ ಲೋಕ ವ್ಯಾಪ್ತಗೊಂಡು
ಇವು ಸಬಲವಿರದ ಆರಂಭದೊಳಗೆ ಜೊತೆ ಚಕ್ರದೆಸೆತ ಭಾರಿ
ವೇಗದಲಿ ವಿಷ್ಣು ಅವತರಣವಿಂತು ಈ ಬುವಿಯ ನೆಲೆಗೆ ದಾರಿ

ಗತವದುವು ನಶಿಸಿ, ಅದು ಮುಂದೆ ಹೀಗೆ ಅವಸಾನಗೊಂಡು ಸಾಗಿ,
ಇದು ತೊಡೆದು ಇಂತು, ಹುಟ್ಟಡಗಿ ತಾನು, ನಿರ್ನಾಮಗೊಂಡು ಹೋಗಿ;
ಲೋಹಗಳ ಸರ್ವ ಹಣಾಹಣಿಯೊಳಗೆ ಅನುರಣನಗೊಂಡ ಧ್ವನಿಯು
ಪುರುಷ–ಪೌರುಷದ ವಿಸ್ತಾರವೀಗ ಕಂಡು ಅಂತಿಮದ ಗತಿಯು.

ಮುಕ್ತತ್ವ, ಪರಮ ಪರಮಾತ್ಮ ಜೊತೆಗೆ ಅಮರತ್ವ ತ್ರಿಗುಣ–ದೀಪ
ಇವು ಸರ್ವ 'ಏಕ' ಇಂತಿದೋ ಈಗ ಪ್ರತ್ಯಕ್ಷಗೊಂಡು ರೂಪ,
ಪ್ರೇಮ, ಪ್ರಜ್ಞೆ, ಜೊತೆ ತೋಷ ಮತ್ತಿದೋ ಪೂರ್ಣ–ಸಾಮರ್ಥ್ಯವಾಗಿ
ಸಂಯೋಗಗೊಂಡವೀಗಿದೋ ಶುದ್ಧ–ಆನಂದ ಸ್ಪಂದವಾಗಿ
ಆಗಮಿಸಿತೀಗ ಅಂತಿಮದಿ ಇಂತು, ಗತ ಕಂಡ ಕಾಣ್ಕೆ–ಕಣಸು,
ಪ್ರಾಥಮಾಸಿನಲಿ ಜಾನ್ ಅರಿತ ವಿಷಯ, ಷೆಲ್ಲಿಗೂ ಇದ್ದ ಸ್ವಪ್ನ,
ದರ್ಶನದ ಜೊತೆಗೆ ಅಸಫಲತೆಯನ್ನು ಪರಿಗಣಿಸಿ ಗ್ರಹಿತಗೊಂಡು,
ಆ ಪ್ರಮೋದಿತದ ಹರ್ಷ–ನಗರಿಯದು, ಆ ಸ್ವರ್ಣ ಯುಗವನಂದು.

ಆ ಲೋಹ–ಯುಗವು ಪರಿಪೂರ್ಣಗೊಂಡು, ಈಗಿದೋ ಇಲ್ಲಿ ಮಾತ್ರ
ಹತಗೊಳುವ ಗತದ ಅಂತಿಮದ ಉಗ್ರ–ಸೆಳೆತಗಳ ಸರಣಿ ಮಾತ್ರ
ಕಂಪನವಗೊಳಿಸಿ ದೇಶ–ದೇಶಗಳ, ನಷ್ಟಗೊಂಡೀಗ ಸರಿದು,
ದುಷ್ಟತನವನ್ನು ಬುವಿಯೀಗ ನಶಿಸಿ, ನಿಷ್ಪಕ್ಷ ದೃಷ್ಟಿ ಬೀರಿ.

ಇದು ಪುರುಷ ಪ್ರಗತಿ ತಾನಿಹುದು; ಲೋಹಯುಗಕಾಗಿ ಅಂದು
ಸೃಷ್ಟಿಸಿದ ಸ್ವರ್ಣ–ಯುಗವನ್ನು, ನಮ್ಮ ಪರಿಗಣನೆ ಪಾಪವೆಂದು,
ಇದು ಮನುಜ ಕೃತವು ತಾನಿದ್ದರೂನು ಅವನಂತರಂಗದರ್ಶಿ,
ಆದರೂ ಆ ನಿಯಾಮಕನು ಇವನ ಯಾತ್ರೆಗಿದೊ ಮಾರ್ಗದರ್ಶಿ

ಸಂಘರ್ಷ ಜೊತೆಗೆ ಯಾತನೆಯನೀಗ ಇವನೀಗ ಹಿಂದೆ ಉಳಿಸಿ,
ಇದು ಬಿಡದ ಅಂಟು ಜೊತೆ ಪರಮ–ನಂಟು ಮರುಮರಳಿ ಬರುವದೆನಲು,
ಸತತ–ಯಾತನೆಯ ಉಗ್ರ–ಜ್ವಾಲೆಯಲಿ ನಿರತ ದಹಿಸುತಿರಲು
ಪರಮೋಚ್ಚ ಮಧುರ ಮಧುರತೆಗೆ ಅರ್ಹ, ಚಿರಶಕ್ತಿ ಪಡೆಯಲೆನಲು

ಏಕೆನಲು ಅವನ ಆಗಮನ ಆ ಅನಂತಗಳ ತಾಣದಿಂದ
ಮರ್ತ್ಯ–ಜೀವನದ ವಸ್ತು–ವಿಷಯದಲಿ ಅಮರತ್ವ ರಚಿಸಗೆಂದು
ಶುಭಕಾಗಿ ಉದಿತ ಜೊತೆಗೆ ಅವನದೇ ಆ ಬೃಹದ್–ರೆಕ್ಕೆಗಳಲಿ
ಇದೇ ತಾನೀಗ ಅವನ ತಳಮಳದ–ಭರತ ಕಾರಣದಿ ಇಲ್ಲಿ,

ನಿತ್ಯ ವಿಕಸನದ ಆತ್ಮ ಊಡಲೆನೆ ಈ ಭವದ ಯಂತ್ರ ದೇಹ,
ಕುಂಡಲಿಯಲೀಗ ಪರಿಶ್ರಮಿಸುತಿರುವ ಭವಕೀಗ ದಿವದ ನೇಹ

ಮೃತ್ಯು– ಪಾಶವನು ತೊರೆದು ಆರೋಹ ದಿವ್ಯತ್ವ ಪಡೆಯಲೆನಲು
ಬೋಧಗೊಂಡಿತ್ತು ಸಹಕರಿಸಿ ತಾನು ಅಮರತ್ವದಿಚ್ಛೆ ಇರಲು.

**– ಪುಟ್ಟು ಕುಲಕರ್ಣಿ (ಡಿಸೆಂಬರ್ 2022)**
**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/243–44**

---

**ಟಿಪ್ಪಣಿಗಳು:**

2. ಆಯರ್ನ್ ಸೌಂಡ; ಲೋಹ ಧ್ವನಿ (ಇಲ್ಲಿ ಕಬ್ಬಿಣದ ಧ್ವನಿ) ಎನ್ನುವದು ಹಲವಾರು ಸಂಕೇತಗಳಲ್ಲಿ ರೂಪಿತಗೊಂಡಿದೆ. ಒಂದು ಸಿದ್ಧಾಂತದ ಪ್ರಕಾರ (ಅಸ್ಟ್ರಾಲೋಜಿಕಲ್ ಪ್ರಕಾರ), ಈ ಕಬ್ಬಿಣ ಮಂಗಳ ಗ್ರಹದಿಂದ ನಿಯಂತ್ರಿತ–ವಾಗಿರುತ್ತದೆ. ಸಂಕೇತ. ಇದು ಪುರುಷ ಪ್ರಧಾನತ್ವವನ್ನು ಅಥವಾ ಪುರುಷ ಶಕ್ತಿಯನ್ನು ಪ್ರತಿನಿಧಿಸುತ್ತದೆ. ಇದು ಸ್ತ್ರೀ ಪ್ರಾಧಾನ್ಯತೆಯ ಶುಕ್ರಗ್ರಹದ ವಿರುದ್ಧದ ಸ್ಥಿತಿಯಾಗಿರುತ್ತದೆ.

– ಅದೇ ರೀತಿಯಲ್ಲಿ ಬೈಬಲ್ ಸಹಿತ ಈ ವಿಷಯವಾಗಿ, ಡೇನಿಯಲ್‌ನ ಪ್ರಹೇಳಿಕೆಯಲ್ಲಿ ಈ ಕಬ್ಬಿಣದ ವಿಷಯದ ಉಲ್ಲೇಖವಿದೆ. ಅಲ್ಲಿ ಆಡಳಿತದಲ್ಲಿದ್ದ ನಾಗರಿಗಕತೆಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಹಾಗೆ ಸ್ವರ್ಣಮಯ ಶಿರಸ್ಸು, ರಜತಮಯ ಎದೆ, ಕಂಚಿನ ಕಟಿ ಮತ್ತು ಕಬ್ಬಿಣದ ಕಾಲುಗಳು ಜೊತೆಗೆ ಮೃಣ್ಮಯಗೊಂಡಿರುವ ಕಬ್ಬಿಣದ (ಬೀಡು ಕಬ್ಬಿಣ) ಪಾದಗಳ ವಿವರಣೆ ಇದೆ.

– ಭಾರತದಲ್ಲೂ ಸಹಿತ, ಕಬ್ಬಿಣವೇ ಮುಖ್ಯವಾಗಿದ್ದ ಯುಗದ ಘಟನೆಗಳಿವೆ. ಪರಶುರಾಮನ ಕೈಲಿರುವ ಕೊಡಲಿ (ಶಸ್ತ್ರ), ಶ್ರೀರಾಮನು ಪ್ರಯೋಗಿಸುವ ಬಾಣ (ಅಸ್ತ್ರ) ಹಾಗೂ ಶ್ರೀಕೃಷ್ಣನ ಚಕ್ರದ (ಪ್ರಯೋಗಿಸಿದ ನಂತರದಲ್ಲೂ ಮರಳಿ ಪಡೆಯುವ ಕೌಶಲ) ಹಿನ್ನೆಲೆಯಲ್ಲಿ ನಾಗರಿಕತೆ ಮತ್ತು ಸಂಸ್ಕೃತಿ ವಿಕಾಸಗೊಂಡ ವಿಷಯವಿದೆ.

4. ಪ್ಯಾಥಮಾಸನ ಜಾನ್. ಇವನನ್ನು ಜಾನ್ ಡಿವೈನ ಎಂತಲೂ ಕರೆಯುತ್ತಾರೆ. ಥಿಯೋಲಾಜಿನ್ ಜಾನ್ ಎಂದೂ ಹೆಸರಿದೆ. ಪ್ಯಾಥಮಾಸ ಎನ್ನುವದು ಗ್ರೀಕ ದೇಶದ ಒಂದು ದ್ವೀಪ. ರೋಮನ್ ಸಾಮ್ರಾಜ್ಯದಲ್ಲಿ ನಡೆದ ಇತಿಹಾಸಕ್ಕೆ ಸಾಕ್ಷಿ ಒದಗಿಸುತ್ತದೆ. ಕೆಲವರ ಅಭಿಪ್ರಾಯದಲ್ಲಿ ಇವನು ಯೇಸುವಿನ ಸಮೀಪವಿದ್ದವನೂ ಎಂದು ಜಿಜ್ಞಾಸೆಯಿದೆ.

– ಷೆಲ್ಲಿಗೂ ಇದ್ದ ಸ್ವಪ್ನ; “ಎ ಡ್ರೀಮ್ ಆಫ್ ದಿ ಅನ್–ನೋನ್” ಎನ್ನುವದು ಷೆಲ್ಲಿಯ ಪ್ರಸಿದ್ಧ ಕವನ. ಶಿಶಿರ ಋತು ಕಳೆದು ವಸಂತನು ಆಗಮಿಸಿದ ಎಂದು ಸಂಕೇತಪೂರ್ಣವಾಗಿ ಬರೆದಿದ್ದಾನೆ.

## ಶ್ರೀ ಅರವಿಂದರ
## 'ಗೀತಾ ಪ್ರಬಂಧಗಳು'

**– ಅನುವಾದ: ಜಾನ್ವಿ**

**24**

### ಅಧ್ಯಾಯ – 20
### ಸಮತ್ವ ಮತ್ತು ಜ್ಞಾನ (20/1)

ಗೀತೆಯ ಬೋಧನೆಯ ಮೊದಲ ಭಾಗವನ್ನು ನೋಡಿದರೆ, ಯೋಗ ಮತ್ತು ಜ್ಞಾನಗಳು ಅದರ ಎರಡು ರೆಕ್ಕೆಗಳಿದ್ದಂತೆ ಎಂದು ತೋರುತ್ತದೆ. ಯೋಗ ಅಂದರೆ ಪರಮಾತ್ಮನ ಜೊತೆ ಒಂದಾಗುವುದು; ಯಾವ ವೈಯಕ್ತಿಕ ಬಯಕೆ, ಸ್ವಾರ್ಥವಿಲ್ಲದೇ ಕರ್ಮ ಮಾಡುವುದರಿಂದ, ಪ್ರಪಂಚದ ಎಲ್ಲ ವಸ್ತುಗಳನ್ನು ಜೀವಿಗಳನ್ನು ಸಮಾನ ಭಾವದಿಂದ ಕಾಣುವುದರ ಮೂಲಕ, ಎಲ್ಲ ಕರ್ಮಗಳನ್ನು ಪರಮಾತ್ಮನಿಗೆ ಸಲ್ಲುವ ಯಜ್ಞವೆಂಬಂತೆ ಮಾಡುವುದರಿಂದ ಈ ಯೋಗ ಸಿದ್ಧಿಸಿರುತ್ತದೆ. ಜ್ಞಾನವೆಂದರೆ ಆಶಾರಹಿತ ಸ್ಥಿತಿ, ಇದು ಯಜ್ಞ ಮತ್ತು ಸಮತ್ವದ ಶಕ್ತಿಯ ಆಧಾರವಾಗಿದೆ. ಇವೆರಡರ ಸಂಯೋಗದಲ್ಲಿ ಮಾತ್ರ ಪರಮಾತ್ಮನ ಜೊತೆ ಏಕತ್ವ ಲಭಿಸಲು ಸಾಧ್ಯ. ಎರಡು ರೆಕ್ಕೆಗಳು ಸೇರಿಯೇ ಒಂದು ಪಕ್ಷ ಹಾರಾಡುವುದು ನಿಜ, ಆದರೆ ಅವು ಒಂದಾದನಂತರ ಇನ್ನೊಂದರಂತೆ ಪರ್ಯಾಯವಾಗಿ ಕೆಲಸ ಮಾಡುತ್ತವೆ; ನಮ್ಮ ಕಣ್ಣುಗಳೂ ಸಹ ಅಷ್ಟೇ, ಅವೆರಡೂ ಏಕ ಕಾಲಕ್ಕೆ ನೋಡುವುದಿಲ್ಲ, ಪರ್ಯಾಯವಾಗಿ ಪರಸ್ಪರ ಪೂರಕವಾಗಿ, ಸಮನ್ವಯ ಪೂರ್ವಕವಾಗಿ ಕೆಲಸ ಮಾಡುತ್ತ ನಮಗೆ ದೃಶ್ಯ ಕಾಣುವಂತೆ ಮಾಡುತ್ತವೆ. ಕರ್ಮಗಳು ಹೆಚ್ಚು ಹೆಚ್ಚು ಆಶಾರಹಿತವಾಗಿ, ಸ್ವಾರ್ಥ ದೂರವಾಗಿ ಬೆಳೆದಂತೆ ಸಮತ್ವದ ಭಾವ ಬಲಿತಂತೆ ಆಂತರಿಕವಾಗಿ ಯಜ್ಞ ಭಾವ ಸಿದ್ಧಿಸುತ್ತದೆ. ಜ್ಞಾನ ವೃದ್ಧಿಯಾದಂತೆ ಮಾನವನು ಗಟ್ಟಿಯಾಗುತ್ತ ಹೋಗುತ್ತಾನೆ. ಅವನ ಕರ್ಮದಲ್ಲಿ ಸಮತ್ವವು ಹೆಚ್ಚು ಹೆಚ್ಚಾಗಿ ಪ್ರದರ್ಶಿತವಾಗುತ್ತ ಹೋಗುತ್ತದೆ. ಅಂತೆಯೇ ಜ್ಞಾನ ಯಜ್ಞವು ಎಲ್ಲ ಭೌತಿಕ ಯಜ್ಞಗಳಿಗಿಂತ ತುಂಬ ಶ್ರೇಷ್ಠ ಎಂದು ಗೀತೆ ಹೇಳುತ್ತದೆ. "ನೀನು ಪಾಪಾತ್ಮರಲ್ಲೇ ಅತ್ಯಂತ ಹೀನ ಪಾಪಾತ್ಮನಾಗಿದ್ದರೂ ಸರಿಯೇ, ಜ್ಞಾನವೆಂಬ ನೌಕೆಯನ್ನು ಆಶ್ರಯಿಸಿದರೆ, ಎಲ್ಲ ತರಹನ ನಿಮ್ನ, ನೀಚ ಕರ್ಮಗಳ ಪ್ರವಾಹದಿಂದ ಪಾರಾಗುವಿ" (4.36) ನ ಹಿಜ್ಞಾನೇನ ಸದೃಶಂ ಪವಿತ್ರ ಮಿಹ ವಿದ್ಯತೇ (4.38) ಎಲ್ಲ ತರಹದ ಆಶೆಗಳು ಮತ್ತು ಅವುಗಳ ಸಂತಾನದಂತಿರುವ ಪಾಪಗಳು ಜ್ಞಾನದಿಂದ ನಷ್ಟವಾಗುತ್ತವೆ, ಇಲ್ಲದಾಗಿ ಹೋಗುತ್ತವೆ. ಮುಕ್ತನಾದ

ವ್ಯಕ್ತಿಯು ಎಲ್ಲ ಕರ್ಮಗಳನ್ನು ಯಜ್ಞವೆಂದೇ ಭಾವಿಸಿ ಮಾಡುವುದುಂಟು; ಏಕೆಂದರೆ ಅವನ ಮನಸ್ಸು, ಹೃದಯ ಮತ್ತು ಆತ್ಮಗಳು ಆಶೆಗಳಿಂದ ದೂರವಾಗಿರುತ್ತವೆ. ಅಂಥ ವ್ಯಕ್ತಿಯು ಆತ್ಮಜ್ಞಾನದಲ್ಲಿ ಸ್ಥಿತನಾಗಿರುತ್ತಾನೆ. ಗತಸಂಗಸ್ಯ ಜ್ಞಾನಾವಸ್ಥಿತ ಚೇತಸ (4.23) ಅವನು ಮಾಡುವ ಕರ್ಮಗಳು ಪೂರ್ತಿಯಾದ ಮರುಕ್ಷಣವೇ ಲಯ ಹೊಂದಿಬಿಡುತ್ತದೆ. ಅವನು ಕರ್ಮ ಮಾಡುತ್ತಿರುವಂತೆ ತೋರಿಸಿದರೂ ಸಹ ಅವನ ಅಂತರಾತ್ಮನ ಮೇಲೆ ಅವುಗಳ ಯಾವ ಪ್ರಭಾವವೂ ಆಗುವುದಿಲ್ಲ ಸಾಕ್ಷಾತ್ ಈಶ್ವರನೇ ಅವನ ಹಿಂದೆ ನಿಂತು ಕರ್ಮಗಳನ್ನು ನೆರವೇರಿಸುತ್ತಾನೆ. ವ್ಯಕ್ತಿಯು ಕೇವಲ ಉಪಕರಣವಾಗಿರುತ್ತಾನೆಯೇ ಹೊರತು ಕರ್ತೃ ಆಗಿರುವುದಿಲ್ಲ. ಕರ್ಮಗಳು ಕೇವಲ ಪ್ರಕೃತಿಯ ಶಕ್ತಿಯಾಗಿ, ಬ್ರಹ್ಮನ ಸತ್ತೆಯ ಸತ್ವಗಳಾಗಿ ನಡೆದುಕೊಂಡು ಹೋಗುತ್ತವೆ.

ಸರ್ವಂ ಕರ್ಮಾಬಿಲಂ ಜ್ಞಾನೇ ಪರಿಸಮಾಪ್ಯತೇ (4.33) ಅಂದರೆ ಎಲ್ಲ ಕರ್ಮಗಳು ಕೊನೆಗೆ ತಮ್ಮ ಸಾರ್ಥಕತೆಯನ್ನು, ಕೃತಾರ್ಥತೆಯನ್ನು ಮತ್ತು ಶ್ರೇಷ್ಠತೆಯನ್ನು ಪಡೆಯುವುದು ಜ್ಞಾನದಲ್ಲಿ ಪರ್ಯವಸಾನ ಹೊಂದಿದಾಗಲೇ ಎಂದು ಗೀತೆ ಹೇಳುವುದ ಇದೇ ಕಾರಣದಿಂದಲೇ "ಅಗ್ನಿಯನ್ನು ಹೊತ್ತಿಸಿದರೆ ಅದು ಇಂಧನವನ್ನೇ ಸುಟ್ಟು ಹಾಕುವಂತೆ ಜ್ಞಾನಾಗ್ನಿಯು ಎಲ್ಲ ಕರ್ಮಗಳನ್ನು ಸುಟ್ಟು ಭಸ್ಮ ಮಾಡಿ ಬಿಡುತ್ತದೆ" (4.29) ಆದರೆ, ಹೀಗೆಂದು ಹೇಳಿದ ತಕ್ಷಣ ಜ್ಞಾನವಾದ ನಂತರ ಎಲ್ಲ ಕರ್ಮಗಳು ನಿಂತು ಹೋಗುತ್ತವೆ ಎಂದೇನೂ ಅರ್ಥ ಮಾಡಬಾರದು, ಗೀತೆಯು ಈ ಸಂಗತಿಯನ್ನು ಸ್ಪಷ್ಟ ಪಡಿಸುವುದು ಹೀಗೆ – "ಯೋಗ ಸನ್ಯಾಸ್ತ ಕರ್ಮಾಣಾಂ ಆತ್ಮವಂತಂ ನ ಕರ್ಮಾಣಿ ನಿಬಧ್ನಂತಿ" (4.48) ಅಂದರೆ ಜ್ಞಾನದ ಮೂಲಕ ಯಾರು ತನ್ನೆಲ್ಲ ಸಂದೇಹ, ಅನುದಾನಗಳನ್ನು ಪರಿಹರಿಸಿಕೊಂಡಿದ್ದಾರೋ ಮತ್ತು ಯೋಗದ ಮೂಲಕ ಎಲ್ಲ ಕರ್ಮಗಳನ್ನು ತ್ಯಾಗ ಮಾಡಿ, ಆತ್ಮಸ್ಥನಾಗಿ ಇರುವುರೋ ಅಂಥವರನ್ನು ಕರ್ಮಗಳು ಬಂಧಿಸುವುದಿಲ್ಲ ಎಂದು ಗೀತೆ ಸ್ಪಷ್ಟಪಡಿಸುತ್ತದೆ. ಅಂಥ ವ್ಯಕ್ತಿಯ ಆತ್ಮವು ಉಳಿದೆಲ್ಲ ಜನರ ಆತ್ಮದ ಜೊತೆ ಒಂದಾಗಿರುತ್ತದೆ. ಇಡೀ ಅಸ್ತಿತ್ವದ ಆತ್ಮದ ಜೊತೆ ಒಂದಾಗಿರುತ್ತದೆ. ಅಂಥ ವ್ಯಕ್ತಿ ಕರ್ಮ ಮಾಡಿದರೂ ಆ ಕರ್ಮದಿಂದ ಬಂಧಿತನಾಗುವುದಿಲ್ಲ. ಅದರ ಫಲಗಳನ್ನಾತ ಅನುಭವಿಸಬೇಕಾಗಿಲ್ಲ. ಯಾವ ಕರ್ಮವೂ ಅವನನ್ನು ಪ್ರತಿಫಲ ಬಾಧ್ಯನನ್ನಾಗಿ ಮಾಡುವುದಿಲ್ಲ. ಕುರ್ವನ್ನಪಿನ ಲಿಪ್ಯತೇ (5.7) ಅಂತೆಯೇ ಗೀತೆಯು ಹೇಳುವಂತೆ, ಭೌತಿಕವಾಗಿ ಕರ್ಮ ತ್ಯಾಗ ಮಾಡುವುದಕ್ಕಿಂತ ಕರ್ಮ ಯೋಗವು

ಶ್ರೇಷ್ಠವಾಗಿದೆ; ಜೀವತಾಳಿಬಂದ ವ್ಯಕ್ತಿಗೆ ಕರ್ಮ ಮಾಡದೇ ಇರುವ ಸನ್ಯಾಸವು ತುಂಬ ಕಠಿಣವಾಗಿದೆ. ಶರೀರ ಇರುವವರೆಗೆ ಕರ್ಮ ಮಾಡುತ್ತಲೇ ಇರುವುದು ಅನಿವಾರ್ಯವಾಗಿದೆ. ಆದ್ದರಿಂದ ಕರ್ಮ ಯೋಗವು ಮಾನವನಿಗೆ ಪರ್ಯಾಪ್ತವಾಗಿದ್ದು, ಅವನ ಆತ್ಮವನ್ನು ಬ್ರಹ್ಮನೆಡೆಗೆ ಬಹು ಸುಲಭವಾಗಿ ಮತ್ತು ಶೀಘ್ರವಾಗಿ ಕರೆದೊಯ್ಯುವುದು (5.6) ಎಲ್ಲ ಕರ್ಮಗಳನ್ನು ಈಶ್ವರನಿಗೆ ಅರ್ಪಿಸುವುದು, ಯಜ್ಞ ಭಾವದಿಂದ ಮಾಡಿ ಎಲ್ಲವನ್ನೂ ಭಗವಂತನಿಗೆ ಅರ್ಪಿಸುವುದು ಆಂತರಿಕ ಆಧ್ಯಾತ್ಮಿಕ ಪರಿಕಲ್ಪನೆಯೇ ಹೊರತು ಬಾಹ್ಯದಲ್ಲಿನ ಕರ್ತವ್ಯ ಕರ್ಮಗಳನ್ನು ತ್ಯಾಗ ಮಾಡುವ ಕ್ರಿಯೆಯಲ್ಲ. ಬ್ರಾಹ್ಮಣಾಧಾಯ ಕರ್ಮಾಣಿ (5.10) ಮಯಿ ಸನ್ಯಸ್ಯ (12.6) ಕರ್ಮಗಳನ್ನು ಪರಮಾತ್ಮನಿಗೆ ಅರ್ಪಿಸುವುದೇ ನಿಜವಾದ ಕರ್ಮ ಯೋಗವಾಗಿದೆ. ಎಲ್ಲ ಕರ್ಮಗಳನ್ನು ಪರಮಾತ್ಮನಿಗೆ ಅರ್ಪಿಸುವುದರಿಂದ ಉಪಕರಣ ರೂಪವಾಗಿ ಕರ್ಮ ಮಾಡುವ ವ್ಯಕ್ತಿಯ ವೈಯಕ್ತಿಕ ಕರ್ತೃತ್ವ ಭಾವ ನಾಶವಾಗುತ್ತದೆ; ಅವನು ಕೆಲಸ ಮಾಡುತ್ತಿದ್ದರೂ ಅವನು ಯಾವ ಕೆಲಸವನ್ನೂ ಮಾಡುವುದಿಲ್ಲ. ಅವನು ಕೇವಲ ಕರ್ಮಫಲವನ್ನು ಮಾತ್ರ ತ್ಯಾಗ ಮಾಡಿಲ್ಲ ಬದಲಾಗಿ ಕರ್ಮಗಳನ್ನೇ ತ್ಯಾಗ ಮಾಡಿದ್ದಾನೆ. ಏನೇ ಮಾಡಿದರೂ ಅದೆಲ್ಲವನ್ನೂ ಪತಮಾತ್ಮನಿಗಾಗಿ ಮಾಡುತ್ತಾನೆ.

ಆಗ ಪರಮಾತ್ಮನೇ ಆ ಕರ್ಮಗಳ ಭಾರವನ್ನು ಹೊರುತ್ತಾನೆ, ಪರಮಾತ್ಮನೇ ಕರ್ತೃವಾಗುತ್ತಾನೆ, ಅವನೇ ಕರ್ಮ ಮತ್ತು ಅವನೇ ಕರ್ಮಫಲ ಆಗುತ್ತಾನೆ. ಗೀತೆಯು ಹೇಳುವ ಈ ಜ್ಞಾನ ಯೋಗವು ಬೌದ್ಧಿಕ ಚಟುವಟಿಕೆ, ಮನಸ್ಸಿನ ಕ್ರಿಯೆ ಎಂದು ತಿಳಿಯಬಾರದು. ಅದು ಸತ್ತೆಯು ಉನ್ನತ ಸ್ತರಕ್ಕೆ ಪ್ರಕಾಶಮಾನವಾಗಿ ಏರುತ್ತ ಹೋಗುವ ಕ್ರಿಯೆಯಾಗಿದೆ, ದೈವೀ ಸೂರ್ಯನ ಬೆಳಕಿನಲ್ಲಿ ಹೊಳೆಯುವ ದಿವ್ಯ ಸ್ತರಕ್ಕೆ ಏರಿ ಹೋಗುವ ಕ್ರಿಯೆಯಾಗಿದೆ. ಋಗ್ವೇದವು ಹೇಳುವಂತೆ "ತತ್ ಸತ್ಯಂ ಸೂರ್ಯಂ ತಮಸಿಕ್ಷೀಮಂತಮ್" ನಮ್ಮ ಅಜ್ಞಾನದ ಕತ್ತಲಲ್ಲಿ ಕಾಣದಂತೆ ಮರೆಯಾಗಿರುವ ಸತ್ಯ – ಸೂರ್ಯನು ಉನ್ನತ ಸ್ತರದಲ್ಲಿ ಬೆಳಗುತ್ತಾನೆ, ದಿವ್ಯ ಪ್ರಕಾಶದಿಂದ ಬೆಳಗುತ್ತಾನೆ. ಕೆಳಗಿನ, ದ್ವಂದ್ವಗಳಿಂದ ಕೂಡಿದ ನಿಮ್ನ ಸ್ತರದಿಂದ ಬಹಳ ಎತ್ತರದಲ್ಲಿ, ಚಿದಾಕಾಶದಲ್ಲಿ ನಿರ್ವಿಕಾರನಾದ ಬ್ರಹ್ಮನು ಬೆಳಗುತ್ತಾನೆ. ಅವನು ಪಾಪ–ಪುಣ್ಯ ಎರಡರಿಂದಲೂ ದೂರ, ಅವು ಅವನನ್ನು ಸ್ಪರ್ಶಿಸಲು ಕೂಡ ಸಾಧ್ಯವಿಲ್ಲ, ನಮ್ಮ ಮಾನವೀಯ ಮೌಲ್ಯಗಳಾದ ಧರ್ಮ–ಅಧರ್ಮ, ಒಳಿತು–ಕೆರಡು, ಸುಖ–ದುಃಖಗಳು ಅವನಿಗೆ ಸಂಬಂಧವಿಲ್ಲ, ತಾಪತ್ರಯಗಳಿಂದ ಬಹು

ದೂರ ಇದ್ದಾನೆ. ನಮ್ಮ ಮಾನವೀಯ ಸುಖ–ದುಃಖ, ಜಯ–ಅಪಜಯಗಳಿಗೆ ಅವನು ಸ್ಪಂದಿಸುವುದಿಲ್ಲ. ನಮ್ಮ ಸುಖ–ದುಃಖ, ಸೋಲು–ಗೆಲುವುಗಳಿಂದ ಅವನು ಯಾವ ರೀತಿಯಿಂದಲೂ ವಿಚಲಿತನಾಗುವುದಿಲ್ಲ. ಅವನು ಎಲ್ಲದರ ಒಡೆಯ, ಅವನು ಎಲ್ಲರಿಗಿಂತ ಶ್ರೇಷ್ಠ, ಅವನು ಸರ್ವಾಂತರ್ಯಾಮಿ, ಪ್ರಭು–ವಿಭು, ಪ್ರಶಾಂತ, ಬಲಿಷ್ಠ, ಪರಿಶುದ್ಧ, ಎಲ್ಲರಲ್ಲೂ ಎಲ್ಲರಿಗೂ ಸಮಾನ, ಅವನೇ ಪ್ರಕೃತಿಯ ಎಲ್ಲ ಕಾರ್ಯಗಳನ್ನು ಮಾಡುವುವನು. ಆದರೆ ಅವನೇ ನೇರವಾಗಿ ಅವುಗಳಿಗೆ ಹೊಣೆ ಅಲ್ಲ, ಪ್ರಕೃತಿಯ ಎಲ್ಲ ಕೆಲಸ–ಕಾರ್ಯಗಳಿಗೆ ಅವನು ಕರ್ತ, ಧರ್ತಾ, ಭರ್ತಾ, ಅನುಮಂತಾ, ಸಾಕ್ಷೀಯಾಗಿ ನಿಲ್ಲುತ್ತಾನೆ. ಅವನು ನಮ್ಮ ಮೇಲೆ ಕರ್ತೃತ್ವದ ಭ್ರಮೆಯನ್ನು ಆರೋಪಿಸುವುದಿಲ್ಲ. ಈ ಕತೃತ್ವದ ಭ್ರಮೆಯು ಅಜ್ಞಾನದ ಫಲವಾಗಿದ್ದು, ನಿಮ್ನ ಪ್ರಕೃತಿಯ ಗುಣಧರ್ಮವಾದ ಅದು ಹರಿದು ಹೋಗಿ ಬಿಡುವುದು. ಆದರೆ ನಾವು ಅಜ್ಞಾನದ ನಿಮ್ನ ಪ್ರಕೃತಿಯಲ್ಲಿಯೇ ಜೀವುಸುವುದರಿಂದ, ನಮ್ಮೊಳಗೆ ರಹಸ್ಯವಾಗಿರುವ ಶಾಶ್ವತನಾದ ಬ್ರಹ್ಮನ ಅರಿವು ನಮ್ಮಿಂದ ಮರೆಯಾಗಿರುತ್ತದೆ. ಅಂತೆಯೇ ನಮಗೆ ಈ ಪ್ರಭುತ್ವ, ಮುಕ್ತಿ, ಪಾವಿತ್ರ್ಯ ಇವುಗಳ ಅನುಭವ ಸಾಮಾನ್ಯವಾಗಿ ಆಗುವುದಿಲ್ಲ. ಆದರೆ ಬ್ರಹ್ಮನನ್ನೇ ಏಕೈಕ ಗುರಿಯಾಗಿರಿಸಿಕೊಂಡು ಸಾಧನೆಗೈವ ಸಾಧಕನಿಗೆ ಈ ಜ್ಞಾನ ಲಭಿಸುವುದರಿಂದ, ಅಜ್ಞಾನದ ಪೊರೆ ಕಳಚಿ ಹೋಗುವುದು. ಆತ್ಮ ಜ್ಞಾನವು ಮೋಡದಲ್ಲಿ ಮರೆಯಾಗಿದ್ದ ಸೂರ್ಯ ಹೊರಬಂದಾಗ ಬೆಳಗುವಂತೆ, ಸಾಧಕನು ಎಲ್ಲ ದ್ವಂದ್ವಗಳಿಂದ, ನಿಮ್ನ ಪ್ರಕೃತಿಯ ಅಜ್ಞಾನದ ಹಿಡಿತದಿಂದ ಮುಕ್ತನಾಗಿ ಹೊಳೆಯುತ್ತಾನೆ. "ಆದಿತ್ಯವತ್ ಪ್ರಕಾಶಯತಿ ತತ್ ಪರಮ್" (5.16) ಏಕೋ ರೀತಿಯಿಂದ ಪ್ರಯತ್ನ ಮಾಡುವುದರಿಂದ, ನಮ್ಮ ಸಂಪೂರ್ಣ ಪ್ರಜ್ಞೆಯನ್ನು ಈಶ್ವರನೆಡೆಗೆ ತಿರುಗಿಸುವುದರಿಂದ, ಈಶ್ವರ ಪ್ರಾಪ್ತಿಯೇ ನಮ್ಮ ಜೀವನದ ಗುರಿಯನ್ನಾಗಿಸಿ ಸಾಧನೆ ಮಾಡುವುದರಿಂದ, ಈಶ್ವರನು ನಮ್ಮೊಳಗೂ ಇದ್ದಾನೆ, ಎಲ್ಲರಲ್ಲೂ ಏಕೋ ರೀತಿಯಾಗಿ ಇದ್ದಾನೆ, ಎಲ್ಲೆಲ್ಲೂ ಎಲ್ಲೆಡೆಯಲ್ಲೂ ಇದ್ದಾನೆ ಎಂದು ಭಾವಿಸಿ ವ್ಯವಹರಿಸುವುದರಿಂದ ನಾವು ಅದೇ ಅಂದರೆ ಆ ಈಶ್ವರ ಅಥವಾ ಬ್ರಹ್ಮನೇ ಆಗಿ ಬಿಡುತ್ತೇವೆ "ತದ್ ಬುದ್ಧಯಃ ತದಾತ್ಮಾನಃ" (5.16) ಎಲ್ಲ ಅಜ್ಞಾನಾಂಧಕಾರ ದುಃಖಾದಿಗಳನ್ನು ಜ್ಞಾನ ಜಲದಲ್ಲಿ ಸತ್ಯದ ಧಾರಾ ಪ್ರವಾಹವನ್ನು ಕುರಿತು ಋಗ್ವೇದ ಹೀಗೆಯೇ ಹೇಳುತ್ತದೆ. ಜ್ಞಾನ ಜಲ, ದೈವೂ ಪ್ರಕಾಶದ ನೀರು ಋತಸ್ಯ ಧಾರಾಃ ಆಪೋ ವಿಚೇತಸಃ ಸ್ವರ್ವತಿಃ ಆಪಂ. ಇಲ್ಲಿರುವ ಅಲಂಕಾರೋಪಮೆಗಳು ವಾಸ್ತವಿಕವಾಗಿ ನಿಜವಾದ ಸಂಕೇತಗಳಾಗಿವೆ, ಸ್ನಾನ ಮಾಡಿ ಕಳೆದು ಕೊಳ್ಳುತ್ತೇವೆ. "ಜ್ಞಾನ ನಿರ್ಧೂತ ಕಲ್ಮಶಃ" (6.17).

ಇದರ ಪರಿಣಾಮವಾಗಿ, ಗೀತೆ ಹೇಳುವಂತೆ, ಎಲ್ಲ ವಸ್ತುಗಳಲ್ಲೂ, ಎಲ್ಲ ವ್ಯಕ್ತಿಗಳಲ್ಲೂ ಸಮಾನ ಭಾವ ಏರ್ಪಡುತ್ತದೆ. ಆಗ ನಮ್ಮ ಎಲ್ಲ ಕರ್ಮಗಳು ಬ್ರಹ್ಮನಲ್ಲಿ ಪ್ರತಿಷ್ಠತವಾಗುತ್ತವೆ. ಏಕೆಂದರೆ ಸಮಂ ಬ್ರಹ್ಮ (5.11) ಈ ತೆರನಾದ ಪರಿಪೂರ್ಣ ಸಮತೆ ಸಿದ್ಧಿಸಿದಾಗ ಮಾತ್ರ ಸಾಮ್ಯೇ ಸ್ಥಿತಃ ಮನಃ (5.19) ಸಾಮಾನ್ಯ ಮನುಷ್ಯ, ಪಂಡಿತ, ಶ್ವಾನ, ಶ್ವಪಚ (ಶೂದ್ರ) ಎಲ್ಲರನ್ನೂ ಸಮಾನತೆಯಿಂದ ಕಾಣಲು ಸಾಧ್ಯವಾಗುತ್ತದೆ ಎಲ್ಲರೂ, ಎಲ್ಲವೂ ಬ್ರಹ್ಮವೇ ಎಂಬುದು ತಿಳಿದಾಗ, ಎಲ್ಲ ಕರ್ಮಗಳೂ ಯಾವ ಬಂಧನವೂ ಇಲ್ಲದೇ ಸಹಜವಾಗಿ ಮುಕ್ತವಾಗಿ, ಯಾವ ರೀತಿಯ ಭಯ ಇಲ್ಲದೇ, ಯಾವ ಅಂಟೂ ಇಲ್ಲದೇ ಸರಳವಾಗಿ ನಡೆದುಕೊಂಡು ಹೋಗುತ್ತವೆ. ಆಗ ಯಾವ ಪಾಪವೂ ಇಲ್ಲ, ಕಳಂಕವೂ ಇಲ್ಲ, ಏಕೆಂದರೆ ನಾವಾಗ ಅವುಗಳ ಜನನಿಯಾದ ಆಶೆ, ಆಶೆಯಿಂದ ಎಸಗುವ ಕರ್ಮ ಮತ್ತು ಅದರ ಪ್ರತಿಕ್ರಿಯೆಗಳಿಂದ ದೂರಾಗಿರುತ್ತೇವೆ. ಅವೆಲ್ಲ ಅಜ್ಞಾನದ ಕ್ರಿಯೆಗಳೆಂಬುದು ಮನದಟ್ಟಾಗಿರುತ್ತದೆ. ತೈಃ ಹಿತಃ ಸರ್ಗಃ (5.19) ಪರಮ ಶ್ರೇಷ್ಠವಾದ ದೈವ ಪ್ರಕೃತಿಯಲ್ಲಿ ಸ್ಥಿತವಾಗಿರುವುದರಿಂದ ನಮ್ಮಿಂದ ಯಾವ ತಪ್ಪೂ, ದೋಷವೂ ಘಟಿಸಲಾರದು. ಇವು ಘಟಿಸುವುದೇ ಅಜ್ಞಾನದ ಅಸಮತೆಯಿಂದಾಗಿ. ನಿರ್ದೋಷಂ ಹಿ ಸಮಂ ಬ್ರಹ್ಮ (5.19) ಬ್ರಹ್ಮನಲ್ಲಿ ಯಾವ ದೋಷವೂ ಇಲ್ಲ, ಸಮತ್ವದಲ್ಲಿ ಒಳ್ಳೆಯದು ಕೆಟ್ಟದ್ದು, ಶುಭ–ಅಶುಭಗಳ ಗೊಂದಲವೇ ಇಲ್ಲ. ಬ್ರಹ್ಮಸ್ಥಿತರಾದ ನಮ್ಮಲ್ಲಿ ಕೂಡ ಶುಭಾಶುಭಗಳನ್ನು ಮೀರಿದ ಸಮತ್ವ ಮೈಗೂಡಿರುತ್ತದೆ. ನಾವು ಆ ಪಾವಿತ್ರ್ಯದಲ್ಲಿ ಅಕಳಂಕರಾಗಿ, ಸಮಸ್ತ ಸೃಷ್ಟಿಯ ಕಲ್ಯಾಣವನ್ನೇ ಬಯಸುತ್ತ, ಅದೊಂದೇ ಬಯಕೆಯಿಂದ ಸರ್ವ ಸಮತೆಯಿಂದ ಕರ್ಮ ಮಾಡುತ್ತೇವೆ. ಕ್ಷೀಣ ಕಲ್ಮಶಃ ಸರ್ವಭೂತಹಿತೇರತಃ (5.24) ನಮ್ಮ ಹೃದಯದಲ್ಲಿರುವ ಈಶ್ವರನೇ ಅಜ್ಞಾನಾವೃತನಾಗಿ ನಾವು ಮಾಡುವ ಅಶುಭ ಕರ್ಮಗಳಿಗೆ ಕಾರಣನಾಗುತ್ತಾನೆ. ಆದರೆ ತನ್ನ ಮಾಯೆಯ ಮೂಲಕ ನಮ್ಮ ನಿಮ್ನ ಪ್ರಕೃತಿಯ ಅಹಂನ ಮೂಲಕ ಈ ದುಷ್ಕರ್ಮಗಳ ಪರಿಣಾಮವನ್ನು ನಮ್ಮ ಅಹಂನ ಮೇಲೆ ಪ್ರತಿಫಲ ರೂಪವಾಗಿ ಆರೋಪಿಸುತ್ತಾನೆ. ದುಷ್ಕರ್ಮಗಳ ಸಂಕೀರ್ಣವಾದ ಪ್ರತಿಫಲವಾಗಿ ನಮ್ಮ ಅಂತರಂಗದಲ್ಲಿ ಪಾಪ–ಪುಣ್ಯಗಳ, ಬಾಹ್ಯದಲ್ಲಿ ದುಃಖ–ಸುಖ ದುರಾದೃಷ್ಟ ಅದೃಷ್ಟ ರೂಪದಲ್ಲಿ ಕರ್ಮಗಳ ಸಂಕೋಲೆಯು ನಮ್ಮನ್ನು ಬಾಧಿಸುವಂತಾಗುತ್ತದೆ. ಜ್ಞಾನದ ಮೂಲಕ ಈ ಬಂಧನವನ್ನು ಕಳಚಿಕೊಂಡಾಗ ಈಶ್ವರನು ನಮ್ಮಿಂದ ಎಲ್ಲೆಡೆಯಲ್ಲೂ ಇದ್ದಾನೆ ಎಂದು ಭಾವಿಸಿ

ವ್ಯವಹರಿಸುವುದರಿಂದ ನಾವು ಅದೇ ಅಂದರೆ ಆ ಈಶ್ವರ ಅಥವಾ ಬ್ರಹ್ಮನೇ ಆಗಿ ಬಿಡುತ್ತೇವೆ "ತದ್ ಬುದ್ಧಯಃ ತದಾತ್ಮಾನಃ" (5.16) ಎಲ್ಲ ಅಜ್ಞಾನಾಂಧಕಾರ ದುಃಖಾದಿಗಳನ್ನು ಜ್ಞಾನ ಜಲದಲ್ಲಿ ಸತ್ಯದ ಧಾರಾ ಪ್ರವಾಹವನ್ನು ಕುರಿತು ಋಗ್ವೇದ ಹೀಗೆಯೇ ಹೇಳುತ್ತದೆ. ಜ್ಞಾನ ಜಲ, ದೈವವೂ ಪ್ರಕಾಶದ ನೀರು ಋತಸ್ಯ ಧಾರಾಃ ಆಪೋ ವಿಚೇತಸಃ ಸ್ವರ್ವತಿಃ ಆಪಂ. ಇಲ್ಲಿರುವ ಅಲಂಕಾರ ಮತ್ತು ಉಪಮೆಗಳು ವಾಸ್ತವಿಕವಾಗಿ ನಿಜವಾದ ಸಂಕೇತಗಳಾಗಿವೆ, ಸ್ನಾನ ಮಾಡಿ ಕಳೆದುಕೊಳ್ಳುತ್ತೇವೆ. "ಜ್ಞಾನ ನಿರ್ಧೂತ ಕಲ್ಮಶಃ" (6.17).

ಇದರ ಪರಿಣಾಮವಾಗಿ, ಗೀತೆ ಹೇಳುವಂತೆ, ಎಲ್ಲ ವಸ್ತುಗಳಲ್ಲೂ, ಎಲ್ಲ ವ್ಯಕ್ತಿಗಳಲ್ಲೂ ಸಮಾನ ಭಾವ ಏರ್ಪಡುತ್ತದೆ. ಆಗ ನಮ್ಮ ಎಲ್ಲ ಕರ್ಮಗಳು ಬ್ರಹ್ಮನಲ್ಲಿ ಪ್ರತಿಷ್ಠಿತವಾಗುತ್ತವೆ. ಏಕೆಂದರೆ ಸಮಂ ಬ್ರಹ್ಮ (5.11) ಈ ತೆರನಾದ ಪರಿಪೂರ್ಣ ಸಮತೆ ಸಿದ್ಧಿಸಿದಾಗ ಮಾತ್ರ ಸಾಮ್ಯೇ ಸ್ಥಿತಃ ಮನಃ (5.19) ಸಾಮಾನ್ಯ ಮನುಷ್ಯ, ಪಂಡಿತ, ಶ್ವಾನ, ಶ್ವಪಚ (ಶೂದ್ರ) ಎಲ್ಲರನ್ನೂ ಸಮಾನತೆಯಿಂದ ಕಾಣಲು ಸಾಧ್ಯವಾಗುತ್ತದೆ. ಎಲ್ಲರೂ, ಎಲ್ಲವೂ ಬ್ರಹ್ಮವೇ ಎಂಬುದು ತಿಳಿದಾಗ, ಎಲ್ಲ ಕರ್ಮಗಳೂ ಯಾವ ಬಂಧನವೂ ಇಲ್ಲದೇ ಸಹಜವಾಗಿ ಮುಕ್ತವಾಗಿ, ಯಾವ ರೀತಿಯ ಭಯ ಇಲ್ಲದೇ, ಯಾವ ಅಂಟೂ ಇಲ್ಲದೇ ಸರಳವಾಗಿ ನಡೆದುಕೊಂಡು ಹೋಗುತ್ತವೆ. ಆಗ ಯಾವ ಪಾಪವೂ ಇಲ್ಲ, ಕಳಂಕವೂ ಇಲ್ಲ, ಏಕೆಂದರೆ ನಾವಾಗ ಅವುಗಳ ಜನನಿಯಾದ ಆಶೆ, ಆಶೆಯಿಂದ ಎಸಗುವ ಕರ್ಮ ಮತ್ತು ಅದರ ಪ್ರತಿಕ್ರಿಯೆಗಳಿಂದ ದೂರಾಗಿರುತ್ತೇವೆ. ಅವೆಲ್ಲ ಅಜ್ಞಾನದ ಕ್ರಿಯೆಗಳೆಂಬುದು ಮನದಟ್ಟಾಗಿರುತ್ತದೆ. ತೈಃ ಹಿತಃ ಸರ್ಗಃ (5.19) ಪರಮ ಶ್ರೇಷ್ಠವಾದ ದೈವ ಪ್ರಕೃತಿಯಲ್ಲಿ ಸ್ಥಿತವಾಗಿರುವುದರಿಂದ ನಮ್ಮಿಂದ ಯಾವ ತಪ್ಪೂ, ದೋಷವೂ ಘಟಿಸಲಾರದು. ಇವು ಘಟಿಸುವುದೇ ಅಜ್ಞಾನದ ಅಸಮತೆಯಿಂದಾಗಿ. ನಿರ್ದೋಷಂ ಹಿ ಸಮಂ ಬ್ರಹ್ಮ (5.19) ಬ್ರಹ್ಮನಲ್ಲಿ ಯಾವ ದೋಷವೂ ಇಲ್ಲ, ಸಮತ್ವದಲ್ಲಿ ಒಳ್ಳೆಯದು ಕೆಟ್ಟದ್ದು, ಶುಭ–ಅಶುಭಗಳ ಗೊಂದಲವೇ ಇಲ್ಲ. ಬ್ರಹ್ಮಸ್ಥಿತರಾದ ನಮ್ಮಲ್ಲಿ ಕೂಡ ಶುಭಾಶುಭಗಳನ್ನು ಮೀರಿದ ಸಮತ್ವ ಮೈಗೂಡಿರುತ್ತದೆ. ನಾವು ಆ ಪಾವಿತ್ರ್ಯದಲ್ಲಿ ಅಕಳಂಕರಾಗಿ, ಸಮಸ್ತ ಸೃಷ್ಟಿಯ ಕಲ್ಯಾಣವನ್ನೇ ಬಯಸುತ್ತ, ಅದೊಂದೇ ಬಯಕೆಯಿಂದ ಸರ್ವ ಸಮತೆಯಿಂದ ಕರ್ಮ ಮಾಡುತ್ತೇವೆ. ಕ್ಷೀಣ ಕಲ್ಮಶಃ ಸರ್ವಭೂತಹಿತೇರತಃ (5.24) ನಮ್ಮ ಹೃದಯದಲ್ಲಿರುವ ಈಶ್ವರನೇ ಅಜ್ಞಾನಾವೃತನಾಗಿ ನಾವು ಮಾಡುವ

ಅಶುಭ ಕರ್ಮಗಳಿಗೆ ಕಾರಣನಾಗುತ್ತಾನೆ. ಆದರೆ ತನ್ನ ಮಾಯೆಯ ಮೂಲಕ ನಮ್ಮ ನಿಮ್ಮ ಪ್ರಕೃತಿಯ ಅಹಂನ ಮೂಲಕ ಈ ದುಷ್ಕರ್ಮಗಳ ಪರಿಣಾಮವನ್ನು ನಮ್ಮ ಅಹಂನ ಮೇಲೆ ಪ್ರತಿಫಲ ರೂಪವಾಗಿ ಆರೋಪಿಸುತ್ತಾನೆ. ದುಷ್ಕರ್ಮಗಳ ಸಂಕೀರ್ಣವಾದ ಪ್ರತಿಫಲವಾಗಿ ನಮ್ಮ ಅಂತರಂಗದಲ್ಲಿ ಪಾಪ–ಪುಣ್ಯಗಳ, ಬಾಹ್ಯದಲ್ಲಿ ದುಃಖ–ಸುಖ ದುರಾದೃಷ್ಟ ಅದೃಷ್ಟ ರೂಪದಲ್ಲಿ ಕರ್ಮಗಳ ಸಂಕೋಲೆಯು ನಮ್ಮನ್ನು ಬಾಧಿಸುವಂತಾಗುತ್ತದೆ. ಜ್ಞಾನದ ಮೂಲಕ ಈ ಬಂಧನವನ್ನು ಕಳಚಿಕೊಂಡಾಗ ಈಶ್ವರನು ನಮ್ಮಿಂದ ರಹಸ್ಯವಾಗಿ ಮರೆಯಲ್ಲಿ ಉಳಿಯದೇ, ತಾನೇ ಸ್ವಯಂ ಪ್ರಕಟವಾಗಿ ನಮ್ಮ ಕರ್ಮಗಳನ್ನು ತನ್ನ ಕೈಯಲ್ಲಿ ತೆಗೆದುಕೊಳ್ಳುತ್ತಾನೆ. ನಮ್ಮನ್ನು ದೋಷ ಮುಕ್ತ ಉಪಕರಣವಾಗಿ ಉಪಯೋಗಿಸಿ–ಕೊಳ್ಳುತ್ತಾನೆ. ನಾವಾಗ ಕೇವಲ ನಿಮಿತ್ತ ಮಾತ್ರರಾಗಿದ್ದು (11.33) ಜಗದ ಕಲ್ಯಾಣವನ್ನು ಸ್ವತಃ ಈಶ್ವರನೇ ಸಂಪನ್ನಗೊಳಿಸುತ್ತಾನೆ. ಜ್ಞಾನ ಮತ್ತು ಸಮತ್ವಗಳ ನಡುವಿನ ಬಂಧ ಇಷ್ಟು ಗಟ್ಟಿಯಾಗಿದೆ, ಆತ್ಮೀಯವಾಗಿದೆ, ಬುದ್ಧಿಯಲ್ಲಿನ ಜ್ಞಾನವು ಸ್ವಭಾವದ ಸಮತೆಯಾಗಿ ಪರಾವರ್ತಿತವಾಗುತ್ತದೆ. ಪ್ರಜ್ಞೆಯ ಉನ್ನತವಾದ ಶಿಖರದಲ್ಲಿ ಜ್ಞಾನವು ಸತ್ತೆಯ ಬೆಳಕಾಗಿ, ಸಮತ್ವವು ಪ್ರಕೃತಿಯ ಸತ್ವವಾಗಿ ಪ್ರತಿಫಲಿತವಾಗುತ್ತದೆ.

ಭಾರತೀಯ ತತ್ತ್ವ ಶಾಸ್ತ್ರ ಹಾಗೂ ಯೋಗದಲ್ಲಿ ಜ್ಞಾನ ಎಂಬ ಶಬ್ಧವನ್ನು ಇದೇ ಅರ್ಥದಲ್ಲಿ ಅಂದರೆ ಪರಮೋಚ್ಚ ಪರಮ ಶ್ರೇಷ್ಠ ಆತ್ಮ ಜ್ಞಾನ ಎಂಬರ್ಥದಲ್ಲಿಯೇ ಬಳಸಲಾಗುವುದು. ಆತ್ಮ ಜ್ಞಾನವು ನಮ್ಮ ಮಾಹಿತಿಯ ಪರಿಧಿಯನ್ನು ಹಾಗೂ ನಮ್ಮ ಬೌದ್ಧಿಕ ಸಂಪತ್ತನ್ನೆನೂ ಹೆಚ್ಚಿಸುವುದಿಲ್ಲ, ಬದಲಾಗಿ ಅದು ನಮ್ಮ ನಿಜವಾದ ಅಂತಃ ಸತ್ತೆಯ ಜ್ಞಾನದ ಬೆಳಕಿನಲ್ಲಿ ನಮ್ಮನ್ನು ಬೆಳೆಸುತ್ತದೆ. ಅದು ವೈಜ್ಞಾನಿಕ ಅಥವಾ ಮಾನಸಿಕ, ತತ್ತ್ವ ಶಾಸ್ತ್ರದ ಅಥವಾ ನೈತಿಕ, ಸೌಂದರ್ಯ ಪ್ರಜ್ಞೆಯ, ಲೌಕಿಕ ವ್ಯವಹಾರದಲ್ಲಿ ಉಪಯುಕ್ತವಾಗುವ ಜ್ಞಾನವಲ್ಲವೆಂಬುದು ನಮಗೆ ಗೊತ್ತಿರಬೇಕು. ಹಾಗೆಂದು ಈ ವಿಷಯಗಳು ನಮ್ಮ ಬೆಳವಣಿಗೆಗೆ ಸಹಾಯ ಮಾಡುವುದೇ ಇಲ್ಲ ಎಂದೇನೋ ಅರ್ಥವಲ್ಲ, ಅದು ನಮ್ಮ ಸಗುಣ ಸಾಕಾರ ರೂಪದ (becoming) ವೃದ್ಧಿಯೇ ಹೊರತು ಮೂಲ ಸ್ವರೂಪದ ವೃದ್ಧಿಯಂತೂ ಅಲ್ಲ (being). ಪರಮ ಪುರುಷನನ್ನು, ಘನ ಆತ್ಮವನ್ನು ತಿಳಿಯುವಲ್ಲಿ ಅವುಗಳನ್ನು ಸಹಾಯಕ ಅಥವಾ ಉಪಕರಣಗಳೆಂದು ಬಳಸಿದಾಗ ಮಾತ್ರ ಅವುಗಳಿಂದ ಬೆಳವಣಿಗೆ ಸಾಧ್ಯವಾದೀತು; ವೈಜ್ಞಾನಿಕ ಜ್ಞಾನವನ್ನು ಪ್ರಕೃತಿಯ ಕಾರ್ಯವಿಧಾನದ ಪರದೆಯನ್ನು ಭೇದಿಸಿ, ಹಿಂದಿರುವ ದಿವ್ಯ ಸತ್ಯವನ್ನು ತಿಳಿಯಲು

ಬಳಸಿದಾಗ ಮಾತ್ರ ಉಪಯೋಗವಾಗುವುದು. ಇನ್ನು ಮಾನಸಿಕ ಜ್ಞಾನವನ್ನು ನಮ್ಮನ್ನರಿಯಲು, ಉನ್ನತ ಮತ್ತು ನಿಮ್ನ ಇವುಗಳ ನಡುವಿನ ಭೇದವನ್ನರಿಯಲು ಬಳಸಿದಾಗ ಮಾತ್ರ ಯಾವ ದಾರಿಯ ಮೂಲಕ ಬೆಳೆಯಬಹುದೋ ಅದನ್ನು ಧರಿಸಲು ಸಹಾಯವಾಗುವುದು. ತತ್ತ್ವ ಶಾಸ್ತ್ರದ ಜ್ಞಾನವು ಅಸ್ತಿತ್ವದ ಅವಶ್ಯಕ ಹಾಗೂ ನಿರ್ಧಾರಕ ತತ್ತ್ವಗಳನ್ನರಿಯಲು ಉಪಯುಕ್ತವಾಗುವುದು, ಆ ಉದ್ದೇಶಕ್ಕೆ ಬಳಸಿದಾಗ ಮಾತ್ರ ಶಾಶ್ವತವಾದ ನೆಲೆ ಕಂಡುಕೊಂಡು ಶಾಶ್ವತತೆಯಲ್ಲಿ ಜೀವಿಸಲು ಕಲಿಯಬಹುದು. ಅದೇ ರೀತಿ ನೈತಿಕತೆಯ ಜ್ಞಾನ ಕೂಡ, ಪಾಪ ಪುಣ್ಯಗಳ ಭೇದವರಿತು, ಒಳ್ಳೆಯದು ಕೆಡಕು ಇವುಗಳ ನಡುವಣ ವ್ಯತ್ಯಾಸ ತಿಳಿದು, ಪುಣ್ಯ ಕರ್ಮವನ್ನು ಶ್ರೇಷ್ಠವೆಂದು ಭಾವಿಸಿ ದಿವ್ಯ ಪ್ರಕೃತಿಯ ಮುಗ್ಧತೆಯನ್ನು ಸೇರಲು ಪ್ರಯತ್ನ ಮಾಡಬಹುದು. ಸೌಂದರ್ಯ ಪ್ರಜ್ಞೆಯು ದೈವಿಕತೆಯ ಸೌಂದರ್ಯವನ್ನು ಮನದಟ್ಟು ಮಾಡಿಕೊಡುವುದು, ಪ್ರಪಂಚದ ಜ್ಞಾನದ ಸುಭಗತೆಯ ಜ್ಞಾನ ಮಾಡಿಕೊಡುವುದು, ಇದನ್ನು ತಿಳಿದು ಮಾನವನಲ್ಲಿ ಇರುವ ಪರಮಾತ್ಮನ ಸೇವೆ ಮಾಡಲು ಉದ್ಯುಕ್ತರಾಗಬಹುದು. ಆದರೆ ಇವೆಲ್ಲವೂ ಕೇವಲ ಸಹಾಯಕ ಅಂಶಗಳು ಮಾತ್ರ. ನಿಜವಾದ ದಿವ್ಯ ಜ್ಞಾನವು ಮಾತ್ರ ಮನಸ್ಸಿಗೆ ಅಲಭ್ಯವೇ, ರಹಸ್ಯವೇ, ಮನಸ್ಸು ಅದರ ಬಗ್ಗೆ ಕೆಲ ಕಲ್ಪನೆಗಳನ್ನು ಮಾಡಿಕೊಳ್ಳಬಹುದು, ಆದರೆ ದಿವ್ಯ ಜ್ಞಾನವು ಮಾತ್ರ ಆತ್ಮಸ್ಥವಾಗಿರುವುದು.

ಈ ಜ್ಞಾನವು ನಮಗೆ ಹೇಗೆ ಪ್ರಾಪ್ತಿಯಾಗುವುದೆಂಬುದನ್ನು ಕುರಿತು, ಗೀತೆ ಹೀಗೆ ಹೇಳುತ್ತದೆ. ಮೊದಲ ಅರಿವು ಜ್ಞಾನಿಗಳ ಮೂಲಕ ಲಭಿಸುತ್ತದೆ. ಅಂದರೆ, ತತ್ತ್ವವನ್ನು ಕೇವಲ ಬುದ್ಧಿಯ ಮೂಲಕ ಅರಿತವರಲ್ಲ, ಯಾರು ತತ್ತ್ವಗಳ ದರ್ಶನ ಮಾಡಿಕೊಂಡಿರುವುರೋ ಅವರಿಂದ ಜ್ಞಾನ ಪ್ರಾಪ್ತಿಯಾಗುತ್ತದೆ. (4.34) ಆದರೆ ವಾಸ್ತವವಾಗಿ ಈ ಜ್ಞಾನವು ನಮಗೆ ಅಂತರಂಗದಿಂದಲೇ ದೊರೆಯುತ್ತದೆ. "ತತ್ ಸ್ವಯಂ ಯೋಗ ಸಂಸಿದ್ಧಃ ಕಾಲೇನಾತ್ಮನಿ ವಿಂದತಿ" (4.38) ಅರ್ಥಾತ್ ಜ್ಞಾನ ಯೋಗ ಕೈಕೊಂಡವರಲ್ಲಿ ಜ್ಞಾನವು ನಿಧಾನವಾಗಿ ವೃದ್ಧಿಸುತ್ತ ಹೋಗುತ್ತದೆ. ಯಾರು ಆಶೆಗಳನ್ನು ಸಂಪೂರ್ಣವಾಗಿ ತ್ಯಜಿಸಿದ್ದಾರೋ, ಗೆದ್ದಿದ್ದಾರೋ, ಯಾರಲ್ಲಿ ಸಮತೆಯು ಮೈಗೂಡಿದೆಯೋ, ಪರಮಾತ್ಮನ ವಿಷಯವಾಗಿ ಅಪಾರ ಭಕ್ತಿ ಇದೆಯೋ ಅವರ ಜ್ಞಾನ ಹೆಚ್ಚುತ್ತ ಹೋಗುತ್ತದೆ. ಈ ಮಾತು ಪ್ರಾಪಂಚಿಕ ಜ್ಞಾನದ ಬಗೆಗಿನ ಮಾತಲ್ಲ. ಆಧ್ಯಾತ್ಮಿಕ ಜ್ಞಾನದಿಂದ ಸರ್ವ ಶ್ರೇಷ್ಠ ಪಾರಮಾರ್ಥಿಕ ಜ್ಞಾನ ಪ್ರಾಪ್ತವಾಗುತ್ತದೆ. ಸಾಮಾನ್ಯವಾಗಿ ಮಾನವರು ಬೌದ್ಧಿಕವಾಗಿ ಜ್ಞಾನವನ್ನು

ಅರಸುವುದುಂಟು, ಅದು ಬಹಳ ಶ್ರಮದಾಯಕ ಮತ್ತು ಇಂದ್ರಿಯ ಹಾಗೂ ಇಂದ್ರಿಯಾರ್ಥಗಳ ಮೇಲೆ ಆಧಾರಿತವಾಗಿರುವುದು. ಈ ವಿಷಯಾಧಾರಿತವಲ್ಲದ, ಸ್ವಯಂಭೂ ಅಥವಾ ಸ್ವಯಂ ತಾನೇ ತಾವಾಗಿರುವ ಅಂತಃ ಸ್ಫೂರ್ತಿಯಿಂದ ಬಂದಿರುವ, ಅನುಭವ ಪೂರ್ಣತೆಯ ಜ್ಞಾನವು ನಮ್ಮ ಇಂದ್ರಿಯಗಳನ್ನು ನಿಗ್ರಹಿಸಿದಾಗ, ನಿಯಂತ್ರಿಸಿದಾಗ ಮಾತ್ರ ಬರುವುದು. ಸಂಯತೇದ್ರಿ ಮಃ, ಸಾವಾಗ ವಿಷಯಾಧಾರಿತ ಭ್ರಮೆಗೆ ಒಳಗಾಗುವುದಿಲ್ಲ ಹಾಗೂ ಮನಸ್ಸು ಮತ್ತು ಇಂದ್ರಿಯಗಳು ಅದರ ಪೂರ್ಣ ಪ್ರಮಾಣದ ಕನ್ನಡಿಯಾಗುವುವು. ನಮ್ಮ ಸಂಪೂರ್ಣ ಪ್ರಜ್ಞೆಯು ಆ ಏಕೈಕ ಪರಮ ಸತ್ಯದ ಮೇಲೆಯೇ ಕೇಂದ್ರಿತವಾಗಿರಬೇಕು; ಆ ಪರಮ ಸತ್ಯವು ಎಲ್ಲವನ್ನೂ ಒಳಗೊಂಡಿದ್ದು ಎಲ್ಲದಕ್ಕಿಂತಲೂ ಶ್ರೇಷ್ಠವಾಗಿದ್ದು ತತ್ ಪರಃ (4.39) ತನ್ನ ಜ್ಞಾನ ಪ್ರಕಾಶವನ್ನು ನಮ್ಮೊಳಗೆ ಹರಿಸುವುಂಥದಾಗಿರುವುದು. ನಾವು ಸಂಪೂರ್ಣವಾಗಿ ಆ ಪರಾತ್ಪರ ಸತ್ಯವನ್ನೇ ಕುರಿತು ಚಿಂತಿಸಬೇಕು.

ಜ್ಞಾನ ಪ್ರಾಪ್ತಿಯ ವಿಷಯವಾಗಿ ಅನೇಕ ಸಾಧನೆಗಳನ್ನು ಈಗಾಗಲೇ ಹೇಳಿದ್ದು ಅವೆಲ್ಲವುಗಳಲ್ಲಿ ಶ್ರದ್ಧೆಯು ತೀರ ಮಹತ್ವದ್ದಾಗಿದ್ದು, ಗೀತೆಯು ಶ್ರದ್ಧೆಯ ಮೇಲೆ ವಿಶೇಷ ಒತ್ತು ನೀಡುತ್ತದೆ. ಶ್ರದ್ಧಾವಾನ್ ಲಭತೇ ಜ್ಞಾನಂ (4.39) ಶ್ರದ್ಧೆಯ ವಿಷಯವಾಗಿ ಅನುಮಾನ, ವಿಶೇಷವಾಗಿ ಬೌದ್ಧಿಕ ಅನುಮಾನ ಇರಕೂಡದು. ಗೀತೆ ಸ್ಪಷ್ಟವಾಗಿ ಹೇಳುವಂತೆ "ಅಜ್ಞನೂ ಹೌದು, ಶ್ರದ್ಧೆಯೂ ಇಲ್ಲ, ಅಂಥ ಸಂಶಯಾತ್ಮ ಪುರುಷನು ವಿನಾಶ ಹೊಂದುತ್ತಾನೆ. ಸಂಶಯವುಳ್ಳ ವ್ಯಕ್ತಿಗೆ ಇಹ ಲೋಕದಲ್ಲಾಗಲಿ, ಪರ ಲೋಕದಲ್ಲಾಗಲಿ, ಎಲ್ಲೇ ಆಗಲಿ ಸುಖವೆಂಬುದು ಸಿಕ್ಕುವುದಿಲ್ಲ" (4.40) ಶ್ರದ್ಧೆ ಇಲ್ಲದೇ ಹೋದರೆ ಈ ಜಗತ್ತಿನಲ್ಲಿ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಈ ಲೋಕದಲ್ಲಷ್ಟೇ ಅಲ್ಲ ಪರ ಲೋಕದಲ್ಲೂ ಸಹ ಯಾವುದೇ ವಿಧವಾದ ಸಾಧನೆಯಾಗದು, ಏನೂ ಸಿದ್ಧಿಸಲಾರದು. ಇದು ನಿಜವಾದ ವಸ್ತುಸ್ಥಿತಿಯು, ಶ್ರದ್ಧೆ, ನಂಬಿಕೆ, ಭರವಸೆ ಇದ್ದಾಗ ಮಾತ್ರ ಇಹ ಲೋಕದಲ್ಲಾಗಲಿ, ಪರ ಲೋಕದಲ್ಲಾಗಲಿ ಏನಾದರೂ ಸಿದ್ಧಿ, ಸಾಧನೆ ಸಾಧ್ಯ. ಬದಲಾಗಿ ಕೇವಲ ಸಂಶಯಾತ್ಮನಾದವನು ಶೂನ್ಯದಲ್ಲಿಯೇ ಪರಿಭ್ರಮಣಗೈಯುತ್ತಾನೆ. ಯಾವುದೇ ಧನಾತ್ಮಕ ಸ್ಥಿತಿಯ ಸಿದ್ಧಿ ಆಗುವುದಿಲ್ಲ. ಹಾಗೆಂದು ಅನುಮಾನವನ್ನು ಸಂಪೂರ್ಣವಾಗಿ ತಳ್ಳಿ ಹಾಕಲಾಗುವುದಿಲ್ಲ, ವ್ಯಾವಹಾರಿಕ ಜ್ಞಾನದ ಕ್ಷೇತ್ರದಲ್ಲಿ ಅನುಮಾನದ ಪಾತ್ರ ಇದ್ದೇ ಇದೆ. ಉನ್ನತವಾದ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಮಾತ್ರ ಅದರ ಪಾತ್ರ ಇರುವುದಿಲ್ಲ. ಅಷ್ಟೇ ಅಲ್ಲ ಅದು ಅವರೋಧಕವಾಗುವುದು. ಏಕೆಂದರೆ ಅಲ್ಲಿ ಸತ್ಯಾಸತ್ಯಗಳ

ಸಮತೋಲನದ ಪ್ರಶ್ನೆ ಇರುವುದಿಲ್ಲ. ಅಲ್ಲಿ ಸತ್ಯದ ಉತ್ತರೋತ್ತರ ಪ್ರಗತಿ ಪೂರ್ಣ ಸಾಕ್ಷಾತ್ಕಾರವಾಗುತ್ತ ಹೋಗುವುದು. ಬೌದ್ಧಿಕ ಜ್ಞಾನದಲ್ಲಿ ಅಸತ್ಯ ಹಾಗೂ ಅಪೂರ್ಣತೆಯ ಮಿಶ್ರಣ ಇದ್ದೇ ಇರುವುದು. ಇಂಥ ಪ್ರಸಂಗದಲ್ಲಿ ಸಂದೇಹ ಪೂರ್ಣವಾದ ಮುಕ್ತಿಯ ಮೂಲಕ ಹುಡುಕುತ್ತ ಸಂದೇಹವನ್ನು ನಿವಾರಣೆ ಮಾಡಿಕೊಳ್ಳಬೇಕು. ಆದರೆ ಉನ್ನತ ಜ್ಞಾನದಲ್ಲಿ ಅಸತ್ಯದ ಪ್ರವೇಶವೇ ಇರುವುದಿಲ್ಲ; ಬುದ್ಧಿಯು ಒಂದಲ್ಲ ಒಂದು ಅಭಿಪ್ರಾಯಕ್ಕೆ ಅಂಟಿಕೊಳ್ಳುತ್ತ ಅದನ್ನೇ ಆಗ್ರಹಿಸುವ ಸ್ವಭಾವ ಹೊಂದಿರುವುದು. ಶ್ರೇಷ್ಠ ಜ್ಞಾನದಲ್ಲಿ ಬರುವ ಪ್ರಶ್ನೆಗಳಿಗೆ ಬುದ್ಧಿಯು ಯಾವ ಸಮಾಧಾನವನ್ನೂ ನೀಡಲಾರದು. ಸತ್ಯದ ಅಧಿಕಾಧಿಕ ಸಾಕ್ಷಾತ್ಕಾರವಾಗುತ್ತ ಹೋದಂತೆ ಮಾತ್ರ ಸಂಶಯಗಳು ನಿರಸ್ತವಾಗುತ್ತ ಹೋಗುತ್ತವೆ. ಈ ವಿಷಯವಾಗಿ ಆಳವಾದ ಆಧ್ಯಾತ್ಮಿಕ ಶೋಧನೆ, ವ್ಯಾಪಕವಾದ ಜೀವನ ಇವುಗಳ ಅಗತ್ಯ ಇದೆ. ಯಾವ ಸತ್ಯದ ಸಾಕ್ಷಾತ್ಕಾರ ಇನ್ನೂ ಆಗಿಲ್ಲವೋ ಆ ಸತ್ಯಕ್ಕಾಗಿ ನಿರಂತರ ಪ್ರಯತ್ನ, ಸಾಧನೆ ಮಾಡಬೇಕು. ಇದು ಸಂಶಯದ ಮೂಲಕ ಸಾಧ್ಯವಾಗುವಂಥದಲ್ಲ, ಬದಲಾಗಿ ಶ್ರದ್ಧೆ, ಅಧಿಕ ಶ್ರದ್ಧೆ, ಅಧಿಕಾಧಿಕ ಶ್ರದ್ಧೆಯನ್ನೇ ನಾವು ಬೆಳೆಸಿಕೊಳ್ಳ–ಬೇಕಾಗುವುದು. ಶ್ರದ್ಧೆಯ ಮೂಲಕ ಸಿಗಬಹುದಾದ ಶ್ರೇಷ್ಠತರ ಸತ್ಯವು ಬುದ್ಧಿಯ ಮೂಲಕ ಸಿಕ್ಕಲಾರದು. ಅಷ್ಟೇ ಅಲ್ಲ ಸಾಕ್ಷಾತ್ಕಾರದ ಮೂಲಕ ಪ್ರಾಪ್ತಿಯಾಗಬಹುದಾದ ಸತ್ಯವು ಬುದ್ಧಿಯ ತರ್ಕಕ್ಕೆ ವಿರುದ್ಧವಾಗಿರುವುದೂ ಸಾಧ್ಯವಿದೆ. ಆದ್ದರಿಂದ ಬೌದ್ಧಿಕ ತರ್ಕ ಸರಣಿಯು ಪರಾತ್ಪರ ಸತ್ಯದ ಪ್ರಾಪ್ತಿಗೆ ಅವಶ್ಯವಿಲ್ಲ. ಸತ್ಯವನ್ನು ಸಾಕ್ಷಿ–ಪುರಾವೆಗಳ ಮೂಲಕ ಸಾಧಿಸಬೇಕಾಗಿಲ್ಲ. ಬದಲಾಗಿ ಆ ಸತ್ಯವನ್ನು ಆಂತರಿಕ ಜೀವನದಲ್ಲಿ ಅಳವಡಿಸಿಕೊಂಡು ಜೀವಿಸಬೇಕು. ಹೆಚ್ಚು ಹೆಚ್ಚಿನ ವಾಸ್ತವಿಕ ಸತ್ಯದ ಕಡೆಗೆ ನಾವು ಬೆಳೆಯಬೇಕು. ಕೊನೆಯದಾಗಿ ಹೇಳಬಹುದಾದ ಸತ್ಯವೇನೆಂದರೆ, ಪರಾತ್ಪರ ಸತ್ಯವು ಸ್ವಯಂಭೂ (ತಾನೇ ತಾನಾಗಿ ಇರುವ) ಆಗಿದ್ದು ಸ್ವಯಮೇವ ಪ್ರಕಟವಾಗುವಂಥದಾಗಿದೆ. ನಾವು ಸದ್ಯಕ್ಕೆ ವಾಸವಾಗಿರುವ ಅಜ್ಞಾನವು ಸತ್ಯದ ಭ್ರಮೆಯಿಂದ ಉತ್ಪನ್ನವಾಗಿದ್ದಲ್ಲ, ಅದು ತಾನಾಗಿ ಪ್ರಕಟವಾಗಿ, ಸಾಕ್ಷಾತ್ಕಾರವಾಗಿ ನಿಂತು ಅಜ್ಞಾನವನ್ನು ನೀಗುವುದು. ಅನುಮಾನ, ಸಂದೇಹ ಮುಂತಾದವುಗಳು ಈ (ಸತ್ಯದ) ದಾರಿಯನ್ನು ಹಿಡಿದು ಹೋಗಲು ಅಡ್ಡಿ ಮಾಡುವುದುಂಟು, ಅದನ್ನು ಪಡೆಯಲು ಅವರೋಧಿಸುವುದುಂಟು, ಇವೆಲ್ಲವುಗಳು ಹುಟ್ಟುವುದೇ ಅಜ್ಞಾನದಲ್ಲಿ. ಇಂದ್ರಿಯಾಧಾರಿತ, ಸಂಕೀರ್ಣ ಅಭಿಪ್ರಾಯಗಳ ಬಲೆಯಲ್ಲಿ ಸಿಕ್ಕಿಕೊಂಡ ಹೃದಯ ಮತ್ತು ಮನಸ್ಸುಗಳಿಂದ ನಿಮ್ಮ ಪ್ರಕೃತಿಯ ಕೇವಲ ಅವಭಾಸಿಕ ಸತ್ಯಗಳು – ಅಜ್ಞಾನ

ಸಂಭೂತ ಹೃತ್ ಸ್ಥಂ ಸಂಶಯಂ (4.42) – ಯಾವಾಗಲೂ ಉನ್ನತ ಸತ್ಯದ ಬಗ್ಗೆ ತಾಳುತ್ತಲೇ, ಪ್ರಶ್ನಿಸುತ್ತಲೇ ಇರುತ್ತವೆ. ಅಂಥ ಸಂಶಯಗಳನ್ನು ಜ್ಞಾನವೆಂಬ ಖಡ್ಗದಿಂದ ಕತ್ತರಿಸಬೇಕು, ಆತ್ಮ ಸಾಕ್ಷಾತ್ಕಾರ ಮಾಡಿಕೊಡಬಲ್ಲ ಜ್ಞಾನದ ಮೂಲಕ ಎಲ್ಲ ತರಹದ ಸಂಶಯಗಳನ್ನೂ ಪರಿಹರಿಸಬೇಕು. ಯೋಗಾಭ್ಯಾಸ ನಿರತನಾಗಿ ಅವುಗಳನ್ನು ಗೆಲ್ಲಬೇಕು ಎಂದು ಗೀತೆ ಹೇಳುತ್ತದೆ. ಯಸ್ಮಿನ್ ವಿಜ್ಞಾತೇ ಸರ್ವಂ ವಿಜ್ಞಾತಂ (ಬೃ–4.5.6) ಇದೇ ಗೀತೆಯ ನಿಶ್ಚಿತ ಅಭಿಪ್ರಾಯವಾಗಿದೆ (4.42).

ಯೋಗವನ್ನಾಶ್ರಯಿಸಿ ನಿತ್ಯ ಸಾಧನೆ ಮಾಡುವುದರಿಂದ ನಮಗೆ ಲಭಿಸುವ ಜ್ಞಾನವು ಬ್ರಹ್ಮ ಜ್ಞಾನವೇ ಆಗಿದ್ದು, ಬ್ರಹ್ಮನಲ್ಲಿಯೇ ಸ್ಥಿತನಾಗಿ ಬ್ರಹ್ಮನನ್ನೇ ಕಾಣುವ ಅದ್ವೈತ ಸಿದ್ಧಿಯಾಗುವುದು. ಬ್ರಹ್ಮವಿದ್ ಬ್ರಹ್ಮಣಿ ಸ್ಥಿತಃ (5.20) ಇದನ್ನು ಕೇವಲ ಒಂದು ದರ್ಶನ, ಒಂದು ಜ್ಞಾನದ ಪ್ರಕಾರ ಅಥವಾ ಬ್ರಹ್ಮನ ಹೊರತಾಗಿ ಬೇರೇನೂ ಅರಿವಾಗದಿರುವ ಬ್ರಹ್ಮ ಪ್ರಜ್ಞೆ ಎಂದು ತಿಳಿಯಬಾರದು, ಬದಲಾಗಿ ಎಲ್ಲದರಲ್ಲೂ ಬ್ರಹ್ಮನೇ ಕಾಣುವುನು ಎಲ್ಲದರಲ್ಲೂ ತನ್ನ (ಪರಮ) ಆತ್ಮವೇ ಕಾಣಿಸುವುದು. ಪ್ರಾಪಂಚಿಕವಾಗಿ ಯಾವ ವಸ್ತುವಿನ ಜ್ಞಾನವೂ ಲೋಪವಾಗುವುದಿಲ್ಲ; ಜಗತ್ತು ಮತ್ತು ಅಲ್ಲಿರುವ ವೈವಿಧ್ಯಮಯ ವಸ್ತುಗಳೂ ಕಾಣುತ್ತವೆ, ಅವುಗಳ ಗುರುತೂ ಸಹ ಸಿಕ್ಕುತ್ತದೆ. ಆದರೆ ಮುಖ್ಯವಾಗಿ ಅವುಗಳಲ್ಲಿರುವ ಬ್ರಹ್ಮ ಸ್ವರೂಪದ ಸಾಕ್ಷಾತ್ಕಾರವಾಗುತ್ತದೆ. ಬ್ರಹ್ಮ ಜ್ಞಾನಿಗೆ ಲೋಕವೇ ಕಾಣಿಸುವುದಿಲ್ಲ ಎಂಬ ತಪ್ಪು ತಿಳುವಳಿಕೆ ಅನೇಕರಲ್ಲಿದೆ. ಅದು ಸಲ್ಲದು, ಅದು ಅಸಮರ್ಪಕ – ಪ್ರಪಂಚದ ಎಲ್ಲ ವಸ್ತುಗಳಲ್ಲಿಯೂ ಇರುವ ಬ್ರಹ್ಮ ತತ್ತ್ವವು ಬ್ರಹ್ಮಜ್ಞಾನಿಗೆ ಸಹಜವಾಗಿ ನಿರಂತರವಾಗಿ ಕಾಣುತ್ತದೆ. ಗೀತೆಯು ಇದನ್ನು "ಅಸ್ತಿತ್ವದಲ್ಲಿರುವ ಎಲ್ಲ ವಸ್ತುಗಳೂ ಮೊದಲು ಆತ್ಮನಲ್ಲಿ ಕಾಣುವುವು: ಆನಂತರ ನನ್ನಲ್ಲಿ (ಈಶ್ವರನಲ್ಲಿ) ಕಾಣುವುವು" ಎಂದು ಹೇಳುತ್ತದೆ (4.35). ಇನ್ನೊಂದು ಸಂದರ್ಭದಲ್ಲಿ "ಇನ್ನೂ ವ್ಯಾಪಕವಾಗಿ" ಯೋಗಮುಕ್ತನಾದತನಿಗೆ ಸರ್ವತ್ರ ಸಮದೃಷ್ಟಿ ಇರುತ್ತದೆ. ಎಲ್ಲ ಜೀವಿಗಳನ್ನು ತನ್ನ ಆತ್ಮದಲ್ಲಿ, ತನ್ನ ಆತ್ಮವನ್ನು ಎಲ್ಲ ಜೀವಿಗಳಲ್ಲಿಯೂ ಕಾಣುತ್ತಾನೆ. ಎಲ್ಲೆಡೆಯಲ್ಲಿಯೂ ನನ್ನನ್ನು, ಎಲ್ಲರಲ್ಲೂ, ಎಲ್ಲದರಲ್ಲೂ ನನ್ನನ್ನೇ ಕಾಣುತ್ತಾನೆ. ಅವನು ಸದಾ ನನ್ನೊಳಗೇ ಜೀವಿಸುತ್ತಾನೆ, ನನ್ನಿಂದ ದೂರಾಗುವುದಿಲ್ಲ. ನಾನು ಸಹ ಅವನಿಂದ ದೂರಾಗುವುದಿಲ್ಲ. "ಎಲ್ಲ ಜೀವರಾಶಿಗಳಲ್ಲಿ ನನ್ನನ್ನೇ ಕಾಣುವ, ನನ್ನನ್ನೇ ಪ್ರೀತಿಸುವ ಯೋಗಿಯನ್ನು, ಎಲ್ಲಿಯೇ ಇರಲಿ, ಹೇಗೆಯೇ ಇರಲಿ, ನನ್ನೊಳಗೆಯೇ ಜೀವಿಸುತ್ತಾನೆ. ಸುಖ ದುಃಖ ಏನೇ ಇರಲಿ ಎಲ್ಲರನ್ನೂ ತನ್ನಂತೆಯೇ ಭಾವಿಸುವ,

ಸಮ ದೃಷ್ಟಿಯ ವ್ಯಕ್ತಿಯನ್ನು ನಾನು ಪರಮ ಯೋಗಿಯೆಂದೇ ಭಾವಿಸುತ್ತೇನೆ" (6.29–32) ಎಂದು ಗೀತೆ ಹೇಳುತ್ತದೆ. ಇದೇ ಪುರಾತನವಾದ ವೇದಾಂತಿಕ ಜ್ಞಾನ, ಉಪನಿಷತ್ತುಗಳು ಹೇಳುವುದು ಇದನ್ನೇ, ಈ ಆದರ್ಶ ಹಾಗೂ ತತ್ತ್ವವನ್ನೇ ಗೀತೆ ನಮ್ಮ ಮುಂದೆ ಸದಾ ಇರಿಸುತ್ತದೆ. ನಂತರದ ವೇದಾಂತದ ನಿರೂಪಣೆಗಳಲ್ಲಿ ಗೀತೆಯೆ ಈ ಮಹಾಜ್ಞಾನವನ್ನೇ ದಿವ್ಯ ಜೀವನದ ತತ್ತ್ವಾದರ್ಶವೆಂದು ಬಣ್ಣಿಸಲಾಗಿದೆ. ಗೀತೆಯು ಯಾವಾಗಲೂ ಈ ಏಕತೆಯ ಜ್ಞಾನ ಮತ್ತು ಕರ್ಮ ಯೋಗಗಳ ನಿಕಟ ಸಂಬಂಧವನ್ನು ಒತ್ತಿ ಹೇಳುತ್ತದೆ. ಜಗತ್ತಿನಲ್ಲಿ ಮುಕ್ತ ವ್ಯವಹಾರಕ್ಕೆ ಈ ಏಕತೆಯ ಜ್ಞಾನವೇ ಆಧಾರವೆಂದು ಒತ್ತಿ ಒತ್ತಿ ಹೇಳುತ್ತದೆ. ಜ್ಞಾನದ ವಿಷಯ ಬಂದಾಗಲೆಲ್ಲ ಗೀತೆಯು ಸಮತ್ವವನ್ನು ಕುರಿತು ಅವಶ್ಯವಾಗಿ ಹೇಳುತ್ತದೆ. ಸಮತ್ವವು ಜ್ಞಾನದ ಫಲವಾಗಿದ್ದು ಸಮತೆಯ ಬಗ್ಗೆ ಹೇಳುವಾಗ ಗೀತೆಯು ಜ್ಞಾನವನ್ನು ಕುರಿತು ಹೇಳಿಯೇ ಹೇಳುತ್ತದೆ. ಸಮತ್ವಕ್ಕೆ ಜ್ಞಾನವೇ ಆಧಾರವಾಗಿದೆ. ಗೀತೆಯು ಹೇಳುವ ಸಮತ್ವವು ಕೇವಲ ಆತ್ಮ ವಿಮೋಚನೆ, ಆತ್ಮನ ನಿಷ್ಕ್ರಿಯ ಮೋಕ್ಷ ಸ್ಥಿತಿಯನ್ನು ಪ್ರತಿಪಾದಿಸುವುದಿಲ್ಲ. ಅದರ ಸಮತ್ವವು ಕರ್ಮದ ಆಧಾರ, ಮುಕ್ತನಾದ ಆತ್ಮನಲ್ಲಿರುವ ಬ್ರಾಹ್ಮೀ ಶಾಂತಿ, ನಿಶ್ಚಲತೆಗಳಿಗೆ ಈ ಸಮತ್ವವೇ ತಳಹದಿ. ಮುಕ್ತವಾದ ಪ್ರಕೃತಿಯಲ್ಲಿ ನಡೆಯುವ ಈಶ್ವರನ ವಿಶಾಲ, ಸ್ವಚ್ಛಂದ, ಸಮ, ವಿಶ್ವವ್ಯಾಪಕ ಕರ್ಮ ವ್ಯವಹಾರವೆಲ್ಲವೂ ಆ ಶಾಂತಿಯಿಂದಲೇ ಹೊರ ಹೊಮ್ಮುತ್ತದೆ. ಸಮತ್ವ ಹಾಗೂ ಜ್ಞಾನಗಳ ಸಮನ್ವಯವೇ ದಿವ್ಯ ಕರ್ಮ–ದಿವ್ಯ ಜ್ಞಾನಗಳ ಆಧಾರಭೂತ ನೆಲೆಯಾಗಿದೆ.

ಇಂಥವೇ ಆದರ್ಶ ಪರಿಕಲ್ಪನೆಗಳು ಭಾರತದ ಅನೇಕ ಬೇರೆ ಬೇರೆ ದಾರ್ಶನಿಕ, ನೈತಿಕ, ಧಾರ್ಮಿಕ ಜೀವನ ಪದ್ಧತಿಗಳಲ್ಲೂ ಇವೆ; ಆದರೆ ಗೀತೆಯಲ್ಲಿ ಇವುಗಳಿಗೆ ಹೆಚ್ಚಿನ ಮಹತ್ವ, ಆದ್ಯತೆ ನೀಡಿರುವುದು ಮೇಲು ನೋಟಕ್ಕೆ ಕಂಡುಬರುತ್ತದೆ. ಸಹನಶೀಲತೆ (ತಿತಿಕ್ಷಾ) ತಾತ್ವಿಕ ಉದಾಸೀನತೆ ಮತ್ತು ಸನ್ಯಾಸ ಇವು ಮೂರು ಸಮತ್ವದ ಅಧಿಷ್ಠಾನಗಳೆಂಬುದನ್ನು ಈಗಾಗಲೇ ನೋಡಿದ್ದೇವೆ. ಆದರೆ ಗೀತೆಯ ಜ್ಞಾನ ಯೋಗವು ಇವೆಲ್ಲವನ್ನೂ ಏಕೀಕರಿಸುವುದರ ಜೊತೆಗೆ ಅವುಗಳಿಗೆ ಆಳವಾದ, ವ್ಯಾಪಕವಾದ ಸಾರ್ಥಕತೆಯನ್ನು ಒದಗಿಸುತ್ತದೆ. ಸ್ಟೋಯಿಕ್ ಮತದ ಜ್ಞಾನವು ಸ್ಥೈರ್ಯದಿಂದ ಸ್ವಪ್ರಯತ್ನದಿಂದ ಆತ್ಮ ಪ್ರಭುತ್ವ ಸಾಧಿಸುವ ಆತ್ಮ ಸಾಮರ್ಥ್ಯದ ಜ್ಞಾನವು; ಅವರ ಸಮತೆಯು ಸ್ವ ಪ್ರಕೃತಿಯ ಜೊತೆ ಸೆಣಸಾಡಿ ಗೆದ್ದ ಸಮತೆಯು; ಬಂಡೇಳುವ ಪ್ರವೃತ್ತಿಯ ಪ್ರಕೃತಿಯನ್ನು ಸತತ ಎಚ್ಚರಿಕೆಯಿಂದ ನಿಯಂತ್ರಿಸಿ ಕಾಯ್ದುಕೊಂಡ ಸಮತೆ ಅದು. ಇದರಿಂದ ಉದಾತ್ತ ಶಾಂತಿ, ತಪಸ್ಸಿನ

ಸುಖ ದೊರೆತರೂ ಮುಕ್ತ ಆತ್ಮದ ಪರಮ ಸುಖ ದೊರೆಯುವುದಿಲ್ಲ. ಮುಕ್ತ ಆತ್ಮದ ಪರಮಾನಂದವು ಯಾವ ನಿಯಮದ ಸಾಧನೆಯ ಫಲವೂ ಅಲ್ಲ; ಅದು ದಿವ್ಯ ಸತ್ತೆಯ ಶುದ್ಧ, ಸುಲಭ, ಸಹಜ ಸ್ಥಿತಿಯಲ್ಲಿ ಜೀವಿಸುವುದರಿಂದ ಮಾತ್ರ ಸಿಗುತ್ತದೆ. ಅಲ್ಲಿ "ಅವನು ಏನೇ ಮಾಡಲಿ, ಹೇಗೆಯೇ ವ್ಯವಹರಿಸಲು, ಈಶ್ವರನಲ್ಲಿಯೇ ಇರುತ್ತಾನೆ, ವ್ಯವಹರಿಸುತ್ತಾನೆ." ಏಕೆಂದರೆ ಈ ಪೂರ್ಣತೆಯು ಸಾಧನೆಯ ಫಲವಲ್ಲ; ಇದು ತಾನಾಗಿ ಮೂಡಿ ಬಂದು, ಸ್ವಾಯತ್ತವಾಗಿ ತಾನೇ ತಾನಾಗಿ ಇರುವ ಸಹಜ ಸ್ಥಿತಿಯಾಗಿದೆ. ಇದು ಸಹಜವಾಗಿರುವುದರಿಂದ ಇದನ್ನು ಕಾಪಾಡಿಕೊಳ್ಳಬೇಕಾದ, ರಕ್ಷಿಸಿಕೊಳ್ಳಬೇಕಾದ ಪ್ರಮೇಯ ಇರುವುದಿಲ್ಲ. ಅದು ಜೀವನದ ಸಹಜ ಸ್ವಭಾವವಾಗಿರುವುದು. ಗೀತೆಯು ಮಾನವನ ಸಹನಶೀಲತೆಯನ್ನು ಪ್ರಯತ್ನವನ್ನು ಆರಂಭದ ನಿಮ್ನ ಪ್ರಕೃತಿಯ ಮೇಲಿನ ವಿಜಯದ ಆರಂಭದ ಹಂತದಲ್ಲಿ ಒಪ್ಪುತ್ತದೆ. ಇದು ಮೊದಲ ಹಂತದ ಸಾಧನೆ. ನಮ್ಮ ವೈಯಕ್ತಿಕ ಸಾಮರ್ಥ್ಯ ಶಕ್ತಿಗಳಿಂದ ಆತ್ಮ ಪ್ರಭುತ್ವ ಅಥವಾ ಆತ್ಮ–ನಿಯಂತ್ರಣ ಸಾಧ್ಯವಾದೀತು, ನಿಜ, ಆದರೆ ನಿಜವಾದ ಪ್ರಭುತ್ವ, ಸ್ವಾತಂತ್ರ್ಯ ಸಿದ್ಧಿಸುವುದು ಪರಮಾತ್ಮನೊಡನೆ ಏಕಾತ್ಮತೆ ಸಾಧಿಸುವುದರಿಂದ ಮಾತ್ರ ಸಿದ್ಧಿಸುತ್ತದೆ. ಏಕಮೇವನಾದ ಪರಾತ್ಪರ ಪುರುಷನಲ್ಲಿ ನಮ್ಮ ಅಸ್ಮಿತೆಯನ್ನು ವಿಲೀನಗೊಳಿಸುವುದರಿಂದ ಮಾತ್ರ ಸಾಧ್ಯವಾಗುತ್ತದೆ. ವೈಯಕ್ತಿಕ ಸಂಕಲ್ಪವನ್ನು ದೈವೀ ಸಂಕಲ್ಪದಲ್ಲಿ ಸಂಯುಕ್ತ–ಗೊಳಿಸುವುದರಿಂದ ಮಾತ್ರ ಸಾಧ್ಯವಾಗುತ್ತದೆ. ಪ್ರಕೃತಿ ಹಾಗೂ ಅದರ ಕರ್ಮಗಳಿಗೆ ಅಧೀಶ್ವರನೊಬ್ಬನಿದ್ದಾನೆ, ಅವನು ಪ್ರಕೃತಿಯ ಒಳಗೂ ಇದ್ದಾನೆ, ಮೇಲೆಯೂ ಇದ್ದಾನೆ. ಅವನೇ ಈಶ್ವರ, ನಮ್ಮ ಅಸ್ತಿತ್ವದ ಸರ್ವ ಶ್ರೇಷ್ಠ, ವಿಶ್ವವ್ಯಾಪಿಯಾದ ಆತ್ಮ ಅವನು. ಅವನೊಡನೆ ಒಂದಾಗುವುದೆಂದರೆ ನಮ್ಮನ್ನೂ ನಾವು ದೈವೀಕರಿಸಿ–ಕೊಂಡಂತೆಯೇ ಸರಿ, ಭಗವಂತನೊಡನೆ ಒಂದಾಗುವುದೆಂದರೆ ಸರ್ವ ಶ್ರೇಷ್ಠ ಸ್ವಾತಂತ್ರವನ್ನು ಪ್ರವೇಶಿಸಿದಂತೆಯೇ. ಸ್ಟೋಯಿಕ್ ಪರಿಕಲ್ಪನೆಯ ಆದರ್ಶವೆಂದರೆ ರಾಜರ್ಷಿಯು – ಅಂದರೆ ಮುನಿಯೂ ಹೌದು ರಾಜನೂ ಹೌದು – ಒಂದು ರೀತಿಯಲ್ಲಿ ಸ್ಟೋಯಿಕ್‌ನ ಈ ಪರಿಕಲ್ಪನೆಯು ವೇದಾಂತದ "ಸ್ವರಾಟ್, ಸಾಮ್ರಾಟ್" ಪರಿಕಲ್ಪನೆಯನ್ನು ಹೋಲುತ್ತದೆ, ಆದರೆ ಅದು ಕೆಳಗಿನ ಸ್ತರದ್ದು, ಸ್ಟೋಯಿಕ್ ಸಾಮ್ರಾಜ್ಯ ರಕ್ಷಣೆಯು ಬಲ ಪ್ರಯೋಗದ ಮೇಲೆ ಆಧಾರಿತವಾಗಿದೆ. ಆದರೆ ಯೋಗಿಯದು ಮುಕ್ತ ಸಾಮ್ರಾಜ್ಯ, ದಿವ್ಯ ಪ್ರಕೃತಿಯ ಸನಾತನ ಸತ್ತೆಯ ಸ್ವಭಾವ ಸಹಜ ಸ್ವಾತಂತ್ರ್ಯ, ಪ್ರಭುತ್ವ, ಯೋಗಿಯು ತನ್ನ ವಿಶ್ವವ್ಯಾಪಕ ಬಂಧನದ ಆಚೆಗಿರುವ

ಆತ್ಮದ ಜೊತೆ ಒಂದಾಗಿರುತ್ತಾನೆ. ನಿಮ್ಮ ಪ್ರಕೃತಿಯು ಅವನ ಸಾಧನ ಭೂತ ವಸ್ತು ಮಾತ್ರ ಆಗಿ ಉಳಿದಿರುತ್ತದೆ. ನಿಮ್ಮ ಪ್ರಕೃತಿಯ ಮೂಲಕವೇ ಅವನು ಕಾರ್ಯ ಮಾಡುತ್ತಾನಾದರೂ ಅವನು ವಾಸ್ತವವಾಗಿ ಉನ್ನತ ಪ್ರಕೃತಿಯ ಕ್ಷೇತ್ರದಲ್ಲಿಯೇ ಇರುತ್ತಾನೆ. ತನ್ನ ಪ್ರಭುತ್ವದ ಆಸನವನ್ನು ಬಲಪೂರ್ವಕವಾಗಿ ಕಾಯ್ದುಕೊಳ್ಳುತ್ತಾನೆ ಎಂದು ಭಾವಿಸಕೂಡದು. ಯೋಗವು ಎಲ್ಲ ವಸ್ತುಗಳ ಮೇಲೂ ಅಧಿಕಾರ ಹೊಂದಿರುವುದು. ಸ್ಟೋಯಿಕ್ ಸ್ವತಂತ್ರತಾ ಮತ್ತು ಗೀತಾ ಪ್ರತಿಪಾದಿತ ಸ್ವತಂತ್ರತೆಗಳ ನಡುವಿನ ಅಂತರವನ್ನು ಒಂದು ರೋಮನ್ ಸಂಸ್ಥೆಯ ವ್ಯವಸ್ಥೆಯ ಮೂಲಕ ಸ್ಪಷ್ಟಪಡಿಸಬಹುದು. ರೋಮನ್‌ರ ಪ್ರಕಾರ “ಸ್ಟೋಯಿಕ್ ಸ್ವಾತಂತ್ರ್ಯವು ವ್ಯಕ್ತಿಯನ್ನು (ಮೊದಲಿದ್ದ ಗುಲಾಮಗಿರಿಯಿಂದ) ಮುಕ್ತಗೊಳಿಸಿದಂಥ ಸ್ಥಿತಿ” ಅಂದರೆ ತನ್ನನ್ನು ಗುಲಾಮಗಿರಿಗೆ ಒಡ್ಡಿದ ಶಕ್ತಿ ಅಥವಾ ವ್ಯವಸ್ಥೆಯಿಂದ ಪಾರಾದ ಸ್ಥಿತಿ; ಅವನ ಸ್ವಾತಂತ್ರ್ಯವು ಅವನ ಯೋಗ್ಯತೆಯ ಆಧಾರದ ಮೇಲೆ ಪ್ರಕೃತಿ ನೀಡಿದ ಅವಕಾಶವೆಂದು ಅರ್ಥ. ಆದರೆ ಗೀತೆಯು ಹೇಳುವ ಸ್ವಾತಂತ್ರ್ಯ ಅಥವಾ ಮುಕ್ತಿಯು ನಿಜವಾದ ಮುಕ್ತಿಯಿದ್ದಂತೆ, ಏಕೆಂದರೆ ಅದು ನಿಮ್ಮ ಪ್ರಕೃತಿಯಿಂದ ಪಾರುಗಾಣಿಸಿ ಉನ್ನತ ಪ್ರಕೃತಿಯಲ್ಲಿ ಪ್ರವೇಶ ನೀಡುವ ಅವಕಾಶವಾಗಿದೆ. ಉನ್ನತ ಪ್ರಕೃತಿಯ ಸ್ತರದಲ್ಲಿ ದೈವತ್ವ ತಾನೇ ತಾನಾಗಿದೆ. ಅದು ಸ್ವಯಂಭೂ ಅಂದರೆ ಯಾವುದರ ಮೇಲೆಯೂ ಆಧಾರಿತವಾಗಿರದ ನಿರಪೇಕ್ಷ ಸ್ತರವಾಗಿದೆ. ಅವನು ಏನೇ ಮಾಡಲಿ, ಹೇಗೆಯೇ ಜೀವಿಸಲಿ, ಮುಕ್ತವಾದ ಅವನ ಆತ್ಮವು ಭಗವಂತನಲ್ಲಿಯೇ ನೆಲೆಸಿರುತ್ತದೆ. ಅವನು ಸ್ವಾತಂತ್ರ್ಯವನ್ನು ಸಹಜವಾಗಿ ಶಿಶುವಾಗಿರುವಾಗಿನಿಂದಲೇ ಪಡೆದ ಸ್ವಂತ ಹಕ್ಕು ಎಂಬಂತೆ ಪಡೆದುಕೊಳ್ಳುತ್ತಾನೆ. ಅವನು ಬಾಲವತ್ ಅಂದರೆ ಶಿಶುವಿನಂತೆ, ಅವನು ತಪ್ಪು ಮಾಡುವುದಿಲ್ಲ, ಎಡವುವುದಿಲ್ಲ, ಅವನು ಪರಿಪೂರ್ಣನು, ಅವನು ಸರ್ವಾನಂದಮಯನು, ಸರ್ವಪ್ರಿಯನು, ಸರ್ವಸುಂದರನು, ಅವನು ಅನುಭವಿಸುವ “ರಾಜ್ಯಂ ಸಮೃದ್ಧಂ” (6.39) ಗ್ರೀಕ್ ಮನೀಷಿ ಹೇಳುವಂತೆ “ಬಾಲ ರಾಜ್ಯ ಅಥವಾ ಶಿಶು ಸಾಮ್ರಾಜ್ಯ”ವಾಗಿರುತ್ತದೆ.

(ಸಶೇಷ)

## ಶ್ರೀ ಅರವಿಂದರ
# ‘ಪ್ರೇಮ ಮತ್ತು ಮೃತ್ಯು’

**– ಅನು: ಸಮಷ್ಟಿ**

## ದೃಷ್ಟಿ 4

### ನಿಶಾವತರಣ
### ಗಂಗಾದ್ವಾರದೆಡೆ

ಹಿಮಾಚ್ಛಾದಿತ ಮೇರುಗಿರಿಶಿಖರ ಸ್ಥಿತರಿಹ ಪ್ರಣವತರಂಗಿಣಿ ಪುಷ್ಪಭದ್ರೆಯರು
ನೀರ್ಗಲ್ಲ ನಿಲಯದಿಂದಿಳಿದು, ಬೋರ್ಗಲ್ಲ ಬಾವಿಗಳಿಂ ಸುಳಿದು
ಚಕ್ರತೀರ್ಥದೊಲಿಹ ಚಕ್ರವಿಕ್ರಮದ ಕ್ರಮ–ಮಾರ್ಗದಲಿ ತಿರುವುಮುರುವಾಗಿ ತಿರುಗಿ
ನಾಗರಬಂಧದದಲಿ ಹೆಡೆಯರಳಿ ಹೊಡೆಮರಳಿ ಸುತ್ತಿಸುರುಳಿಯಲಿ ನೈರುತ್ಯದೆಡೆ
ಹೊರಳಿ
ನೆಲದ ನೀರಡಿಕೆಯನು ನೀಗಿಸಿಹವು. ನೆಲೆಸಿಹರ ನೇತ್ರಗಳನೇ ನಗಿಸಿಹವು.
ಕೆಸರಿನೊಳು ಕುಸಿರುಕುಸಿರಾಗಿಹ ಹಸಿರಿನ ಬಸಿರಿಗೆ ಉಸಿರನಿತ್ತು ಹೆಸರಾಗಿಹವು
ಮರುದ್‌ವೃದಾ, ಅಸಿಕ್ನಿ, ಚಂದ್ರಭಾಗಾ, ಪರುಷ್ಣಿ, ವಿಪಾಶಾ, ವಿತಸ್ತಾ, ಶುತುದ್ರಿ,
ಇರಾವತಿ, ಗೋಮತಿ, ರಸಾ, ಸುಸರ್ತು, ಕ್ರುಮು, ಮೆಹತ್ನು, ಕುಭಾ, ಅನಿತಭಾ,
ಶ್ವೇತಿ, ಸುವಾಸ್ತಾ, ಪಂಚಗೌರಿ, ತ್ವಷ್ಟಾಮಾ ಎಂಬಿತ್ಯಾದಿಯಿಹ ನಾಮಾಂಕಿತಗಳನೆ
ಹೊಂದಿಹವು,
ಸಂದಿ–ಗೊಂದಿಯಲಿ ಸರಿದು ಸಂಧಿಹವು, ಸಂಗಮವೆಂಬೊಂದು ಸಂಧಾನದಲಿ
ಸಂದಾಯಗೈದಿಹವು
ಸಾಧನೆಯೆಂಬಂತೆ ಸಿಂಧುವಿನೊಳಗೊಂದಾಗಿ ಸಾಂತ–ನಿತಾಂತವಾಗಿ
ಸರಿದಿಹವು. ಸಿಂಧುಸಾಗರವನೇ ಸೇರಿಹವು.
ತೆರೆತೆರೆಯಾಗಿತಣಿಸುತ, ತೊರೆತೊರೆಯಾಗಿ ತೋಯಿಸುತ, ತಾವೇ ತಾವಾಗಿ
ತನ್ಮಯಿಸುತ
ಹರಿಯುತ ಧರೆಗೆ ಹರೆಯನಿತ್ತ ಇರಾವತಿಯೋರೆಯರ ಸಾಲಿನಿಂದ ಸುವರ್ಣಮಯವಿಹ
ಸೌದಾಮಿನಿಯಂಗಳವದು ಬ್ರಹ್ಮಾವರ್ತವೆಂದು ಬಗೆದಿಹುದು, ಮುಂಬರಿದು
ಆರ್ಯರಧಿಪತ್ಯದಿ
ಆರ್ಯಾವರ್ತವೆಂದಾಗಿ, ಅರಿಗಳೆದೆಯಲಿ ಆರಂಕುಶವನಿಟ್ಟಿಹುದು, ಕಾಲಾಂತರದಿ
ಕುಲಸಂಭವರೆಲ್ಲ

ಕುಲಕಲಂಕಿತರೆಂದೆನಿಸಿರಲು ಸಪ್ತಸಾಮ್ರಾಜ್ಯಗಳಾಗಿ ಸರಿದು ಸಪ್ತಸಿಂಧುವೆಂದಾಗಿ
ಸಾಂಪ್ರದಾಯಿಕವಿಹುದು;
ಅಂದಾಗಿ ಮುಂದಾಗಿ ಅಂದಗೇಡಿಯಾಗುತ ಸುಂದಾಗಿ ಮುಂಬರಿದು ಮತ್ತೆ
ಒಂದಾಗಿ ಸುಂದರವಿಹ
ಸಪ್ತಸೈಂಧವದಿಂದ ಸರಿದು ಬರಿಗಾಲಿಗನಾದ ರುರುವಿನ ಸುಮಯಾತ್ರೆಯದು
ಸವೆದಿತ್ತು.
ಸರಸ್ವತ್–ಸಾಗರದ ಪೂರ್ವದಿಶೆಗೊತ್ತಿ ಪಯಣಿಸಿತ್ತು, ದೃಷದ್ವತಿ ಧಾಮದ
ಆಗ್ನೇಯದೆಡೆಗೊತ್ತಿ ಅವರೋಹಿಸಿತ್ತು.
ಆರ್ಯಾವರ್ತದಿಂ ಆಪೋಶಿತಗೊಳ್ಳದ ಅಪಾಯದ ಆವಾಸ ತಾಣವಿಹ
ದಸ್ಯುದೇಶದೆಡೆಗದು ದೌಡಾಯಿಸಿತ್ತು.
ಗಂಗೆ ಯಮುನೆಯರ ಮಧ್ಯದಿ ಫಲವಿಡಿದ ಕ್ರೂರಕಾಡಿನ ಕರ್ಕರದಿ ಮೂಕಮಲೆಗಳ
ಮರ್ಮರದಿ
ದಟ್ಟಕಾನನದಿ ಕಣ್ಣಿಗೆ ಕಾಣದಂತೆ ಕುಳಿತ ಕೃಷ್ಣಕಾಯರು ಕಟ್ಟಿಹರು ದಾಸವಂಶದ
ದುರ್ಭೇಧ್ಯಧಾಮಗಳನು
ಕಿರಾತ,ಕೀಕಟ, ಶಿಮ್ಯು, ಶಿಗ್ರು, ಪುಳಿಂದ, ಪೌಂಡ್ರವೆಂಬಾದಿಯಾದ ಕೃಷ್ಣವರ್ತನಿಗಳ
ಕಾರಸ್ಥಾನಗಳನು.
ಅಹಿವೃತ್ರನ ಅಭಿದಾನವಿಹ ಮಹಾಸರ್ಪದಾರಾಧಕರು, ನಾಗಪ್ರತಿಮಾ ವಿಚಾರದ
ವಂದ್ಯಕರಿವರು.
ರೂಕ್ಷವಾಗಿಹನು (ರಾಗಿಹನು) ರುಕ್ಷಾದಿಗಳಿಂದ ರಕ್ಷಿಸುತಿಹ ವೃಕ್ಷಗಳನೇ
ಪೂಜಿಸುವ ಪ್ರಲಯಾಂತಕರಿವರು.
ಸುವರ್ಣದೇಹಿಯಿತ್ತ ಸುಮವನು ಹಿಡಿದು ಸಮ್ಮೋಹಿತನಾಗಿ ನಡೆದವನು
ಗಂಗಾದ್ವಾರದೆಡೆ ಮೊಗ ಮಾಡಿಹನು.
ಹಸೆಯೇರುವಾಗ ಹಳದಿ (ಸುವರ್ಣ) ಸೀರೆಯುಟ್ಟು ನಲಿವ
ವಧುವಂತಿಯೊಲು ಅರಿಶಿಣಾಂಭರಣದ ಹೊನಲಾಗಿ
ಹರಿದು ಹುಮ್ಮಸ್ಸಿನಲಿಹ ಗಂಗೆಯ ದ್ವಾರದೆಡೆಗೊಯ್ದು ಗರುಡಗಂಬದೊಲು
ಗಂಭೀರವದದನಾಗಿ ನಿಂದನವ ರುರು.
ದಿನಗೂಲಿಗನಾಗಿ ದುಡಿದ ದಿನಕರನವ ಸಪ್ತಾಶ್ವಗಳ ಕೊರಳರಿದು ನೊಗವಿಳಿಸಿ
ನಿದ್ರಿಸಲೆಂದು ನಿಶೆಯೆಡೆಗೋಡುವ ಸಾಯಂ–ಸಂಧ್ಯಾ ಸಮಯದಲಿ
ಸಾವಿರಲೆಗಳೆಂಬ ಸೆರಗಿನ ಸೀರೆಯುಟ್ಟು ಸೀಮಾಂತವನೆ ಸೂರೆಗೈಯುತ್ತ
ಸುಳಿಯುತ್ತಿದ್ದಳು ಸುರಗಂಗೆ

ಮೋಡದೊಡ್ಡದು ಒಡೆದಂತೆ ಕಡಲಗರ್ಭವದು ಕೆನೆದಂತೆ ಘೂರ್ಣಿಸಿದ್ದಳವಳು
ಗಂಗಾಘಹಾರಿಣಿ.
ಗೊಂಡಾರಣ್ಯದೊಳಗಿಂದ ಗಂಭೀರತನಳಾಗಿ ಗಮಿಸುವಳ ಸೀಳುದಾರಿಯ
ಸೀಮೆಯಲಿ ಸುಗೋಚರವಿಹುದೊಂದು
ತೆರೆತೆಕ್ಕೆಯೇರಿದ ಬಿಳಿರೆಕ್ಕೆಯ ಪತಂಗ ರಥವೊಂದು. ಅದನೇರಿ ಚುಕ್ಕಾಣಿ
ಹಿಡಿದಿಹನೋರ್ವ ಶ್ವೇತವಸ್ತ್ರಧಾರಿ ನಾವಿಕ.
ಅಮೃತಶಿಲೆಯ ಅಮರಮೂರ್ತಿಯೊಲಿದ್ದವನ ಅಂತಃದೃಷ್ಟಿಯ ಅಂಕೆಗೊಳಪಟ್ಟು,
ತರಂಗಿಸುತಿಹ ತರಂಗಿಣಿಯ ತೆರೆಮೇಲೆ ತೂಗುಯ್ಯಾಲೆಯಿಡುತಿಹ
ತರಣಿಯನೇರಿದನವ ತರುಣ

**ಸ್ತರ – ಪಾತಾಳಗಂಗೆ**
**ಪ್ರಭೃತಿ – ಶ್ವೇತನಾವಿಕ**

ಗಂಗಾದ್ವಾರದೆಡೆಯಿಂದ ದೌಡಾಯಿಸಿದ ದೋಣಿಯದು ಲಹರಿಯಲಿ ಲಂಬಿಸುತ
ಲಗ್ಗೆಯಿಟ್ಟಿತ್ತು.
ಜಲದಾರಿಯಲಿ ಜಲಧಾರೆಯಿಹ ಜಾಲಂಧರವೊಂದು ಜನಿಸಿ ಜಲದಾಳದೊಳು
ಜಗ್ಗುತಿಹ ಜಾಗವೊಂದಿತ್ತು.
ಗಂಗಾಪಥವು ಪತನವಾಗುತ್ತ ಪಾತಾಳದೆಡೆಗೆಂದು ಪಯಣಿಸುವ
ಪಾತಾಳಗಂಗೆಯ ಪ್ರಾರಂಭವಾಗಿತ್ತು.
ಅಧಿಕ್ರಮದಿ ಅಧಿರೋಹಿಸುತ ನೀರೊಳಗಿಳಿದು ನದಿಯಾಳದ ನೆಲೆಯಿರದ
ನಿತಾಂತದೆಡೆ ನಡೆದಿತ್ತದು ನಾವೆ.
ನೀರೊಳಗಿಳಿದ ನರನೆದುರು ನೆರೆದಿತ್ತು ನೀರ್ಮುಗಿಲ, ನೀರಾಕಾಶ, ನಿರಾಕಾರವಿಹ
ನೀರ್ದಂಡೆ
ನಿರ್ಮಲವಿಹ ನೀರ್ನೆಲ, ನರನರದಲ್ಲೂ ನೀರು ನೀರಾಗಿಹ ನಿರ್ವಯಲ,
ನೀರಡಿಯ ನೀರ್ಗಲ್ಲು;
ನೀರ್‌ನಾವಿಕನ ನಿರ್ದೇಶನವನೇ ನಿರ್ಣಯವೆಂದೆಣಿಸಿ ನಿರ್ದೋಷಿಯಿಹ
ನೀರ್ದೋಣಿಯದು
ನೂರಾಳು ನೀರಡಿಯನಿರ್‌ಬ್ರಹ್ಮದ ನಿರಾಳದಲಿ ನೀರ್ಕುಡಿದಿಹ ನಿರಾಶೆಯ
ನಿಶೆಯೆಡೆಗೆ ನಿರ್ಗಮಿಸುತ್ತಿತ್ತು.
ಕತ್ತೆತ್ತಿರಲು ಎತ್ತಲೆತ್ತಲೂ ಬರಿಯ ಕತ್ತಲಿರುವ ಬತ್ತಲಬಾವಿಯೊಳಗೆ ಭ್ರಮಿಸುತ್ತಿತ್ತು.

ಕಣ್ಮುಚ್ಚಿ ಕಾಣುವ ಕನಸಿನೊಳು ಕಾಲಿಡುವ ಕಾವಳಕ್ಕಿಂತಲೂ ಕಾಳವಿಹ
ಕರಾಳದಲಿ ಕ್ರಮಿಸುತ್ತಿತ್ತು.
ಚುಕ್ಕಾಣಿ ಹಿಡಿದ ಶ್ವೇತನಾವಿಕನವ ಸುತ್ತುಹಾಕುತ ಬಂದು ಮುತ್ತಲೆಣಿಸಿದ
ಸಾವಿರಸುಳಿಗಳ ಸುತ್ತಿ ಸಂಭಾಳಿಸುತಿರಲು
ತಳವಿರದ ಪಾತಾಳದೆಡೆ ಪರಿಭ್ರಮಿಸುವ ಪ್ರೇಮಯಾನವದು ಪ್ರಲಯವನೇ
ಪ್ರತಿರೋಧಿಸುತ ಪೂರ್ಣಗೊಂಡಿತ್ತು.
ನಿರಾಳದಲಿ ನರಳಿದವನ, ಕರಾಳದಲಿ ಕೆರಳಿದವನ ಕಣ್ಣೆದುರು ಕಾಣುವ
ಕಗ್ಗತ್ತಲ ಕಾವಳವದು
ಮತ್ತೂ ಮಂದವಾಗುತ ಸುತ್ತೆಲ್ಲ ಮುತ್ತಿತ್ತು, ಪ್ರಬಲವಿಹ ಕಡಲೊಂದರ
ಪ್ರಕ್ಷುಬ್ಧತೆಯದು ಕರ್ಣದಲಿ ಕೇಳಿತ್ತು.
ಕಾಲದಲಿ ಕಾದಿದ್ದ ಕಗ್ಗತ್ತಲವಿಹ ಕಡಲೊಂದು ಕಾಲಡಿಯಲಿ ಕಾಣದಂತೆ ಕೂತಿತ್ತು.
ಭೂತಳದಿಂದ ಪಾತಾಳದ ಪರ್ಯಂತದೊರೆಗೆ ಪಯಣಿಸುವನ ಪಾಲುದಾರನಾಗಿದ್ದ
ಶ್ವೇತಮೂರ್ತಿಯವ
ಮಾರ್ಗಪರಿಣಾಯತನವನು ಪೂರ್ಣಗೊಳಿಸಿ ನಕ್ಷತ್ರಲೋಕದೆಡೆ ನೇತ್ರಗಳ ನೆಟ್ಟಿ
ನಿಂತಿರಲು
ನಾವಿಕನ ನೋಟವನರಿತ ರುರುವು ನಾವೆಯಿಂದಿಳಿದು ನೂರ್ಮಡಿಸಿಹ
ನಿಶಾಕಡಲಿನೆಡೆ ನೋಡುತ್ತ ನಿಂದಿರಲು,
ನಾವೆಯದು ನೇರವೇರಿ ನಡೆದಿತ್ತು, ಸುತ್ತುವ ಸುಳಿಯೆಡೆಗೆ ಸೇರಿತ್ತು, ಮತ್ತೆ ಮೇಲೆರಿತ್ತು.
ನೋಡನೋಡುವನಿತರೊಳು ನೀರಮೇಲ್ಗಡೆ ಏರಿತ್ತು, ಮೇಲೇರಿ ಮರೆಯಾಗಿತ್ತು,
ಮನುಲೋಕದೆಡೆ ಮುಟ್ಟಿತ್ತು.

**ಸ್ತರ – ಮತ್ಸ್ಯಕನ್ಯೆಯರ ಮಹಾಸಾಗರ**
**ಪ್ರಭೃತಿ – ಮೂರುಮೊಗವಾಡದ ಮಹಾದೇವತೆ**

ಏಕಾಂಕದೊಲಿರುವ ಏಕಾಂತದಲಿ ಏಕಾಂಗಿಯಾಗಿ ನಿಂದವನ ಬಳಸಿ
ಬೆಳೆದಿತ್ತೊಂದು ಬೃಹತ್–ಸಾಗರ.
ಮಂದ್ರಯುತ ಮಂಜಿನೊಲು ಮಸುಕುಮಸುಕಾಗಿಹ ಬೂದುವರ್ಣದ
ಬೃಹದ್ಸಲಿಲದಲಿ ಬಂಧಿತನಾದ
ರುರುವವನು ಕಡಲಾಳದಲಿ ಕವಿದಿರುವ ಕರಾಳಮಯ ಕತ್ತಲಿಗೆ ಕಟ್ಟೆಚ್ಚರವನಿಟ್ಟು,
ಕೂಗಿದನು,

“ಅಮರವಿರದ ಆತ್ಮಗಳನು ಆರಾತಿಗಳೆಂದು ಅರಿತವುಗಳನು ಅಸ್ಪಷ್ಟವಿಹ
ಅಡಿಯೊಳಗೆ ಅವಿತಿಡುವ
ಪಾತಾಳದಡಿಯ ಪಾರಾವಾರವೇ, ನಿನ್ನ ಅನಂತಾಬ್ಧಿಯ ಅಂಗಣದಲ್ಲಿ
ಅಂಗಲಾಚುತಿಹ
ಪ್ರೇಮಿಗಳಿಹ ಪ್ರಾಕಾರದೆಡೆಗೆ, ಪ್ರಾಣತೆತ್ತ ಪೂರ್ವಿಕರ ಪ್ರಾಂಗಣದೆಡೆಗೆ
ಪಯಣಿಸಲಿರುವ ಪ್ರಪಾತದ
ಪೌಳಿಗಳನಿಲ್ಲಿ ಪ್ರದರ್ಶಿಸು, ಪಾದಗಳಿಡಲು ಪ್ರಯೋಜನಕಾರಿಯಾಗುವಂತವುಗಳನು
ಪುನರ್ ನಿರ್ಮಿಸು.
ಗೋಳುಹುಯ್ಯುವ ಗೋಳಗಳಿಗೆ ಗುರಿಯಾಗಿ ಗುರುತಿರದೀ ಗುಂಭದಡೆ
ಗಮಿಸಿದ ಗಂಡು–ಹೆಣ್ಣುಗಳಿಲ್ಲಿ
ಅಪ್ರಕೇತದ ಸಲಿಲದೊಳಗೆ ಸೆರೆಯಾಗಿ ಸವೆಯುತಿಹ ಸಾವಿನರಮನೆಗೆ ಸೇರಲಿಹ
ಸುರಂಗದೆಡೆಗೆನ್ನ ಸೇರಿಸು
ಮರಣದ ಮಹಾಲಯದೆಡೆಗೆಂದು ಮಾರ್ಗದರ್ಶನವನಿತ್ತೆನ್ನ ಮುನ್ನಡೆಸು.
ಬಹುದಾರಿಗಳು
ಬಂದು ಬಂಧಿಸುವ ಭಾಗದಲಿ ನಿಂದು, ‘ಇದು ಈವೂರ ದಾರಿ, ಅದು ಆವೂರ
ದಾರಿ’
ಎಂದೆನುತ ದಣಿದವರೊಡನೆ ದಾಂಧಲೆಯೆಬ್ಬಿಸುವ ದರಿದ್ರದಾರಿಹೋಕನಲ್ಲ.
ಬದಲಿಗೆ
ಆರ್ಯನೆಲೆಯನು ಅಮರಗೊಳಿಸಿಹ ಕುಲಶ್ರೇಷ್ಠಕ್ಷಾತ್ರಬಲಕೆ ಬ್ರಾಹ್ಮಬಲವನೊದಗಿಸಿ
ಬ್ರಹ್ಮಾವರ್ತವನೇ ಬ್ರಹ್ಮನೆಲೆಯಾಗಿ ಬದಲಿಸಿಹ ಭಾರ್ಗವರ ಬಳ್ಳಿಯಾಗುತೊಗೆತಂದ
ಭೃಗುವರರ ಪೌತ್ರನಿಹೆನು, ಚ್ಯವನ ಭಾರ್ಗವರ ಪುತ್ರನಿಹೆನು.
ಊರಿಗೂರೇ ರುರುವೆಂದು ಕರೆದೊರೆದವರ ಕಂಗಳಿಗೆ ಕಾಂತಿಯಾದ
ಕಣ್ಮಣಿಯಾಗಿಲ್ಲಿ ಕಾದಿಹೆನು.
ಕೃಪೆದೋರಿ ಕ್ರೂರವಿಹ ಕರಿನೀರ ಕೇಂದ್ರದೆಡೆಗೆನ್ನ ಕಳಿಸಿ ಕನಿಕರಿಸು. ಇಗೋ, ನಿನ್ನೀ
ಕಗ್ಗತ್ತಲ ಕಾರಾಗೃಹದೊಲಿಹ ಕಡಲಿನಲೂ ಕರಗದಂತೆ ಕಾಂತಿಮಯವಾದ
ಕುಸುಮವಿದನು
ಕೊಂಡು ಅದರ ಜ್ವಾಲಾವೃತ ದಳಗಳ ದಾರಿಬೆಳಕಿನಲಿ ನಡೆದು ನನ್ನಾಕೆಯಿಹ
ನಿಲಯದೆಡೆ ನಿಲ್ಲುವೆನು.”

ಕಾಮನ ಕೈಯಿಂದ ಕೊಡಮಾಡಲ್ಪಟ್ಟ ಕಣ್‌ಕೋರೈಸುವ ಕಾಂತಿಯನೇ ಕರೆವ
ಕುಸುಮವನು
ಕಂಡೊಡನೆ ಕಂಡರಿಸಿದ ಕೆಂಡದಡಿ ಕಾಲಿಟ್ಟಂತೆ ಕಲಮಲಗೊಟ್ಟಿತ್ತದು ಕಡಲು.
ಪ್ರಾಣವಿಹ ಪಶುವೊಂದು ಪುಕ್ಕಲುತನದಿ ಪತರುಗುಟ್ಟುವೊಲು ಪ್ರಕ್ಷುಬ್ಧಗೊಂಡಿತ್ತದು
ಪಾರಾವಾರ
ಜೀವಂತವಿಹ ಜಂತುವೊಂದು ಜಂತಿಯನೇರಿ ಜತನದಿಂ ಜೀಕುತ
ಜೋಕಾಲಿಯಾಡುವಂತೆ,
ಆರೆತ್ತರಕೇರಿ ಅಪ್ಪಳಿಸಿತ್ತು. ಮೇಲ್ವಾಯ್ದು ಮುಂಬರಿದಿತ್ತು, ಮುಗಿಲನೇ
ಮಾರಂಗುಲದೊಳು ಮುಳುಗಿಸಿತ್ತು.
ಕಾಲವನೇ ಕೆಣಕಿ ಕೋಲಾಹಲವನೆಲ್ಲ ಕೂಡಿಕರೆದು ಕಣ್‌ದಿಟ್ಟಿಗೆ ಕಾಣದಂತಾಗಿತ್ತದು
ಕಡಲು.
ರುರುವನು ಬಳಸಿ ಬೃಹದೆತ್ತರಕೇರಿ ಶಿಖರವನು ಸುತ್ತಿದ ಮಹಾದೆರೆಗಳವು
ಮರುಕ್ಷಣವೇ ಮಣಿದು
ದ್ರೋಣಿಯೆಡೆ ಧುಮುಕಿತ್ತು. ಒಟ್ಟಾಗಿ ದಟ್ಟಾಗಿ ಅಟ್ಟಕೇರಿ ನೆಟ್ಟಕಿರುವವನು
ಚಟ್ಟಕೇರಿಸಲೆಂಬಂತವನನು
ತಟ್ಟಿ ತಳಕೊತ್ತಿದವು. ನೀರ್ನೆಲದ ನೆಲೆಯಲಿ ನೆರೆದು ನಿಂತ ನೀರ್ಮೇಘಗಳವು
ನೀರೆಯನು
ನೆನೆದು ನೀರುನೀರಾದವನ ನೇರ ನೀರಡಿಗೊತ್ತಿದವು. ನಿರ್ಮಾಯಘನದ
ನಿಶೆಯೆಡೆಗವನನು ನೂಕಿದವು.
ಚಾರುದಿಶೆಗಳೆಲ್ಲ ಚಂಚಲಗೊಂಡು ಚಕ್ರವಿಕ್ರಮಣದಿ ಚರಿಸಿತ್ತು, ರುರುನಿಂದ
ನೆಲೆಯನೇ ನೇರವಾಗಿಸಿ ನೆರೆದಿತ್ತು,
ಸುತ್ತುವರಿದಿಹ ಸರಸ್ಸಿನೊಳಗೊಂದು ಸುಳಿಯನೆಬ್ಬಿಸಿ ಸುರಂಗದೊಳಗಿಂದವನನು
ಸೆಳೆದೊಯ್ದಿತ್ತು.
ವಕ್ರತೀರ್ಥದ ವೇಗವದು ವರ್ಧಿಸುತ ಒಳಗೆಳೆದುಕೊಂಡವನನು ವಾರುಣದೊಳಗೆ
ಒಂದಾಗಿಸಿತ್ತು.
ಮೆದ್ದ ಮೊಲವೊಂದನ್ನು ಹೊದ್ದು ನಿದ್ದೆಹೋಗುವ ಹೆಬ್ಬಾವಿನಂತೆ, ನೀರಡಿಯ
ನೆಂಟನನು
ನುಂಗಿ ನೀರ್ಕುಡಿದ ನಿಶಾಕಡಲು ಮಹಾಬಿಲವಾಗಿ ಮೆರೆದು ಮರುಕ್ಷಣವೇ ಮಣಿದು

ಮುಚ್ಚಿಕೊಂಡಿತ್ತು. ಮೆಲ್ಲನೆ ಮುಂಬರಿವ ಮಹೋಧದಿಯಂತೆ ಮೆತ್ತಗಾಗುತ
ಮೇಲ್ವಾಯ್ದಿತ್ತು.
ಸುರಲೋಕಕೆ ಸೆಡ್ಡೊಡೆದ ಸುಂದರಾಂಗನವ ಸಲಿಲದಾಳದೊಳು ಸೆರೆಯಾಳಾಗಿ
ಸರಿದಿದ್ದ.
ಮಹೋಧದಿಯ ಮಹಾಕಾರ್ಯವಿದನು ಮನಗಂಡು ಮಹಾದೇವತೆಗಳೆಲ್ಲ
ಮಂಕಾಗಿ ಮಬ್ಬಿಡಿದಿರಲು,
ವಾತವಿರದ ವೈತರಣಿ ರಂಧ್ರದೊಳಗಿಳಿದ ಸುಮಧಾರಿ ಸುಂದರಾಂಗನ ಸುತ್ತೆಲ್ಲ
ಸುಗೋಚರವಿಹ
ಮಂದ್ರಯುತ ಮಂಜಿನೊಲಿಹ ಹಸಿರು ಹಿನ್ನೆಲೆಯಲಿ ಹರಣದ ಹಜಾರದೆಡೆಗೆ
ಹೊರಟವನ
ಕೇಶಗಳವು ಅವತರಣಕೆದುರಾಗಿ ಮೇಲೆದ್ದು ಮಹಾನಾಗರದೊಲು
ಮಣಿತಕುಣಿತವನಿಟ್ಟಿದ್ದವು.
ಮೇಲೆರುವ ಜ್ವಾಲಾಶಿಖೆಗಳೊಲು ಜಗ್ಗುತಿಹ ಜಲದೊಳಗೆ
ಝೂಡಿಸುತೋಡುತ್ತಿದ್ದವು.
ಕೈಯೊಳಗಿಹ ಕುಸುಮವದು ಕಾವಳವನು ಕರಗಿಸಿ ಕಣ್ಗೆಕಾಂತಿಯನಿಟ್ಟಿರಲು,
ನಟ್ಟನೆಯ ದಿಟ್ಟಿಗೆ ದೃಗ್ಗೋಚರವಿಹುದೊಂದು ಧೂಮಧಾಮವಿಹ ದೃಶ್ಯ!
ಹಿನ್ನೆಲೆಯಲಿಹ ಹರಿದ್ವರ್ಣದ ಹಾಸಿನಲಿ ಸೂಸುತಲೆದು ಸುಸ್ಪಷ್ಟರಿಹ
ಸುಂದರಾಂಗಿಯರು,
ಕಾರ್ಮುಗಿಲಿನ ಕೇಶವಿಹ ಕಡಲುಕನ್ನಿಕೆಯರು, ಜಲದಾಳದಲಿ ಜಾಗೃತರಿಹ
ಜಲಕನ್ಯೆಯರು,
ಮತ್ಸದೊಲು ಮಣಿದು ಮುಂದೋಡುತಿಹ ಮತ್ಸ್ಯಕನ್ಯೆಯರು.
ರುರುವನು ಬಳಸಿ ಬತ್ತಲಾಗಿ ಭ್ರಮಿಸುತಿಹ ಭಾಮಿನಿಯರ ಲಕ್ಷೋಪಲಕ್ಷ
ವಕ್ಷಸ್ಥಲದಿ ಸ್ಥಾಯಿಯಾಗಿಹ
ಸೂಕ್ಷ್ಮಸ್ತನಗಳವು ಅವನಕ್ಷಿಗಳಿಂದೀಕ್ಷಿಸಲೆಂದು ಪ್ರತೀಕ್ಷಿಸಿಹವು.
ಸಾಕ್ಷಿಯಾಗಲೆಂದವವನೇ ಲಕ್ಷಿಸಿಹವು.
ಕಡಲನೆತ್ತಿಯಿಂದ ನೇರವಿಳಿದು ನಡೆತಂದವನ ನೇತ್ರದೆದುರು ನೆರೆದಿತ್ತೊಂದು
ಪ್ರವಾಹವದು ಪರ್ಯಾಯವಸನಗೊಂಡು ಪ್ರಶಾಂತವಿಹ ಪ್ರಪಾತ.
ಮಹಾವಾರಿಧಿಯ ವಾರುಣಾಂಶವೆಲ್ಲ ಮೆಲ್ಲನೆ ಜರಿದು, ಝರಿಯಂತೆ ಹರಿದು
ಬುವಿಯ ಬೇರಿನೆಡೆಗೆ ಭೋರ್ಗರೆದು, ಭೂಮಿಯಾಳದ ಬಾವಿಯೊಳು ಭವಿಸಿತ್ತು.

ನೆಲದಾಳದ ನಿಶೆಯೆಡೆಗೆ ನಡೆದ ನಿರಂತರದ ನೀರ್ಝರಿಯ ನೋಡುತ
ನಿಬ್ಬೆರಗಾಗಿ ನಿಂದನವ.
ನೆಂಟನೋರ್ವನನು ನಿಶಾವಾರಿಧಿಯೆಡೆ ತಂದಿರಿಸಿದ ಪಾತಾಳಗಂಗೆಯದು
ಕರಿನೀರಿನ ಕೇಂದ್ರದೆಡೆಗೆ
ಕರೆದೊಯ್ದು ಕಾಲಿರಿಸುವ ಕಾಣ್ಕೆಯನೋರ್ವ ಕಂಡನೆಂದು ಕರೆದೊರೆದು
ಕಣ್ಣೀರಿಡುವಂತೆ
ಕೊರಗಿತ್ತು, ಹುಚ್ಚುಹೊಳೆಯಾಗಿ ಹರಿದಿತ್ತು, ಕೊಚ್ಚಿಕೊನ್ನಾರದೆಡೆಗೋಡಿ
ಕೆಳಗಿಳಿದಿತ್ತು.
ಅನಿತರೊಳು ಇಳಿವಾದಿಯಿಂದ ಏರಿಬಂದಳೋರ್ವ ಮೂರು ಮೊಗವಾಡದ
ಮಹಾದೇವತೆ.
ಮಹಾನದಿಯ ಮೊರೆತದಲಿ ಮುಲುಗುಟ್ಟುತ ಮಾತನಾಡಿದ್ದಳವಳು ಮಾತಾಯಿ.
ನೂರು ನಿರಾಸೆಗಳೆಲ್ಲ ನೆತ್ತಿಯೊಳಗೊಂದರಲಿ ನೆರೆಸಿ ನರಳುತಿರುವಂತಿತ್ತವಳ
ನುಡಿಧಾರೆ,
“ಭಾಸ್ಕರನ ಬೆಳಕನೇ ಬಿಟ್ಟು ಬಂದರೂ ಬೆದರದೆ–ಬಗ್ಗದೆ ಬಲಶಾಲಿಯಿಹ
ಬಂಧುವೇ,
ನಾ ನೋಂತ ನಿರ್ಧಾರಗಳಿಂದಲೇ ನನ್ನೆದೆಯನು ನಲುಗಿಸಿಹ ನಿಶಾದೇವಿಯಾಗಿಹೆನು
ನಾನು.
ನಿನ್ನೆದೆಯದು ನಿಸರ್ಗದ ನಿಶೆಯೆಡೆಗೆ ನಡೆದಲ್ಲಿ ನಿನ್ನಾಕೆಯ ನಿಶಾದೇಹವನು
ನೋಡಲು
ನಿಯುಕ್ತವಾಗಿದ್ದರೆ ನಡೆ, ಕವಿದಿರುವ ಕಾವಳದೊಳು ಕರಗಿ ಕಳೆದೋಗಿ ಕಾಣದಂತಾದ
ಅಸಹಾಯಕ ಆತ್ಮಗಳನೆಲ್ಲ ಅಂಕೆಗೊಳಪಡಿಸಿ ಅಡಿಯಾಳಾಗಿಸಿಹ ಅಂಗಣದೆಡೆ
ಅಧಿರೋಹಿಸೋಣ.”
ನೀರ್ಲಹರಿಯಲಿ ನುಡಿದಾಕೆಯು ನಿರಾಶೆಯ ನಿಃಶ್ರೇಣಿಯನೇ ನಿಶೆಯೊಳಗೆ
ನೂಕಿದಳು,
ಸೂತ್ರವಿರದ–ಸಂಕಲ್ಪವಿರದಿಹ ಸಣ್ಣತನವನೆಲ್ಲ ಸದೆಬಡಿದು ಸುಡುಗಾಡಿಗೆಸೆದಳು.
ಮಾನವರು ಮನಗಾಣದಂಥ ಮಹಾಬೋಧನೆಯೊಂದನವಳು ಬೋಧಿಸಿರಲು,
ಭ್ರಮನಿರಸನಾಗಿ ಬಳಲಿದವನ ಭ್ರೂಮಧ್ಯದಲಿ ಬಣ್ಣವಿಡಿದಂತಾಗಿತ್ತು.
ಆದರೆ ತಾ ಪಡೆಯಲೆಂದು ಪಣತೊಟ್ಟ ದಿವ್ಯಪ್ರೇಮವದು ದೇಹದಲಿ ದಾವಾನಲವಿಟ್ಟು
ದಳ್ಳುರಿಯಾಗಿ ಧಗಧಗನೆ ದಹಿಸಿತ್ತು. ಅವನೆದೆಯೊಳಗೆ ಉರಿದು ಉನ್ಮಾದವನೆಬ್ಬಿಸಿತ್ತು.

ಕೆರೆಯೊಳಗೆ ಕೂತು ಕೋಲಾಹಲವನೆಬ್ಬಿಸಿಹ ಕಂಕಾಲಕೇತುಗಳ ಕ್ರೂರತಮ ಕೂಗಿಗೆ ಕನಲಿ
ಕೆಂಡವಿಟ್ಟಂತಾಗಿರಲು ಕಾಲ್ದೆಗೆದು ಕೆಳಗಿಳಿದನವ, ಇಲ್ಲದಿರೆ ಸುತ್ತೆಲ್ಲ ಸೇರಿ ಧ್ವನಿಗುಟ್ಟುವ
ದೈತ್ಯಶಕ್ತಿಗಳಿಗೆ ದೂತನಾಗಿ, ಭಯದ ಭ್ರಾಂತಿಗೆ ಬೆದರಿ ಭ್ರಮೆಯೊಳಗೆ ಬಂಧಿತನಾಗಿ
ಬದುಕಬೇಕೆಂಬುವದನು ಭಾವಿಸಿ ಭರವಸೆಯೆಂಬ ಬಲಕೆ ಬದ್ಧನಾಗಿ ಭವಿಸಿದನು.
ಭಾವಸಂಕಟದಲೇ ಬದುಕ ಭರಿಸಿದವನಂದು ಧೂಸರದಸಾಮ್ರಾಜ್ಯದ ಬಾಂದಿನೆಡೆ ಬಂದಿಳಿದನು.

**ಸ್ತರ–ಧೂಸರದ ಸಾಮ್ರಜ್ಯ–ಭ್ರಮಾಸಾಗರ**
**ಪ್ರಭೃತಿ – ಸರ್ಪಸಂಕುಲ**

ನೋವಿನಲೇ ನಲಿವನು ನೀಡುವ ನಿಲಯವದು ನೆತ್ತಿಮೇಲೆ ನೆರೆದಿರಲು ನೇರವಿಳಿದು ನಡೆದನವ
ಬೇಸರದೊಂದು ಬೃಹತ್ಭಾಗವನೆಬೆರೆಸಿ ಬೀಸುತಿಹ ಬಿರುಗಾಳಿಯ ಭಾಗದಿಂ ಭವಿಸಿದನವ
ಪ್ರಮಾದತೆಗೆ ಪ್ರಾಧಾನ್ಯತೆಯಿಡದೆ, ಪ್ರಶಾಂತತೆಗೆಂದೇ ಪ್ರಾಶಸ್ತ್ಯವಿಡುವ ಪ್ರಪಾತದೆಡೆಗವನಿಳಿದರೂ
ಬೆಂಬಿಡದ ಬೇತಾಳದೊಳು ಬೀಸುತ ಬಂದ ಬೇಸರದ ಬಿಸಿಯುಸಿರೇ ಭಾವಜೀವಿಯನಲ್ಲಿ ಭಯವಿಡಿಸಿತ್ತು.
ಚಂದ್ರಕಾಂತಿಯ ಚಾರುದಿಶೆಯಿಂದಿಳಿದು ಮಂದ್ರಕಾಂತಿಯ ಮಹಾನಿಶೆಯೊಳು ಮುಳುಗಿದವನ
ಮೊಗದೆದುರು ಮಾತನಾಡಿತ್ತು ಮಬ್ಬಿನೊಳು ಬೊಬ್ಬಿರಿಯುವ ಬೂದುಬಣ್ಣದ ಭ್ರಮಾಸಾಗರ
ಚರಾಚರಗಳ ಚಲನೆಯಿರದೆ, ಚೈತನ್ಯದೊಂದು ಚಿಲುಮೆಯಿರದೆ, ಚಿನ್ಮಯಕೆದುರಾಗಿ ಚಿರಂತನವಿಹ
ಪಾತಾಳದೇಶವದು ಪರಿವರ್ತನೆಯೆಂಬೊಂದು ಪ್ರಯೋಗವನೇ ಪ್ರಾರಂಭಿಸದೆ ಪೂರ್ಣ ಪತನಗೊಂಡಿತ್ತು.
ಮಳೆಗಾಲದ ವರ್ಷವಿರದೆ, ಮನದಾಳದ ಹರ್ಷವಿರದೆ,
ಬಿಸಿಲುಭಾಸ್ಕರನ ಬರ್ಷಣವಿರದೆ, ಉದಯಸೂರ್ಯನ ಉತ್ಕರ್ಷಣವಿರದೆ

ಉರುಹಾಕುತಿಹ ಊರ್ಣನಾಭದೊಲು ಉಳುವ ನೇಗಿಲೊಂದು ನೆಲದ
ನೇರಾನೇರ ನೆರಿಗೆಗಳ ನೆರೆಸಿ,
ಬುವಿಯ ಬಿರುಕುಗಳನೆಲ್ಲ ಭರಿಸಿ ಬೇರೊಂದು ಬಾಂದನೇ ಬಗೆದು ಬೀಜವಿಕ್ಕಿ
ಬೇರಿಳಿದು
ಬಣ್ಣಬಣ್ಣದ ಭೋಜ್ಯಗಳ ಬೆಳೆದು ಬದುಕನೇ ಬಂಗಾರಮಯಗೊಳಿಸುವ
ಭಾಗ್ಯವಿರದಾ
ಭ್ರಮಾಲೋಕದಿ ಬೆಳೆದ ಬಂಡೆಗಲ್ಲುಗಳಡಿಯಲಿ ಬಾಯ್ಬಿಟ್ಟ ಬೃಹದ್‌ಗುಹೆಗಳ
ಬೂಮ್ರದಲಿ(?)
ಬದುಕಿತ್ತೊಂದು ಭೂರೀನಾಗರ ಪಡೆ. ವೃತ್ರಾಸುರನೊಲು ವೃಕೋದರರಾಗಿ
ವಕ್ರವಿಕ್ರಮರಾಗಿ
ಪಾಪದ ಪ್ರತಿಮೆಗಳಂತೆ ಪವಡಿಸಿಹ ಪ್ರೇತರೂಪಿಗಳ ಪ್ರಾಂಗಣವದು
ಪುಣ್ಯಪುರುಷರು ಪಾದವಿಡದಷ್ಟು
ಹೊಲ್ಲಮೆಯ ಹರ್ಮ್ಯಗಳಾಗಿ, ಹರಣದ ಹಜಾರಗಳಾಗಿ ಹಾದಿಹೋಕರ
ಹೊನ್ನಶಿರದಲಿ
ಹುದುಗಿಹ ಹಾರೈಕೆಗಳನೆಲ್ಲ ಹಿಡಿದೆಳೆದು ಹೊರಗೆಳೆದು ಹದಗೆಡಿಸುವ
ಹುನ್ನಾರದಲ್ಲಿರಲು
ಕಾಲೆಳೆದು ಕೈಯಾಡಿಸುತ ಕಿವಿಯೇಕಣ್ಣಾಗಿರಲು ಕೇಳಿತ್ತೊಂದು ಕಾಳೋರಗದ
ಕಂಠದುಸಿರು.
ಹಿಸ್ಸೆಂದು ಹರಿದು ಭುಸುಗುಟ್ಟಿ ಭಯವಿಡಿಸುವ ಭುಜಂಗಗಳಿಹ ಬಾವಿಗಳೆಡೆ
ಬಗ್ಗಿನೋಡದೆ
ನೇರವಿಳಿದು ನಡೆತಂದನವ ನಿಶಾಲೋಕದ ನಿಶ್ರೇಃಣಿಯದು ಕೆಳಗಿಳಿದ
ಕರಾಳಕೂಪದೆಡೆ.

## ಸ್ತರ – ಕರಿನೀರ ಕಾಲುವೆ (Inferno)

## ಪ್ರಭೃತಿ – ಸುವರ್ಣಾಂಗಿ

ಅಂಧಕಾರದೆಡೆಗಿಳಿದವನ ಆತ್ಮವದು ಅಧಿಕಾರಯುತ ವಾಣಿಯಲಿ ಆರೋಪಿಸಿರಲು,
ಅಧಿರೋಹಿಸಿದನವ ಆಲಸ್ಯದಲೇ ಅಲವತ್ತುಕೊಂಡಿಹ ಅಮರವಿಹ ಆರಾತಿಗಳ
ಆಲಯದೆಡೆ.

ಬರಿಯ ಬವಣೆಯಲೇ ಬದುಕಿನ ಭಾಗ್ಯವನು ಬಯಸಿ ಬರಗೇಡಿಯಾದ
ಬಾಂದನು ಬಿಟ್ಟು
ಇಳಿದವನ ಇಳಿವಾದಿಯಲಿ ಇದಿರುಗೊಂಡ ಆಸೆರಹಿತವಿಹ ಆರು
ಆವಾರಗಳಿಂದಿಳಿದು
ದುಃಖದ ದಳ್ಳುರಿಯಲೇ ದಹಿಸಿ ದಾವಾನಲವಿಕ್ಕುವ ವಾಯುವಿಹ
ವರಾಂಡದೆಡೆಗವನು ವಾಲಿದನು.
ಮರ್ತ್ಯಕರ್ಣಗಳೆಂದೂ ಕೇಳದಿಹ ಹೃದಯವಿದ್ರಾವಕಯುತ ವೇದನೆಯ
ಆಕ್ರಂದನವು
ಅಪರಂಪಾರದಿಂದೇರಿ ಬಂದು ಕೇಳಿದವನೆದೆಯೊಳಗೆ ಕನಲಿ ಕೆಂಡವಿಟ್ಟಂತಾಗಿತ್ತು.
ಚೀತ್ಕಾರವದು ಚರಿಸಿ ಚಾರುದಿಶೆಯನು ಚಂಚಲಮಯಗೊಳಿಸಿರಲು
ಕರುಣಾರ್ದ್ರ ಕೂಗಿನ ಕೇಂದ್ರವನು ಕಂಡುಕೊಳಲೆಂಬಂತೆ ಕೆಳಗಿಳಿದು ಕಾಲಿಟ್ಟನವ
ಸಂಕಟದಲಿಹ ಸಹಸ್ರಾತ್ಮಗಳವು ಸಾಲುಗಟ್ಟಿಸರಿದು ಸುಯ್ದಾಡುತಿಹ ಸರಿಗೆಯೆಡೆ.
ವಾತದಡಿಯಲಿ ವಿಹರಿಸುತಿಹ ವೈತರಣಿಯಲಿ ವೇದನೆಯನೇ ಹೊದ್ದು
ಒದ್ದಾಡುತಿಹ
ಶಾಪಗ್ರಸ್ಥವಿಹ ಸಾವಿರಾತ್ಮಗಳು ಹುಚ್ಚುಹೊಳೆಯಾಗಿ ಹರಿದು ಕೊಚ್ಚಿಕೊನ್ನಾರದೆಡೆ
ಕೆಳಗಿಳಿವ ಕರಿನೀರಕಾಲುವೆಯಲಿ ಕೈಯಾಡಿಸಿ ಕಾಲಾಡಿಸಿ ಕುತ್ತಿಗೆಯನು
ಕೊಸರಾಡಿಸಿ
ತಾ ಪಡೆದ ಪಾಪದ ಪ್ರಾಯಶ್ಚಿತವನು ಪೂರ್ಣಗೊಳಿಸುತ ಪುರೋಗಮಿಸುತಿದ್ದವು.
ಕಾಲವದು ಕೂಡಿಟ್ಟು ಕಾಲಾಂತರದಿ ಕೆಡವಿ ಕಟ್ಟಾಡಿಸುವ ಕರಿನೀರ ಕಾಲುವೆಯನು
ಕಂಡವನ ಕಿಬ್ಬೊಟ್ಟೆಯೊಳು ಕೆಂಡವಿಟ್ಟಂತಾಗಿರಲು ಕರುಳುರಿದು ಕನಲಿ
ಕಕ್ಕಾವಿಕ್ಕಿಯಾದನವ.
ಹರಿದೋಗುತಿರುವ ಹೊಳೆಯೊಳಗೆ ಹರಿದಾಡುತಿಹ ಹತ್ತಾರು ಹೊನ್ನಶಿರಗಳನು
ಗುರುತಿಟ್ಟು ಗಮನಿಸಿರಲು ಗಮನೀಯವಿಹ ಗಂಡುಹೆಣ್ಣುಗಳಲ್ಲಿ ಗುಂಭದೆಡೆ
ಗಮಿಸುತಿದ್ದವು.
ಬ್ರಾಹ್ಮವನರಿತು ಬ್ರಹ್ಮೋಪದೇಶವನಿತ್ ಆರ್ಷಕುಲಸಂಭವರಿಹರಲ್ಲಿ
ಕ್ಷಾತ್ರದಲಲೆದು ಕ್ಷುದ್ರತನವನ್ನಡಗಿಸಿದ್ದ ಆರ್ಯಕುಲತಿಲಕರಿಹರಲ್ಲಿ
ಪವಿತ್ರತನವನು ಪಾಲಿಸುತ ಪರಮಪಾವನೆಯರೆಂದು ಪತ್ರಾಂಕಿತರಾಗಿದ್ದ
ಪತಿವ್ರತೆಯರಿದ್ದರಲ್ಲಿ

ಪುರಾಧಿಪತಿಗಳಾಗಿ, ಪುರೋಹಿತರುಗಳಾಗಿ, ಪತಿವ್ರತೆಯರಾಗಿ ಪ್ರಸಿದ್ಧರಿಹ
ಪ್ರಾಣೋತ್ತಮರೆಲ್ಲರ
ಮೃತಾತ್ಮಗಳವು ಮಂಕು ಮಸುಕಾಗಿ ಮಬ್ಬಿಡಿದ ಮೊಗವನೆತ್ತಿ ಮಾತನಾಡಲೆಂದಲ್ಲಿ
ಮುನ್ನೂಕುತಿದ್ದವು.
ಅಲವತ್ತುಕೊಳುತಿಹ ಆತ್ಮಗಳಲ್ಲಿ ಆಲಾಪಿಸುತಿಹ ಅಲೆಗಳೊಡನೆ ಅಳುತಳುತ
ಆಕ್ರಂದಿಸುತ್ತಿದ್ದವು.
ನೆರಿಗೆನೆರಿಗೆಯಲಿ ನೂಕುತಿಹ ನೂರಾಳು ನೀರಿನೊಳು ನರಳುತಿಹ ನೂರಾತ್ಮಗಳ
ನೀರಡಿಯಿಂದ
ಮೇಲೇರಿ ಮೂಡಿತ್ತೊಂದು ಮಿಸುನಿಯೊಲು ಮಿನುಗಿ ಥರಥರಗುಟ್ಟುವ
ತೋಳೆರಡು.
ಮತ್ತೆ ಮೇಲೇರುತಿರಲು ಮಾತನಾಡುವದರ ಮೊಗವೊಂದು ಮುನ್ನೋಡಿತ್ತು.
ಹಿಂದೆಯೇ ಹರಿದು ಹಂದರವಾಗಿಹ ಅದರ ಹೊದರೊಂದು ಹೊರ ನೋಡಿತ್ತು.
ಮುಲುಗುಟ್ಟುತಿಹ ಮೊಲೆಗಳೆರಡು ಮಿಡುಕುವ ಮಿಡತೆಗಳಂತೇರಿ ಮೇಲ್ವಾಯ್ದಿತ್ತು.
ಗುಂಡದೊಳಗಿಂದೆದ್ದು ಗಂಡಾಂತರದಲ್ಲಿರುವದರ ಗುಂಡಿಗೆಯೆಡೆ
ದಂಡಪ್ರಹಾರವಿಡುವೊಲು
ಬಿಡಬಿಡದೆ ಬಂದೆರಗಿ ಬಿರುಸಾಗಿ ಬಡಿದೊಡೆದ ಬಲ್ದೆರೆಗಳವು ಭಾರವಿಡುತಿರಲು
ಸಂಕಟದಲಿಹ ಸುವರ್ಣಾಂಗದ ಸಂತಸವೆಲ್ಲ ಸೊರಗಿ ಸಿಬರುಕಡ್ಡಿಯೊಲಾಗಿತ್ತು,
ಕರಿನೀರದು ಕರುಣಿಸಿದ ಕರಾಳ ಕ್ರೌರ್ಯದಿ ಕನಲಿ ಕಂಗಾಲಾಗಿ ಕಪ್ಪಿಡಿದಿತ್ತು.
ಕರುಣಾರ್ದ್ರ ಕಾಣ್ಕೆಯಿದನು ಕಂಡವನ ಕರುಣೆಯ ಕಟ್ಟೆಯೊಡೆದು ಕಂಬನಿಯ
ಕಾಲುವೆಯದು
ಕಪೋಲಕಿಳಿದಿರಲು ಕರುಳುರಿದು ಕೂಗಿದನವ ರುರು,
"ಮಂದ್ರನಿಶೆಯ ಮರಣಮಹೋಧದಿಯೊಳಗೆ ಮುಳುಗೇಳುತ ಮುಂದೋಡುತ
ಮರುಗುತಿಹ
ಮನುಕುಲದ ಮುಗಿದ್ಹೋದ ಮಹಾಪುಟಗಳಲಿ ಮಿನುಗಿ ಮರೆಯಾದ
ಮಾಣಿಕ್ಯದೊಲಿಹ ಮಾನವರೇ,
ಭಾವನೆಯ ಬಾಂದಳವನೇರಿ ಭವಿಸಲೆಂದಲ್ಲಿ ಬಂದು, ಹಿಂಸೆಯೆಂಬೊಂದು
ಹೊಲ್ಲಮೆಯ ಹೊಂಡದಲಿ ಹೊರಳಾಡಿ,

ಬದುಕಿನ ಭಾವಲಹರಿಯಲಿ ಭವಿಸಲೆಂದಲ್ಲಿ ಭ್ರಮಿಸಿ, ಬವಣೆಯಿಡುತಿಹ ಬರಿಯ
ಬೆಂಕಿಯೊಳು ಬೆಂದು,
ದಾವಾನಲದೊಲು ಧಗಧಗನೆ ದಹಿಸುತಿಹ ದುಃಖದ ದಳ್ಳುರಿಯೊಳು ದಿನಗಳ
ದೂಡಿ
ಕಾಲನ ಕಣ್ತಪ್ಪಿಸಿ ಕೆಲವೊಮ್ಮೆ ಕರ್ಣಾಕರನ ಕಿರಣಕಾಂತಿಯನುಕೊಂಡು,
ಪಕಳೆಯುಚ್ಚಿ ಪಲ್ಲವಿಸುತಿಹ ಪುಷ್ಪವೊಂದರ ಪರಿಮಳವನು ಪರಿಗ್ರಹಿಸಿ
ತಾನಿಹೆನು ಪುಣ್ಯಪುರುಷನೆಂದು ಪತ್ರಾಂಕಿತನಾಗಿ, ಬಣ್ಣದ ಬುಗುರಿಯೊಲು ಭ್ರಮಿಸಿ,
ಕೊನೆಗೊಮ್ಮೆನಕೋಟಿಯಂಗುಲವಿಹ ಕರಿನೆಲದಿಂದ ಕೆಳಗಿಳಿದಿಲ್ಲಿ ಕರಿನೀರ
ಕಾಲುವೆಯೊಳು
ಕನಲಿ ಕಕ್ಕಾವಿಕ್ಕಿಯಾಗಿರುವಿರಿ. ರಜನಿ–ರಕ್ಕಸಿಯ ರಾತ್ರಿಯೊಳಗಿಲ್ಲಿ
ರವಾನಿತರಾಗಿರುವಿರಿ.
ಭಯಂಕರವಿಹವೀ ಬೂಮ್ರದಲಿ ಬಣ್ಣದ ಬದುಕಿನ ಭಿಕ್ಷೆಯನು ಬೇಡುತ
ಬವಣೆಗೆಟ್ಟು ಬಿದ್ದಿರುವಿರಿ.
ಬಂಡಾಯತನದೀ ಬೂದುಭವನವಿದನು ಬೀಳಿಸಿ ಬಾನಂಗಳದ ಬೆಳಕನಿಳಿಸಿಲ್ಲಿ
ಬಣ್ಣವಿಡಿಸಲೆಂಬ
ಭ್ರಮೆಯಲಿ ಹಿರಿ–ಬರಿಯ ಬಾಯ್ಮಾತಿಗೆಲ್ಲ ಬದುಕನು ಬಂಗಾರಮಯಗೊಳಿಸುವ
ಭಾಗ್ಯವಿಲ್ಲವಿಲ್ಲಿ
ಮಹಾನಿಶೆಯ ಮಹೋಧದಿಯಾಳದೊಳು ಮಲಗಿರುವ ಮೃತ್ಯುವವನು
ಮನುಕುಲದೀ ಮನವಿಗೆ
ಮರುಗಿ ಮಂಕಾಗಿ ಮಮಕಾರವಿಟ್ಟು ಮಾತನಾಡಿಸನು. ಸಾವಿಗೆ ಸನ್ಮಾನವಿಟ್ಟು
ಸಹಕರಿಸನು.
ಶೈತ್ಯವಿಹ ದೈತ್ಯಲೋಕದಲಿ ಅವನೊಂದು ಅಪ್ಪುಗೆಗೆ ಅಮರವಿಹ ಆತ್ಮಗಳೆಲ್ಲ
ಸೆಟೆದು ಸಮ್ಮೋಹಿತವಿಹವು
ನಡುಗಿ ನೀರು ನೀರಾಗುವವು. ಅಂಧಕಾರದೊಳಗಿಳಿದ ಆತ್ಮಗಳೆಲ್ಲ ಕವಿದ
ಕತ್ತಲೆಯೊಳಗೆ ಬತ್ತಲಾಗಿ ಭ್ರಮಿಸುವವು.
ಕಾಮನ ಕೈಯಿಂದ ಕೊಡಮಾಡಲ್ಪಟ್ಟು ಕತ್ತಲವಿಹವೀ ಕರಾಳಕೂಪದಡೆಗೆನ್ನ
ಕರೆತಂದಕಲಂಕವಿರದ ಕುಸುಮವೇ,

ಮಾಡಿದ ಮಹಾಪರಾಧಗಳಿಗೆ ಮರುಗಿ ಮರಣಾನಂತರದ ಮಹಾಜಲದೊಳು
ಮುಳುಗೇಳುತ ಮುಂದೋಡುತಿಹ
ಪ್ರಾಯಶ್ಚಿತದೀ ಪ್ಲಾವನವನು ದರ್ಶನಗೈದಿಲ್ಲಿ ದಾರಿಗಾಣದೆ ದಿಗ್ಗೇಡಿಯಾಗಿ
ದುಃಖದಲ್ಲಿರುವೆಯಾ?
ಚಿಂತಿಸದಿರು. ಚಿನ್ಮಯಕೆದುರಾಗಿ ಚಿರಂತನವಿಹವೀ ಹತಾಶದ ಹೊಂಡದಾಳದೊಳು
ಹುದುಗಿಹ
ಹೊನ್ನರಾಶಿಯನೆಲ್ಲ ಹೊತ್ತು ತರಲೆಂದಿಲ್ಲಿ ತಳಮುಟ್ಟಿ ತಡಕಾಡುವೆನು.
ಕಳೆದ ಕಾಲದಲಿ ಕಳೆದೋದ ಕಾಂತಿಯನೆಲ್ಲ ಮರಳಿ ಮೇಲೆತ್ತುವೆನು.
ನಕ್ಷತ್ರ–ನೀಹಾರಿಕೆಗಳ ನೆಲೆಗಟ್ಟಿನಡಿಯಲವುಗಳ ನೆರೆಸಿ ನೂರಾಗಿಸುವೆನು.
ಇಲ್ಲದಿರೆ, ಕರಿನೀರಕೆರೆಯ ಕೆಳಭಾಗಕಿಳಿದು ಕಾಲವಾದ ಕಾಂತೆಯನಲ್ಲಿ ಕಂಡು,
ಅವಳಂತಃಸತ್ವವನು ಅಮರ್ದಿಸಿದ ಅಪ್ರಕೇತದ ಅಂಧಃತಮಸ್ಸಿನ ಅಡಿಭಾಗದಲಿ
ಅಳುತಳುತ
ಅಲವತ್ತುಕೊಂಡಿಹಳ ಆಲಂಗಿಸುತ ಅಪ್ಪಿಕೊಳುವೆನು. ಅವಳೆದೆಗೆ ಮುತ್ತಿಟ್ಟು
ಮುಂಬರಿವೆನು.
ಪೂರ್ಣಪ್ರೇಮದ ಪಾಲುದಾರನಾಗಿ, ಅವಳಂಕೆಯಲಿಹ ಅವಸಾನದ
ಅರ್ಧಭಾಗವನು ಅಳಿಸಿ
ಅಳಿದುಳಿದೆನ್ನ ಆಯುಷ್ಯದ ಸಮಪಾಲನಿತ್ತು ಸರಿದೂಗಿಸುವೆನು, ಸಂಕಟವ
ಸರಿಸುವೆನು. ಸಂತಸವ ಸವಿಯುವೆನು.”
ಮನದಾಳದ ಮೂಲೆಯೊಳಗೆಲ್ಲ ಮಡಗಿದ್ದ ಮಹಾನುಡಿಗಳೆಲ್ಲ
ಮುಡಿಗೇರಿಮಾತನಾಡಿತ್ತು.
ಮತ್ತೆ ಮಂದಾಕಿನಿಯೊಳು ಮುಳುಗಿ ಮಂದವಾಗಿ ಮುಂದೊಡಿರಲು
ಮೊಳಗಿತ್ತೊಂದು ಮುಲುಕು,
“ಕಣ್ಗೆಕಾಂತಿಯನಿತ್ತು ಕಣ್ಮಣಿಯಾದ ಕಾಂತೆಯನು ಕಣ್ಮುಂದೆಯೇ ಕಳೆದುಕೊಂಡು
ಕಂಬನಿ ಮಿಡಿದ ಕಾಂತನೇ,
ಪಾಪಿಗಳಿಗಾಗಿರುವ ಪ್ರಾಯಶ್ಚಿತದ ಪ್ಲಾವನದೊಳಗೆ ಮುಳುಗೇಳುತ ಮಾಡಿದ
ಮಹಾಪರಾಧಗಳಿಗೆ
ಮಾರುತ್ತರವನಿಡುತಿಹ ಮಂದ್ರಜಲವನು ಮರೆತು ಮುನ್ನುಗ್ಗು, ಮುಳುಗಿ
ಮುನ್ನೋಡು.

ಶಾಪಗ್ರಸ್ತರೆಲ್ಲ ಸೇರಿ ಸುಯ್ದಾಡುತಿಹ ಸಾವಿನಲೆಯ ಸರೋವರದಲಿ
ಶುದ್ಧಾತ್ಮಗಳಿಗೆಂದೂ ಸೆರೆಯಿಲ್ಲ.
ನೀನಿಲ್ಲಿ ನೋಡುತಿಹ ನೂರಾಳು ನೀರಿನೊಳು ನಿಸ್ವಾಕೆಯ ನೆರಳೂ
ನಡೆಯುವದಿಲ್ಲ.
ಪೃಥ್ವಿಯೊಳಗಲ್ಲಿ ಪ್ರೇಮತತ್ವವನು ಪ್ರೇರಿಸಿದ ಪುಣ್ಯಾತ್ಮಗಳಿಗಾಗಿಲ್ಲಿ ಪ್ರತ್ಯೇಕ
ಪ್ರಾಂತ್ಯವೇ ಪಜ್ವಳಿಸಿಹುದು.
ಸಂತಸವೇ ಸಂತತವಾಗಿ ಸಾಂತ ನಿತಾಂತವಾಗಿರುವಾ ಪ್ರಾಂತದಲಿ
ಪುಣ್ಯವನಿತೆಯವಳು
ಮಸುಕಾದ ಮಹಾತ್ಮರುಗಳ ಮಧ್ಯದಲಿ ಮೊರೆಯುತಿಹ ಮೂಕನೆನಪುಗಳ
ಮರ್ಮರದಲಿ ಮರುಗುತಿಹಳು."
ತಿರುಪೆಯೆತ್ತುವ ತಿರುಕನಂತೆ ತಿರುತಿರುಗಿ ತಿರುಗುಪ್ಪೆಯಾದವನಲ್ಲಿ ತಿರುಗಿರಲು
ತೋರಿತ್ತೊಂದುತೋರಿಕೆ,
ಪಾಪಾತ್ಮರುಗಳಿಂದ ಪೂರ್ಣವಾಗಿ ಪರಿತಪಿಸುತ ಪ್ರಕ್ಷುಬ್ಧವಿಹ ಪಾರಾವಾರದ
ಪ್ರವಾಹದೊಳಗಿಂದ
ತಲೆಯೆತ್ತಿತ್ತೊಂದು ತೂಗುಸೇತುವೆ. ಜ್ವಾಲಾವೃತವಾಗಿ ಜಲದಿ ಜೋಕಾಲಿಯಾಡುತ
ಸುಭದ್ರವಿಹ ಸುಸಜ್ಜಿತವಿಹ ಸೇತುವೆಯದು ಪಾಪಾತ್ಮರ ಪುರದಿಂ ಪುಣ್ಯಾತ್ಮದ
ಪಾಳಯದೆಡೆ ಪಯಣಿಸುವ ಪಥವಾಗಿತ್ತು.
ಸುಡುತಿರುವ ಸುವರ್ಣಾಗ್ನಿಯ ಸೆರಗಿನ ಸೀರೆಯುಟ್ಟ ಸುವರ್ಣಾಂಗಿಯೋರ್ವಳು
ಸೇತುವನೇರಿ ಸುಳಿದಿದ್ದಳು.
ಕೈಯಲೊಂದು ಖಣಗುಟ್ಟುವಖಡ್ಗವನಿಡಿದು ಪಹರೆಸುತ್ತುವ ಪುರರಕ್ಷಕರೊಲವಳಲ್ಲಿ
ಪ್ರತೀಕ್ಷಿಸುತ್ತಿದ್ದಳು.
ಪಾಪದ ಪುಷ್ಕರಣಿಯೊಳಗಿಂದೆದ್ದ ಜ್ವಾಲಾಂಗಿಯವಳು ಅರಳುತಿಹ
ಅಗ್ನಿಮುಖವನೆತ್ತಿ ಮತ್ತೆ ಮುಂಬರಿದಳು,
"ಭೃಗುಕುಲಸಂಪನ್ನನಿಹ ಸುಂದರಾಂಗನೇ, ಕಾಮನಿತ್ತ ಕುಸುಮವದು ನನ್ನ
ಕೆಂಡಹಸ್ತಗಳಿಂದ ನಿನ್ನ ಕಾಪಾಡುವುದು
ಕಲಮಲಗೊಳ್ಳದಿರು." ಎಂದೆನ್ನುತ ಜ್ವಲಿಸುತ ಜ್ವಲಂತವಿಹ ಜ್ವಾಲಾಹಸ್ತವನವನೆಡೆಗೆ
ಚಾಚಿದಳು.

## ಸ್ತರ – ಮಾಯಕದಮಂದ್ರಮೈದಾನ
## ಪ್ರಭೃತಿ – ಪುಣ್ಯಪುರುಷರು

ಜ್ವಾಲಾಂಗಿಯ ಜ್ವಾಲಾಹಸ್ತವದು ಅವನ ಮಸ್ತಕವನು ಮುಟ್ಟಿ ಮುಂಗುರುಳ
ಮೀಟಿರಲು ಮೂಡಿತ್ತೊಂದು ಮಹಾದ್ಭುತ.
ಹಿಂಸ್ರಜಲದ ಹಿರಿಕಾಲುವೆಯ ಹಿಂದೆ ಹೆಬ್ಬಾಗಿಲೊಂದು ಹುಟ್ಟಿ ಹೊದರಿರುವ
ಹಿರಿಲೋಕದೆಡೆಗದು ಹೊರಚಾಚಿತ್ತು.
ಅವಳೊಂದು ಸ್ಪರ್ಶಕೆ ಧೀಮಂಡಲದಿ ಧಿಮ್ಮೆಂದು ಧುಮುಗುಟ್ಟಿರಲು
ದಿಗ್ಗೇಡಿಯಾದವನು
ದೂರ ದಿಗಂತದೆಡೆ ದಿಟ್ಟಿಯ ನೆಟ್ಟಿರಲು ತಾನಿಂತ ತಾಣವದು ತಾರಾಲೋಕದೆಡೆಗೇರಿ
ಮರೆಯಾಗಿತ್ತು.
ತನ್ನಂಕಿತವದು ತಳಕೊತ್ತಿ ತಾಕಲಾಡುತಿರಲು ತೋರಿತ್ತೊಂದು ತಮಸ್ಸಿನಲಿರುವರ
ತವರು ನೆಲ.
ನೋಡನೋಡುತ್ತಿದ್ದಂತೆ ನೂರಾಳು ನೀರಿನೊಳು ನರಳುತಿಹರ ನೆಲೆಯಿಂದ
ನೇರವಿಳಿದು
ನೇರಾನೇರವಿಹ ನೆಲವೊಂದರಲಿ ನಿಂತು ನಿಟ್ಟುಸಿರಿಟ್ಟು ನೋಡಿದನವ. ನಿಂತಲ್ಲೇ
ನಿರೀಕ್ಷಿಸಿದವನ.
ಹೆಸರಿಗೊಂದು ಹೂವಿಲ್ಲದ ಹಿರಿದಾಣವದು ಬರಿಯ ಮಂದ್ರವಿಹ ಮಬ್ಬು
ಪಾಚಿಗಳಿಂದ ತುಂಬಿ ತೂಕಡಿಸಿತ್ತು.
ಸುತ್ತೆಲ್ಲವನು ಸೂರೆಗೈದ ಸಮತಟ್ಟಾದ ಸೀಮೆಯಲಿ ಸುಗೋಚರವಿಹವು
ಸಂಕಟದಲಿಹ ಸಹಸ್ರಾರು ಸೌಮ್ಯವದನಗಳು.
ಪುರುಷ ವೃಷಭರೊಲು ಗಂಡೆದೆಯಗುಂಡಿಗೆಯಿಹ ಗಂಡಾಳುಗಳಲ್ಲಿ
ಗಮಿಸುತಿಹರು,
ಪೃಷ್ನಿಗರ್ಭರನು ಪಡೆಯದ ಧೇನುವಿನೊಲು ಧೇನಿಸುತಿಹ ತಾಯಂದಿರಲ್ಲಿ
ತಿರುಗುತಿಹರು,
ಸೌಂದರ್ಯದೊಂದು ಸಂಪೂರ್ಣಾಂಶವನೇ ಸೂರೆಗೈದ ಸುಂದರಾಂಗಿಯರಲ್ಲಿ
ಸುಗೋಚರರಿಹರು,
ನೆತ್ತಿಮೇಲೆ ನೆರೆದ ನವಿರ್ ಕೇಶಗಳ ಕಳೆದುಕೊಂಡು ಬರಿತಲೆಯ ಬೊಕ್ಕರಾಗಿ
ಭ್ರಮಿಸುತಿಹ

ಬಲವಿರದ ಬಾಲಕರಲ್ಲಿ ಕವಿದ ಕರಾಳವಿಹ ಕತ್ತಲಿನೊಳಗೆ ಬತ್ತಲಾಗಿ ಭವಿಸುತಿಹರು,
ಮೊರೆಯದ ಮಳೆಗಾಗಿ ಮರುಗಿ ಮಂಕಾಗಿ ಮೊಗ್ಗೆಯರಳದಿಹ ಮಲರಿನಂತೆ
ಬಲವಿರದ ಬಾಂಧವರಲ್ಲಿ ಬವಣೆಗಟ್ಟಿಹರು.
ಅಂತಾಗಿ ಮುಂತಾಗಿ ಸಾಂತ ನಿತಾಂತವಾಗಿ ನೀರವತೆಯೇ ನಿರಂತರವಾಗಿ
ಮೌನವೇ ಮಹಾಂತವಾಗಿ
ಮಡಗಿರುವ ಮಬ್ಬಿನೊಳಗಣ ನಿಶ್ಯಬ್ದದ ನಿಶಾವಾರಿಧಿಯೊಳಗೆ ನೇರವಿಳಿದು
ನಿಂದನವ ರುರು.
ಅನಿತರೊಳು ಬೀಸುತಿಹ ಸೂಸುಗಾಳಿಯ ಹಾಸಿನಲಲೆದು ಉಸಿರಿಡುತಿಹ
ಆತ್ಮವೊಂದು
ರುರುವಿನ ಕಾರ್ಮಣವ ತಾಕಿ ಮುಂದೋಡಿತ್ತು. ಹೊಡೆಮರಳಿತ್ತು,
ಹೊಲಗದ್ದೆಗಳೆಡೆಗೇರಿತ್ತು.
ತೆನೆಬಿಟ್ಟು ತೊನೆದು ತೂಗಿ ಜೋಕಾಲಿಯಾಡುತಿಹ ಜೋಳದ ಜಮೀನಿನೊಳು
ಜರಿದೋಡುವ
ಜಂಗಮವಾಯುವಿನಂತದು ವಿಹರಿಸಿತ್ತು. ವರ್ಧಿಸುವ ವೇಗದೊಂದಿಗದು
ಒಂದಾಗಿತ್ತು. ಮತ್ತೆ ಮುಂಬರಿದಿತ್ತು.
ಅಕಾಯವಾಗಿ ಮೂಕವಿಹವಿ ಲೋಕದಲಿ ತನ್ನ ಕಾಯವನೇ ತಾಕಿ ತಲ್ಲಣಗೊಳಿಸಿಹ
ಮಾಯಕದೀ ಕಾಯಕವನು
ಕಾಣಲೆಂದವನು ಕಣ್ದೆರೆದನು, ಕೇಳಲೆಂದವನು ಕಿವಿಗೊಟ್ಟನು. ಕಾರ್ಮಣನಿವನ
ಕಾರ್ಯವನು ಕಂಡವನನು
ಕುಚೋದ್ಯಗೊಳಿಸಿ ಕಟ್ಟಾಡಿಸಲೆಂದಲ್ಲಿ ಬಂದವನ ಮೈಯ ಮುಟ್ಟಿ, ಮೊಗವ
ಮೀಟಿ,ಮೌನದಿಂದವನ
ಮುಂಗುರುಳ ಮಡಿಸಿ,ನಿಲುವಂಗಿಯ ನುಡಿಸಿ, ನಿಂದವನೆದುರು ನಿಟ್ಟುಸಿರನಿಟ್ಟು
ನೂಕಿದವವು ನೂರಾತ್ಮಗಳು.
ಅದೃಶ್ಯವಾಗಿ ಅಲವತ್ತುಕೊಳುತ ಅವನೆದುರು ಆಟವಾಡುತಿಹ ಅನಂತಾತ್ಮಗಳ
ಅಂತಃಸತ್ವವನರಿತವುಗಳನು
ಉದ್ಧರಿಸಲೆಂದಲ್ಲಿ ಉರು ಹಾಕಿದವನೆದುರು ನೆರೆದು ನಿಂತು ನೂರ್ಮಾತುಗಳ
ನುಡಿಯಲೆಂದು ನೇಮವನಿತ್ತ, ಹರಕೆಯನಿತ್ತ

ಹರೆಯದ ಹೆಣ್ಣಾತ್ಮಗಳೂ, ಹಸಿದ ಹಸುಳೆಯಾಗಿಯೂ ಮೊಲೆಯುಣುವ
ಮಹಾಭಾಗ್ಯವಿರದೆ ಮಡಿದ ಮಕ್ಕಳಾತ್ಮಗಳೂ
ಮೂಕಮರ್ಮರದಾ ಮಹಾಲಯದೊಳಗೆ ಮೊದಲಿಗನಾಗಿಳಿದ ಮಾನವನೆದುರು
ಮಂಡಿಯೂರಿ ಮಾತನಾಡಿದವು.
ಅವನಕ್ಷಿಯೆದುರು ಸಾಕ್ಷಿಯಾಗಿ ಭಿಕ್ಷೆಯಿಡುತಿಹ ಲಕ್ಷೋಪಲಕ್ಷರನು ಲಕ್ಷ್ಯಗೊಟ್ಟು
ಈಕ್ಷಿಸಿರಲವನ ವಕ್ಷಸ್ಥಲವೇ ಒಡೆದಿತ್ತು.
ಬತ್ತಿದ ಬಾವಿಯೊಳಗಿಂದ ಒತ್ತರಿಸಿ ಬಂದವನ ಕುತ್ತಿಗೆಯನೇ ಮುತ್ತಿದೊಲಾಗಿರಲು
ಸತ್ತವರಿಗಾಗೆಂದು ಅತ್ತು ಕತ್ತೆತ್ತಿದನವ.
ಕೂಡಿದ ಕರಾಳದೇಹಿಗಳಲಿ ಕಳೆದೋದ(ಕರಗಿರುವ) ಕಾಂತೆಯನು
ಕಂಡುಕೊಳಲೆಂದಲ್ಲಿ ಕೂಗಿ ಕಂಬನಿ ಮಿಡಿದನವ,
"ಸಂತಸದ ಸಾರ್ವಭೌಮತೆಯನು ಸವಿದು, ದುಃಖದ ದಳ್ಳುರಿಯೊಳಗೆ ದಣಿದು,
ಸಮಸಮವಾಗಿ ಸಾರ್ವತ್ರಿಕದಲಿಹ ಸುಖದುಃಖದ
ಸಂಸಾರಸಾರೋದಯದಿಂದಿಳಿದು
ನೀರವತೆಯೇ ನಿರಂತರವಿಹ ನೀರಾಳದ ನೆರಳಿನೊಳಗೆ ನರಳುತಿಹ ನರಾತ್ಮರೇ,
ನೆತ್ತಿಮೇಲಿನ ನೆಲೆಯಿಂದ ನೇರವಿಳಿದಿಲ್ಲಿ ನಿಮ್ಮೊಡನೆ ನಡೆಯುತಿಹಳೆನ್ನ ನೀರೆ.
ಸತ್ತು ಸಾವಿನೆಡೆಗೋಡಿದ ಸುಮಂಗಲಿಯರಲ್ಲೇ ಸುಂದರಾಂಗಿಯಾದೆನ್ನ ಸಖಿಯ
ಸುಲಲಿತವಿಹ ಸುನಾಮವದನಾ ಸೂರ್ಯರಶ್ಮಿಯೂ ಸ್ಮರಿಸುವುದು. ಸ್ಫುರಿಸುವುದು.
ಕುಹುಗುಟ್ಟುವ ಕೋಕಿಲದೊಲಿಹ ಕಂಠಸಿರಿಯ ಕನ್ಯೆಯವಳನಿಲ್ಲಿ ಕರೆತಂದು
ಕರಾಳದೊಳಗಿಲ್ಲಿ ಕೂಡಿಟ್ಟ ತಾಣವದನು ತೆರೆದು ತೋರಿಸಿರಿ. ದಾರಿಬೆಳಕನಿತ್ತೆನ್ನ
ದಯಪಾಲಿಸಿರಿ."
ಸುಂದಾಗಿ ಮಂದಾಗಿ ಮುಂದಡಿಯಿಡುವ ಮಂದಮಾರುತವದು ಅವನೊಂದು
ಮಾತನು ಮರೆತು ಮುಂದೋಡಿತ್ತು.
ನಿಲಯನಿವಾಸಿನಿಯ ನೆನೆದು ನಿರಾಳಕಿಳಿದವನ ನಿರ್ಧಾರವನೇ ನಿರಾಸಕ್ತಿಯ
ನಿಂದನೆಯನಿತ್ತದನು ನಿಷ್ಪ್ರಯೋಜಕಗೊಳಿಸಿತ್ತು.
ಕಲ್ಯಾಣವತಿಯನು ಕರೆದೊಯ್ಯಲೆಂದಿಲ್ಲಿ ಕೆಳಗಿಳಿದವನ ಕಂಬನಿಯ
ಕಾಲುವೆಯದವನ ಕಪೋಲಕಿಳಿದು ಕಲಮಲಗೊಂಡಿರಲು,
ನಿಶ್ಶೇಷವಿಹ ನೇತ್ರಗಳನವನೆಡೆಗೆ ನೆಟ್ಟು, ನಿಶ್ಶಬ್ದದ ನಿರರ್ಥಕತೆಯನೇ
ಅವನೆದುರಿಗಿಟ್ಟು, ಮಾತಿರದ ಮೌನದಲವನನು ಬಿಟ್ಟು,

ಮುಗಿದ ಮಂದಹಾಸದಲಿ ಸಿಗದ ಸುಖದಾಗರವನು ಶೋಧಿಸಿ ಸುಮ್ಮನಿರಲು,
ಶೋಕದಿ ಸಮ್ಮೋಹಿತನಾಗುತುಸುರಿದನವ,
"ಅಯ್ಯೋ ಮರುಳೇ! ಮುಸುಕಿರುವೀ ಮಬ್ಬಿನೊಳು ಬೊಬ್ಬಿರಿದು ಬರಿದೇ ಬಾಯ್ಬಡಿಯುತಿಹೆನು.
ಸಾವಿನ ಸೀಮೆಯಲಿ ಸುಳಿದು ಸುಖಾಸುಮ್ಮನೆ ಸೊರಗಿ ಸಣ್ಣಾಗುತಿಹೆನು.
ಹಲುಬಿ ಹಣ್ಣಾಗುತಿಹೆನು.
ಗೊತ್ತು ಗುರಿಯಿಲ್ಲದೀ ಗುಂಭದಾಳದಲಿ ಗಮಿಸುತಿಹ ಗಂಡುಹೆಣ್ಣಾಳುಗಳಿರುವೀ ಗುಂಪಿನಲಿ
ಪ್ರಾಣಾಂಗಿಯ ಪ್ರಾಣವಾಯುವದು ಪ್ರವಹಿಸಿದ್ದರೆ ಪ್ರತೀಕ್ಷಿಸುವ ಪ್ರಮೇಯವೇಪಜ್ಜಳಿಸದು.
ಮಡಿದಿರುವ ಮಹಾತ್ಮರ ಮಧ್ಯದಲಿಹ ಮಾನವನೋರ್ವನನೇ ಮುಟ್ಟಲೆಂದೋಡಿ ಬಂದವಳು ಮುತ್ತುವಳು.
ನನ್ನೆದೆಗೆ ಅವಳೆದೆಯ ತಂದೊತ್ತುವಳು. ಕಂಬನಿಯ ಕಾಲುವೆಯನೇ ಕರೆದು ಅತ್ತು ಕತ್ತೆತ್ತುವಳು.
ಕಳೆದೋದ(ಕಂತಿರುವ)ಕಾಂತೆಯವಳು ಕರೆದೊರೆದ ಕಣ್ಣಾಲಿಗಳಿಂದೆನ್ನ ಕಂಡು ಕಲಮಲಗೊಳುತೋಡಿ ಬಂದು ಕೂಡುವಳು.
ಸಾವೆಂಬ ಸಾಹುಕಾರನೋರ್ವ ಸುಳಿದವಳ ಸುಮಧುರವಿಹ ಸ್ವರವನು ಸೂರೆಗೈದು ಸೆಳೆದೊಯ್ದರೂ,
ಮನಾದಳದಿ ಮುಲುಗುಟ್ಟುವ ಮೂಕಮರ್ಮರದಿಂದವಳೆನ್ನ ಮನಕೆ ಮಾತಿನ ಮಣಿಮಾಲೆಯನೆ ಮುಡಿಸುವಳು.
ಕಳೆದೋದ ಕಾಂತೆಯನು ಕರೆತರಲೆಂದಿಲ್ಲಿ ಕಾಲಿಟ್ಟ ಕಂಕಾತಕೇತುಗಳ ಕಾವಳದಲಿ ಕೈಹಿಡಿದೆನ್ನ ನಡೆಸುವಳು."
ಅಕಾಲದಲೇ ಕಾಲವಾದ ಕುಲವೆಲ್ಲ ಕಲಮಲಗೊಳುತಿಹ ಕಾಲದಾಯಾಮದಿಂದ ಕಾಲ್ದೆಗೆದು ಕೆಳಗಿಳಿದನವ.
ಸುತ್ತೆಲ್ಲ ಸುತ್ತಿ ಸುಳಿಯುತಿಹ ಸುಂದರಾತ್ಮಗಳೆಲ್ಲ ನೆಟ್ಟನೇತ್ರಗಳಿಂದವನ ನೋಡುತಿರಲು ನೇರವಿಳಿದು ನಡೆದನವ.

(ಸಶೇಷ)


# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ.ನಗರ 1ನೇ ಹಂತ, ಬೆಂಗಳೂರು

ದಿನಾಂಕ 24ನೇ ಏಪ್ರಿಲ್ 2024 ಬುಧವಾರ ಶ್ರೀ ಅರವಿಂದೋ ಸಂಕೀರ್ಣ ಟ್ರಸ್ಟ್ ವತಿಯಿಂದ ಶ್ರೀಮಾತೆಯವರು ಪಾಂಡಿಚೇರಿಗೆ ಆಗಮಿಸಿದ ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 7.30 ರಿಂದ 7.50 ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರ ವಿತರಿಸಲಾಯಿತು.

"The Significance of Special Days" ವಿಷಯ ಕುರಿತು ದಿನಾಂಕ 15ನೇ ಏಪ್ರಿಲ್ 2024 ರಿಂದ 5ನೇ ಜೂನ್ 2024 ವರೆಗೂ ಶ್ರೀ ಅರವಿಂದ ಸಂಕೀರ್ಣದ ಸಾಂಸ್ಕೃತಿಕ ಸಭಾ ಭವನದಲ್ಲಿ ಫೋಟೋ ಚಿತ್ರ ಪ್ರದರ್ಶನ ಆಯೋಜಿಸಲಾಗಿದೆ.



ಫೋಟೊ: ಇಮೇಜಿಂಗ್ ಸಾವಿತ್ರಿ

ಸೃಷ್ಟಿ–ಪ್ರಳಯಗಳು ಶಸ್ತ್ರ ಸನ್ನದ್ಧಗೊಂಡೀಗ ನೃತ್ಯ–ಸೂತ್ರ

– ಪುಟ್ಟು ಕುಲಕರ್ಣಿ

**RNI No. 22511/1971**
No. of Pages **76 + 4 (Cov. Page)**
KAR Reg No.: RNP/KA/BGS/368/2024-2026
Licensed to post without prepayment License No.PMG BG/WPP-409/2024-2026
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2026
Licensed to Post at BG PSO, Mysuru Road, Bengaluru - 560 026



ಫೋಟೋ: ಇಮೇಜಿಂಗ್ ಸಾವಿತ್ರಿ

ಬಾಣಂತಿಕೋಣೆಯವಧಿ; 40 ದಿನದ ಮಹತ್ವ

**– ಪುಟ್ಟು ಕುಲಕರ್ಣಿ**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.